ಈಚೆಗೆ ನಮ್ಮನ್ನಗಲಿದ
ಕನ್ನಡದ ಪ್ರಮುಖ ಬರಹಗಾರ

**ಪಿ.ಲಂಕೇಶ್**

ಅವರಿಗೆ

ನಾಟಕಕಾರ, ಲೇಖಕ

**ಎಂ.ಎಸ್.ಕೆ. ಪ್ರಭು**

ಅವರಿಗೆ

**ನೀನಾಸಮ್ ಶ್ರದ್ಧಾಂಜಲಿ**

# ನೀನಾಸಮ್ ವರದಿಗಳು

## ನೀನಾಸಮ್ ರಂಗಶಿಕ್ಷಣ ಕೇಂದ್ರ – ಚಟುವಟಿಕೆಗಳು

ನೀನಾಸಮ್ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ೧೯೯೯ರ ಡಿಸೆಂಬರ್ ೨೩ ರಿಂದ ೨೬ರ ವರೆಗೆ ನಾಲ್ಕುದಿವಸ ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರಂ' ನಾಟಕವನ್ನು ಶಿವರಾಮ ಕಾರಂತ ರಂಗಮಂದಿರದಲ್ಲಿ ಪ್ರದರ್ಶಿಸಿದರು. ಈ ನಾಟಕವನ್ನು ಕೆ.ವಿ. ಅಕ್ಷರ ನಿರ್ದೇಶಿಸಿದ್ದರು. ಇದೇ ಡಿಸೆಂಬರ್ ಅವಧಿಯಲ್ಲಿ ರಂಗಶಿಕ್ಷಣ ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಅಂಗವಾಗಿ ಪ್ರಾಥಮಿಕ ಶಾಲೆಯ ಮಕ್ಕಳಿಗಾಗಿ ರಚಿಸಿ ರಂಗಕ್ಕೆ ಸಿದ್ಧಪಡಿಸಿದ 'ಮಂಡೂಕ ಸ್ವಾಮಿಯ ಕಾಶಿಯಾತ್ರೆ' ಎಂಬ ಮಕ್ಕಳ ನಾಟಕದ ಪ್ರದರ್ಶನವು ಡಿಸೆಂಬರ್ ೩೦ರಂದು ನಡೆಯಿತು. ೧೫ ದಿನಗಳ ಮಧ್ಯಾವಧಿ ರಜೆ ಮುಗಿಸಿ ಬಂದನಂತರ ವಿದ್ಯಾರ್ಥಿಗಳಿಗಾಗಿ ಶ್ರೀ ಚೆನ್ನಕೇಶವ ಅವರಿಂದ ರಂಗಸಜ್ಜಿಕೆ ಹಾಗೂ ವಸ್ತ್ರಾಲಂಕಾರ ವಿನ್ಯಾಸ ತರಗತಿಗಳೂ, ಸಿ.ಆರ್. ಜಂಬೆಯವರ ನಿರ್ದೇಶನದಲ್ಲಿ ಷೇಕ್ಸ್‌ಪಿಯರ್‌ನ 'ವೆನಿಸ್‌ನ ವರ್ತಕ' ನಾಟಕದ ತಯಾರಿಯೂ ನಡೆಯುತ್ತಿವೆ. ಅಲ್ಲದೆ, ಜನವರಿ ೧೭ರಿಂದ ೩೧ರ ವರೆಗೆ ಶ್ರೀ ನಿ.ನಾ. ಮಧ್ಯಸ್ಥರಿಂದ ರನ್ನನ 'ಗದಾಯುದ್ಧ' ವಾಚನವೂ, ಜನವರಿ ೨೦ರಿಂದ ೨೬ರ ವರೆಗೆ ಒಂದುವಾರ ಕಾಲ ಪ್ರೊ. ಜಿ.ಕೆ. ಗೋವಿಂದರಾಯರಿಂದ ಷೇಕ್ಸ್‌ಪಿಯರ್ ನಾಟಕಗಳ ಕುರಿತು ವಿಶೇಷ ಉಪನ್ಯಾಸ ಮಾಲಿಕೆಯೂ ನಡೆಯಿತು. ಈ ನಡುವೆ, ಡಿಸೆಂಬರ್ ೧೩ರಂದು ಶ್ರೀಮತಿ ಲಕ್ಷ್ಮೀ ಚಂದ್ರಶೇಖರ್ ಅವರಿಂದ 'ಕೇವಲ ಹೆಣ್ಣು' ಎಂಬ ಏಕವ್ಯಕ್ತಿ ಪ್ರದರ್ಶನ, ಜನವರಿ ೧೪ರಂದು ಡಾ. ಪ್ರಕಾಶ ಗರೂಡ ನೇತೃತ್ವದ ಗೊಂಬೆಮನೆ, ಧಾರವಾಡ ತಂಡದವರಿಂದ- ಮಕ್ಕಳಿಗಾಗಿ ರೂಪಿಸಿದ – 'ಕೆಂಪುಹೂ' ಮತ್ತು 'ಗಾರ್ದಭ ಮನುಷ್ಯ ಪ್ರಹಸನ' ಗಳೆಂಬ ತೊಗಲುಗೊಂಬೆಯಾಟದ ಪ್ರದರ್ಶನಗಳು ಹಾಗೂ ಜನವರಿ ೧೬ರಂದು ಬೆಂಗಳೂರಿನ ರಂಗಸಂಪದ ತಂಡದವರಿಂದ ಶ್ರೀ ಆರ್. ನಾಗೇಶ್ ನಿರ್ದೇಶನದ 'ಒಥೆಲೊ' ಪ್ರದರ್ಶನ – ಮೊದಲಾದ ಕಾರ್ಯಕ್ರಮಗಳೂ ನಡೆದವು.

ಕರ್ನಾಟಕ ಸರಕಾರದ ಗುಬ್ಬಿ ವೀರಣ್ಣ ಪ್ರಶಸ್ತಿಗೆ ಪಾತ್ರರಾದ
ವೃತ್ತಿರಂಗಭೂಮಿಯ ಹಿರಿಯ ನಾಟಕಕಾರ

**ಶ್ರೀ ಪಿ.ಬಿ. ಧುತ್ತರಗಿ**

ಅವರಿಗೆ

ನೀನಾಸಮ್ ಅಭಿನಂದನೆಗಳು

# ವಿಶ್ವಾತ್ಮಕ ದೇಶಭಾಷೆ


## ಷೆಲ್ಡನ್ ಪೊಲಾಕ್

## ಕನ್ನಡಕ್ಕೆ: ಅಕ್ಷರ ಕೆ.ವಿ.


*ಲೇಖಕ ಷೆಲ್ಡನ್ ಪೊಲಾಕ್ ಅವರು ಅಮೇರಿಕಾದ ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಮತ್ತು ಭಾರತೀಯ ಅಧ್ಯಯನಗಳಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಸಂಸ್ಕೃತ ಮತ್ತು ಹಲವು ದೇಶಭಾಷೆಗಳನ್ನು ಕುರಿತು ಇವರು ಬರೆದ ಹಲವಾರು ಬರಹಗಳು ವಿಶ್ವಾದ್ಯಂತ ಬೇರೆಬೇರೆ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಪ್ರಕಟವಾಗಿ ಪ್ರಸಿದ್ಧವಾಗಿವೆ.*

*ಅವರ ಆಯ್ದ ಬರಹಗಳ ಕನ್ನಡ ಅನುವಾದದ ಒಂದು ಸಂಕಲನವು ಸದ್ಯವೇ ಅಕ್ಷರ ಪ್ರಕಾಶನದ 'ಡಿ.ಆರ್. ನಾಗರಾಜ್ ನೆನಪಿನ ಅಕ್ಷರ ಚಿಂತನಮಾಲೆ'ಯಲ್ಲಿ ಪ್ರಕಟವಾಗಲಿದೆ. ಅದಕ್ಕಾಗಿ ಸಿದ್ಧಪಡಿಸಲಾದ ಒಂದು ಲೇಖನ ಇದು.*


*ಈ ಲೇಖನವನ್ನು ಪುನರ್‌ಮುದ್ರಣ-ಪ್ರಸಾರ ಮಾಡಲು ಮೂಲ ಲೇಖಕರ ಅನುಮತಿ ಪಡೆಯುವುದು ಅವಶ್ಯ.*


ದಕ್ಷಿಣ ಏಶಿಯಾದಾದ್ಯಂತ, ಕ್ರಿ.ಶ. ೧೦೦೦ದಿಂದ ತೊಡಗಿ ಬೇರೆಬೇರೆ ಕಾಲಾವಧಿಗಳಲ್ಲಿ – ಹೆಚ್ಚಿನ ಕಡೆ ಕ್ರಿ.ಶ. ೧೫೦೦ರ ಹೊತ್ತಿಗೆ – ಅಲ್ಲಿಯ ಬರಹಗಾರರು ಸಾಹಿತ್ಯಕ ಅಭಿವ್ಯಕ್ತಿಗೆ ಸ್ಥಳೀಯ ಭಾಷೆಗಳನ್ನು ಬಳಸಲು ಆರಂಭ ಮಾಡಿದರು; ಅಲ್ಲಿಂದ ಮುಂಚಿನ ಸುಮಾರು ೧೦೦೦ ವರ್ಷಗಳಲ್ಲಿ ಸಾಹಿತ್ಯಕವಾಗಿ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡಿದ್ದ ಸ್ಥಳೀಯೇತರ ಭಾಷೆಗಳನ್ನು ಬಳಸುವ ತಮ್ಮ ರೂಢಿಯನ್ನು ಬಿಟ್ಟುಕೊಟ್ಟರು. ಇದು ಒಂದು ಅತ್ಯಂತ ಪ್ರಮುಖವಾದ ಸಾಂಸ್ಕೃತಿಕ ವಿದ್ಯಮಾನ; ಹಾಗೆಯೇ ಇದು ಆಯಾ ಪ್ರಾಂತ್ಯಗಳು ತಮ್ಮ ಎರಡು ಸಹಸ್ರಮಾನಗಳ ಇತಿಹಾಸದಲ್ಲಿ ಕಂಡ ಪ್ರಾತಿನಿಧಿಕ ಬದಲಾವಣೆಯೂ ಹೌದು. ಈ ಬದಲಾವಣೆಗಳು ನಡೆದದ್ದು ಎರಡು ಪ್ರಮುಖ ಮಹಾಪಲ್ಲಟಗಳ ನಡುವೆ – ಮೊದಲನೆಯದು, ಮೊದಲ ಸಹಸ್ರಮಾನದ ಆರಂಭದಲ್ಲಿ ಒಂದು ವಿಶ್ವವ್ಯವಸ್ಥೆ ನಿರ್ಮಿತವಾದದ್ದಾದರೆ, ಇನ್ನೊಂದು ಅದಕ್ಕಿಂತ ಭಿನ್ನವಾದ ಇನ್ನೊಂದು ವಿಶ್ವವ್ಯವಸ್ಥೆಯ ನಿರ್ಮಿತಿಯ ಪ್ರಕ್ರಿಯೆ; ಅದು, ಎರಡನೆಯ ಸಹಸ್ರಮಾನದ ತುದಿಗೆ ವಸಾಹತೀಕರಣ ಮತ್ತು ಜಾಗತೀಕರಣಗಳ ಮೂಲಕ ರೂಪುಗೊಂಡಂಥದು.



ದಕ್ಷಿಣ ಏಶಿಯಾದಲ್ಲಿ ನಡೆದ ಈ ದೇಶಭಾಷೆಗಳ ಉತ್ಥಾನದ ಪ್ರಕ್ರಿಯೆಯು ಅಲ್ಲಿಯ ಮಧ್ಯಯುಗದ ಕಡೆಯ ಘಟ್ಟದಲ್ಲಿ – ಅಥವಾ ಅದನ್ನು ಆರಂಭದ ಆಧುನಿಕತೆಯ ಘಟ್ಟ ಎಂದೂ ನಾವು ಕರೆಯಬಹುದೇನೋ – ನಡೆದ ಅತ್ಯಂತ ಮಹತ್ವದ ಸಾಂಸ್ಕೃತಿಕ ಪಲ್ಲಟ. ಇದರ ಬಗ್ಗೆ ಅಭ್ಯಾಸಗಳು ನಡೆದದ್ದು ತೀರಾ ಕಡಿಮೆ. ಇಂಥ ಪ್ರಕ್ರಿಯೆಯ ಒಂದು ತಾರ್ಕಿಕ ವಿವರಣೆಯನ್ನು ಯಾವುದೇ ಒಂದು ಪ್ರಾಂತ್ಯಕ್ಕೆ ಸೀಮಿತವಾಗಿಯೂ ಇದುವರೆಗೆ ಮಾಡಲಾಗಿಲ್ಲ. ಅಥವಾ ಇಡಿಯ ದಕ್ಷಿಣ ಏಶಿಯಾಕ್ಕೆ ಅನ್ವಯವಾಗುವಂತೆ, ಇನ್ನೂ ಮುಂದುವರೆದು, ಇದಕ್ಕೆ ಸಮಾನಾಂತರ ಪ್ರಕ್ರಿಯೆಗಳು ಜರುಗಿರುವ ವಿಶಾಲವಾದ ಯೂರೇಶಿಯಾದ ವ್ಯಾಪ್ತಿಯಲ್ಲಿ ಕೂಡಾ ಯಾವುದೇ ಅಭ್ಯಾಸಗಳು ಈ ಪ್ರಕ್ರಿಯೆಯನ್ನು ವಿವರಿಸಿಲ್ಲ. ಈ ಪ್ರಕ್ರಿಯೆಯಲ್ಲಿ ಕಾಣುವ ಯಾವುದೇ ಪ್ರಾಥಮಿಕ ಸಮಸ್ಯೆ ಯಾ ಸಂಗತಿಯನ್ನು ಕುರಿತಂತೆ ವಾದಗಳು ಮಂಡಿಸಲ್ಪಟ್ಟು ಸೈದ್ಧಾಂತಿಕವಾದ ಅರಿವು ಕೂಡಾ ಇನ್ನೂ ಜಾಗೃತವಾಗಿಲ್ಲ. ಎಲ್ಲಕ್ಕಿಂತ ಕಷ್ಟಕರವಾದ ಸಂಗತಿಯೆಂದರೆ, ಈ ಕಾಲ-ದೇಶಗಳಲ್ಲಿ ನಡೆದ ರಾಜಕೀಯ ವಿದ್ಯಮಾನಗಳ ನಂಬಲರ್ಹವಾದ ನಿರೂಪಣೆ ಕೂಡಾ ಇನ್ನೂ ಲಭ್ಯವಿಲ್ಲ. ಹಾಗಾಗಿ, ಈ ರಾಜಕೀಯ ವಿದ್ಯಮಾನಗಳಿಗೂ ಮತ್ತು ಸಾಂಸ್ಕೃತಿಕ ಬದಲಾವಣೆಗಳಿಗೂ ನಡುವೆ ಇರಬಹುದಾದ ದೂರದ ಸಂಬಂಧವನ್ನೂ ನಾವು ಗ್ರಹಿಸಲಾಗಿಲ್ಲ. ಅರ್ಥಾತ್, ಆಧುನಿಕ ಪೂರ್ವ ಜಗತ್ತಿಗೆ ಸಂಬಂಧಿಸಿದಂತೆ, ಇಂಥ ಸಂಬಂಧಗಳನ್ನು ಅರ್ಥೈಸಲು ಅಗತ್ಯವಾಗುವ ಅಧಿಕಾರ ಮತ್ತು ಸಂಸ್ಕೃತಿಗಳ ನಡುವಿನ ಸಂಬಂಧದ ಸಿದ್ಧಾಂತವೊಂದು ನಮಗಿನ್ನೂ ದಕ್ಕಿಲ್ಲ.

ಪ್ರಸ್ತುತ ಬರಹದ ಮಿತಿಯಲ್ಲಿ ನಾನು ಮಾಡಬೇಕೆಂದಿರುವುದು ಇಷ್ಟು: ಮೊದಲನೆಯದಾಗಿ, ಸಾಹಿತ್ಯಕ ಸಂಸ್ಕೃತಿಯಲ್ಲಿ ವಿಶ್ವಾತ್ಮಕತೆ ಮತ್ತು ದೇಶೀಯತೆಗಳ ವಿಶ್ಲೇಷಣೆಗೆ ಸಂಬಂಧಪಟ್ಟ ಕೆಲವು ಸ್ಥೂಲ ತಾತ್ವಿಕ ಸಂಗತಿಗಳನ್ನೂ ಹಾಗೂ ಎರಡನೆಯದಾಗಿ, ಅವುಗಳ ಐತಿಹಾಸಿಕ ಸಂದರ್ಭಕ್ಕೆ ಸಂಬಂಧಿಸಿದ ನಿರ್ದಿಷ್ಟ ಪ್ರಶ್ನೆಗಳನ್ನೂ ಗ್ರಹಿಸಲು ಪ್ರಯತ್ನಿಸುವುದು. ದೇಶಭಾಷೆಯ ನಿರ್ಮಿತಿಯ ಪ್ರಕ್ರಿಯೆಯೇ ಮೂಲತಃ ಅದು ಯಾವ ಜಗತ್ತಿಗೆ ಪ್ರತಿಕ್ರಿಯೆಯಾಗಿ ರೂಪುಗೊಂಡಿತೋ ಆ ಜಗತ್ತನ್ನು ಅರ್ಥೈಸುವುದರ ಮೇಲೆ ಅವಲಂಬಿಸಿಕೊಂಡಿದೆ. ಈ ಕಾರಣಕ್ಕಾಗಿ ನಾನಿಲ್ಲಿ 'ಸಂಸ್ಕೃತ ವಿಶ್ವ'ವೆಂದು ಕರೆದುಕೊಳ್ಳುವ ಸಂಗತಿಯ ಮೂಲತತ್ವವನ್ನೂ ಅದರ ಸ್ಥೂಲ ಐತಿಹಾಸಿಕ ಹಿನ್ನೆಲೆಯನ್ನೂ ಕೊಡುತ್ತೇನೆ. ಮೇಲೆ ಹೇಳಿದ ನನ್ನ ಮೊದಲನೆಯ ಹುಡುಕಾಟದಲ್ಲಿ ನಾನು ಸಂಸ್ಕೃತ ಶಾಸನಗಳ ಉಗಮ ಮತ್ತು ವಿಕಾಸವನ್ನು ಗಮನಿಸುತ್ತೇನೆ; ಅದು ಆ ಕಾಲದ ಸಾಹಿತ್ಯ-ಸಂಸ್ಕೃತಿಗಳ (ಮತ್ತು ರಾಜಕೀಯ-

ಸಂಸ್ಕೃತಿಗಳ) ರೂಢಿಯನ್ನು ಬಿಂಬಿಸುವ ರೂಪಕ. ಎರಡನೆಯದಾಗಿ ನನ್ನ ಹುಡುಕಾಟವು ಸಾಂಸ್ಕೃತಿಕ ವ್ಯವಹಾರಗಳ ಮೂಲತತ್ವಗಳ ಆವರಣವನ್ನು ಕುರಿತದ್ದು; ಅದು ಆಯಾ ಕಾಲದ ಸಾಹಿತ್ಯ ಮತ್ತು ವಿಮರ್ಶೆಯ ಪ್ರಜ್ಞೆಯನ್ನು ರೂಪಿಸುವಂಥದು. ಈ ಎಲ್ಲ ಪ್ರಾಥಮಿಕ ಚರ್ಚೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ನಾನಿಲ್ಲಿ ಮಾಡ ಹೊರಟಿರುವುದು ಒಂದು ನಿರ್ದಿಷ್ಟ ದೇಶಭಾಷಾನಿರ್ಮಾಣದ – ಆರಂಭಕಾಲದ ಕನ್ನಡ ಭಾಷೆಯ – ವಿಶ್ಲೇಷಣೆ. ಇಲ್ಲಿ ವಿಶ್ವಾತ್ಮಕ ದೇಶಭಾಷೆಯ ನಿರ್ಮಾಣದ ಪ್ರಕ್ರಿಯೆಯ ಒಂದು ಮಾದರಿ ದೃಷ್ಟಾಂತ ಇದೆ; ಸಂಸ್ಕೃತವೆಂಬ ಜಾಗತಿಕ ಸ್ವರೂಪದ ಸಾಹಿತ್ಯ-ಸಂಸ್ಕೃತಿಯು ಹೇಗೆ ಸ್ಥಳೀಯ ಸ್ವರೂಪವನ್ನು ಪಡೆದುಕೊಂಡಿತೆಂಬುದಕ್ಕೆ ಉದಾಹರಣೆಯಿದೆ. ಈ ಚರ್ಚೆಯ ನಡುವೆಯೇ ಒಂದು ಸೀಮಿತವಾದರೂ ಪ್ರಾತಿನಿಧಿಕವಾಗಿರುವ ದೃಷ್ಟಾಂತದ ಮೂಲಕ ('ಮಾರ್ಗ' ಸಾಹಿತ್ಯಕ್ಕೆ ಸಂಬಂಧಿಸಿ ಬೆಳೆದುಕೊಂಡ ಸಾಹಿತ್ಯವಿಮರ್ಶೆಯ ಪ್ರಸ್ಥಾನದ ಇತಿಹಾಸವನ್ನು ಗುರುತಿಸುವ ಮೂಲಕ) ನಾನು ಇನ್ನೊಂದು ವಿಷಯವನ್ನೂ ತೋರಿಸಹೊರಟಿದ್ದೇನೆ. ಈ ಪ್ರಕ್ರಿಯೆಯಲ್ಲಿ ದೇಶಭಾಷೆಯು ವಿಶ್ವಾತ್ಮಕ ಭಾಷೆಯನ್ನು ಮರುಹೊಂದಾಣಿಕೆ ಮಾಡುತ್ತದೆಯಷ್ಟೇ ಅಲ್ಲ, ಈ ಪರಸ್ಪರ ಸಂಬಂಧದ ವ್ಯವಹಾರದಲ್ಲಿ ಇವೆರಡೂ ಒಂದು ಇನ್ನೊಂದನ್ನು ರೂಪಿಸುತ್ತ ಹೋಗುತ್ತವೆ. ಕಡೆಯದಾಗಿ ಈ ಬರಹವು ಸದ್ಯ ಲಭ್ಯವಿರುವ ಐತಿಹಾಸಿಕ ವಿವರಣೆಗಳು – ಅವು ಈಗಿರುವ ರೀತಿಯಲ್ಲಿ – ಯಾಕೆ ದೇಶಭಾಷೆಗಳ ಉತ್ಥಾನದ ಪ್ರಕ್ರಿಯೆಯನ್ನು ವಿವರಿಸಲು ಅಸಮರ್ಥ ಎಂಬುದನ್ನು ಕುರಿತು ಯೋಚಿಸುತ್ತದೆ; ಮತ್ತು ಈ ಕುರಿತು ಮುಂದೆ ನಡೆಯಬಹುದಾದ ಅಭ್ಯಾಸಗಳು ಎದುರಿಸಬೇಕಾದ ಸವಾಲುಗಳನ್ನು ಸೂಚಿಸುತ್ತದೆ. ಮುಖ್ಯವಾದ ತಾತ್ವಿಕ ಸವಾಲೆಂದರೆ, ಪಶ್ಚಿಮೇತರ ಜಗತ್ತಿನಲ್ಲಿ ಸಾಹಿತ್ಯ ಸಂಸ್ಕೃತಿಗೂ ಮತ್ತು ರಾಜಕೀಯ ಸಂಸ್ಕೃತಿಗೂ ನಡುವಿನ ಸಂಬಂಧವನ್ನು ಹೇಗೆ ಗ್ರಹಿಸುವುದೆಂಬ ಪ್ರಶ್ನೆ; ಅರ್ಥಾತ್, ಆಧುನಿಕಪೂರ್ವ ಜಾಗತೀಕರಣದ ಪ್ರಕ್ರಿಯೆಗಳನ್ನು ಹೇಗೆ ಅರ್ಥೈಸುವುದೆಂಬ ಪ್ರಶ್ನೆ.

## ದೇಶಭಾಷಾ ನಿರ್ಮಿತಿಯ ಪ್ರಕ್ರಿಯೆಯನ್ನು ಕುರಿತ ಊಹಾಸಿದ್ಧಾಂತ

ವಿಶ್ವಾತ್ಮಕ ಮತ್ತು ದೇಶಭಾಷೆಯ ನಿರ್ಮಿತಿಯ ಪ್ರಕ್ರಿಯೆಯನ್ನು ತಾತ್ವಿಕವಾಗಿ ಮತ್ತು ಐತಿಹಾಸಿಕವಾಗಿ ಅರ್ಥೈಸುವ ಸಾಧ್ಯತೆಗೆ ಪೂರ್ವದಲ್ಲಿ ನಾವೊಂದು ಊಹಾ ಸಿದ್ಧಾಂತವನ್ನು – ಹೈಪಾಥೆಸಿಸ್‌ನ್ನು – ರೂಪಿಸಿಕೊಳ್ಳುವ ಅಗತ್ಯವಿದೆ. ಆ ಊಹಾ ಸಿದ್ಧಾಂತದಲ್ಲಿ ಹಲವು ಅಂಗತತ್ವಗಳು ಅಡಕವಾಗಿದ್ದು ಅವನ್ನೆಲ್ಲ ನೇರವಾಗಿ



ನಿರ್ವಚಿಸುವುದಕ್ಕಿಂತ ಹೆಚ್ಚಾಗಿ ನಾವು ಅವುಗಳ ಐತಿಹಾಸಿಕ ಸ್ವರೂಪವನ್ನು ವ್ಯಾಖ್ಯಾನಿಸಬೇಕಿದೆ. ಆ ತತ್ವಾಂಶಗಳೆಂದರೆ – ಸಾಂಸ್ಕೃತಿಕ ಆಯ್ಕೆ, 'ದೇಶಭಾಷೆ'ಯ ಸಾಪೇಕ್ಷತೆ, ಸಾಹಿತ್ಯ ಸ್ವರೂಪ, ಬರವಣಿಗೆಯ ಐತಿಹಾಸಿಕ ಮಹತ್ವ, ಉಗಮವೆಂಬುದರ ಅರ್ಥ ಮತ್ತು ಸಮಾಜ-ಪಠ್ಯಗಳನ್ನೊಳಗೊಂಡ ಸಮುದಾಯ. ಈ ಪರಿಕಲ್ಪನೆಗಳನ್ನು ನಾನು ಇದೇ ಕ್ರಮದಲ್ಲಿ ಚರ್ಚಿಸುತ್ತೇನೆ.

## ಸಾಂಸ್ಕೃತಿಕ ಆಯ್ಕೆ

ಸಾಹಿತ್ಯಕ್ಕಾಗಿ ಬಳಕೆಯಾಗುವ ಭಾಷೆಯು ಸಹಜವಾಗಿ ಲಭ್ಯವಾಗುವಂಥದಲ್ಲ, ಆದು ಹಲವು ಪರ್ಯಾಯಗಳ ನಡುವಿನ ಒಂದು ಆಯ್ಕೆಯಾಗಿರುತ್ತದೆ. ಬೆನೆಡಿಕ್ಟ್ ಆ್ಯಂಡರ್‌ಸನ್ ತನ್ನ ವಿಷಾದಭರಿತ ಮಂಡನೆಯಲ್ಲಿ ಸೂಚಿಸುವಂತೆ ಒಟ್ಟೂ ಮನುಕುಲದ ಭಾಷಾವೈವಿಧ್ಯವೆನ್ನುವುದು ಅದೃಷ್ಟಾಧೀನವೇ ಆಗಿರಬಹುದು. ಆದರೆ ಸಾಹಿತ್ಯಕ ಭಾಷೆ ಹಾಗಲ್ಲ. ಅದರಲ್ಲಿ ವಿಧಿನಿಯಾಮಕವಾದದ್ದು, ಸ್ವಪ್ರಜ್ಞೆಗೆ ಸಿಲುಕದ್ದು ಮತ್ತು ವ್ಯವಸ್ಥಾಹೀನವಾದದ್ದು ಏನೂ ಇಲ್ಲ; ಸಾಹಿತ್ಯಕ ಭಾಷೆಯೆಂಬುದು ಒಂದು ಬುದ್ಧಿಪೂರ್ವಕ ನಿರ್ಮಿತಿ. ಆದ್ದರಿಂದ ಸಾಹಿತ್ಯಕವಾದ ದೇಶಭಾಷೆಗಳು ಮೊಳಕೆಗಳ ಹಾಗೋ ಚಿಟ್ಟೆಗಳ ಹಾಗೋ ತಟ್ಟನೆ 'ಉದ್ಭವಿಸು'ವಂಥವಲ್ಲ; ಅವು ನಿರ್ಮಾಣಗೊಳ್ಳುವಂಥವು. ಬಹಳಷ್ಟು ವಿದ್ವಾಂಸರು ಈ ಸಂಗತಿಯನ್ನು ಗಮನಿಸುವುದೂ ಇಲ್ಲ, ಈ ಮಾತನ್ನು ಮುಂದುವರೆಸುವುದೂ ಇಲ್ಲ. ಹಾಗೆ ಗಮನಿಸಿದ ಒಬ್ಬ ವಿದ್ವಾಂಸ ಬಾಖ್ತಿನ್; ಆತ ಇನ್ನ್ಯಾರಿಗಿಂತಲೂ ಹೆಚ್ಚು ಸ್ಪಷ್ಟವಾಗಿ ಹೇಳಿದ – ''ಕ್ರಿಯಾಶೀಲವಾದ ಸಾಹಿತ್ಯಭಾಷೆಯ ಒಂದು ಪ್ರಜ್ಞೆಯು ಎಲ್ಲ ಕಾಲದೇಶಗಳಲ್ಲೂ (ಅಂದರೆ, ಸಾಹಿತ್ಯವು ನಮಗೆ ಲಭ್ಯವಿರುವ ಎಲ್ಲ ಐತಿಹಾಸಿಕ ಕಾಲದೇಶಗಳಲ್ಲೂ) 'ಭಾಷೆಗಳನ್ನು' ಅವಲಂಬಿಸುತ್ತದೆ; ಒಂದೇ ಭಾಷೆಯನ್ನಲ್ಲ. ಅಂಥ ಪ್ರಜ್ಞೆಯು ಅನಿವಾರ್ಯವಾಗಿ 'ಒಂದು ಭಾಷೆಯನ್ನು ಆಯ್ದುಕೊಳ್ಳಲೇಬೇಕಾದ' ಅಗತ್ಯವನ್ನು ಎದುರಿಸಬೇಕಾಗುತ್ತದೆ''(೧೯೮೧, ೨೯೫). ಆದರೆ, ನಾನು ಗಮನಿಸಿದಂತೆ ಬಾಖ್ತಿನ್‌ನಾಗಲೀ ಅಥವಾ ಇನ್ನಾರೇ ಆಗಲಿ, ಇನ್ನೊಂದು ಪ್ರಶ್ನೆಯನ್ನು ಸ್ಪಷ್ಟವಾಗಿ ಎತ್ತಿಲ್ಲ; ನಿರ್ದಿಷ್ಟ ಭಾಷೆಯೊಂದರ ನಿತ್ಯಬಳಕೆಯ ಐತಿಹಾಸಿಕ ಸಂದರ್ಭದಲ್ಲಿ ಆ ಪ್ರಶ್ನೆಯನ್ನು ಗಮನಿಸಿಲ್ಲ. (ಬಾಖ್ತಿನ್‌ನ ಪ್ರಕಾರ ಸಾಧಾರಣವಾಗಿ ಭಾಷೆಯೆಂದರೆ ಅದು ಸಾಮಾಜಿಕ ಭಾವನಾಜಗತ್ತಿನ ಸೂಚಕಸಮೂಹ). ಆ ಪ್ರಶ್ನೆ ಇದು – ಇಂಥ ಒಂದು ಆಯ್ಕೆಯ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ಪಣಕ್ಕೊಡ್ಡಲ್ಪಡುವಂಥದು ಯಾವುದು? ಒಂದು ಸಾಹಿತ್ಯಕ್ಕೆ ಅಗತ್ಯವಾಗುವ ಭಾಷೆಯನ್ನು ಆಯ್ದುಕೊಳ್ಳುವಾಗ, ಅದಕ್ಕೆ ಸಮಾನಾಂತರ

ವಾಗಿ ಆ ಕಾಲದ ಸಾಮಾಜಿಕ-ರಾಜಕೀಯ ಜಗತ್ತಿನಿಂದ ಇನ್ನೇನನ್ನು ಆಯ್ದುಕೊಳ್ಳಲಾಗುತ್ತದೆ? ಈ ಪ್ರಶ್ನೆ ಯಾಕೆ ಮುಖ್ಯವೆಂದರೆ, ಸಾಹಿತ್ಯಕ ಭಾಷೆಯು ಬುದ್ಧಿಪೂರ್ವಕವಾಗಿ ಆಯ್ದುಕೊಳ್ಳುವಂಥದು ಎಂಬ ಮಾತು ಬೇರೆ, ಮತ್ತು ಅಂಥ ಆಯ್ಕೆಯ ಐತಿಹಾಸಿಕ ಪ್ರಕ್ರಿಯೆಯನ್ನು ವಿವರಿಸುವ ಪ್ರಶ್ನೆ ಬೇರೆಯೇ.

## ವಿಶ್ವಾತ್ಮಕ / ದೇಶೀಯ

ವಿಶ್ವಾತ್ಮಕವೆಂಬ ಪರಿಕಲ್ಪನೆಗೆ ಪ್ರತಿಯಾಗಿ ದೇಶೀಯ ಎನ್ನುವ ಪರಿಕಲ್ಪನೆಯನ್ನು ನಿರ್ವಚಿಸಬೇಕಾದಾಗ ಇವುಗಳ ನಡುವಿನ ಹಲವು ಸಾಪೇಕ್ಷ್ಯ ಸಂಗತಿಗಳು ಮುಳುಗಿಹೋಗುವ ಸಾಧ್ಯತೆಯಿದೆ. ಎಲ್ಲ ವಿಶ್ವಾತ್ಮಕ ಭಾಷೆಗಳೂ ಮೂಲತಃ ದೇಶಭಾಷೆಗಳಾಗಿಯೇ ಇರಬೇಕಾದ ಅಗತ್ಯವೇನೂ ಇಲ್ಲ. ಉದಾಹರಣೆಗೆ, ಮೊದಲ ಸಹಸ್ರಮಾನದ ಆರಂಭದಲ್ಲಿ ಸಂಸ್ಕೃತ ಸಾಹಿತ್ಯವು (ಕಾವ್ಯ) ನಿರ್ಮಿತವಾದ ಇತಿಹಾಸಕ್ಕೂ ಕ್ರಿ.ಪೂ. ೩ನೆಯ ಶತಮಾನದಲ್ಲಿ ಇದ್ದಕ್ಕಿದ್ದಂತೆ ಲ್ಯಾಟಿನ್ ಭಾಷೆಯನ್ನು ಆವಿಷ್ಕರಿಸಿದ್ದಕ್ಕೂ ನಡುವಿನ ವ್ಯತ್ಯಾಸವನ್ನು ಗಮನಿಸಬಹುದು. ಆದರೆ, ಕೆಲವಾದರೂ ದೇಶಭಾಷೆಗಳು ಮುಂದೆ ತಮ್ಮ ಪ್ರಾಂತ್ಯದ ಮಟ್ಟಿಗೆ ವಿಶ್ವಾತ್ಮಕ ಭಾಷೆಗಳಾಗಿ ರೂಪಾಂತರಗೊಳ್ಳುತ್ತವೆ. ಈ ಮಾತು ಬ್ರಜ ಭಾಷೆಗೂ ಅನ್ವಯಿಸುತ್ತದೆ – ೧೫-೧೬ನೆಯ ಶತಮಾನಗಳಲ್ಲಿ ಈ ಭಾಷೆಯ ಉಪಭಾಷಾವೈವಿಧ್ಯಗಳನ್ನು ನಿವಾರಿಸುವ ಮೂಲಕ (ಕೆಲವು ವಿದ್ವಾಂಸರ ಪ್ರಕಾರ ಇದು ಉದ್ದೇಶಪೂರ್ವಕ ನಿವಾರಣೆ) ಅದನ್ನು ಬೇರುಗಳಿಲ್ಲದ ಒಂದು ವಿಶ್ವಾತ್ಮಕ ಭಾಷೆಯಾಗಿ ನಿರ್ಮಿಸಲಾಯಿತು.[೧] ಕನ್ನಡವೂ ಕೂಡಾ, ದೀರ್ಘ ಕಾಲದಿಂದ ಒಂದು ಪ್ರಾಂತೀಯ ಸಾಹಿತ್ಯ ಮಾಧ್ಯಮವೆಂದು ಗಣಿಸಲ್ಪಟ್ಟಿದ್ದರೂ, ಅದರೊಳಗೇ ಬದುಕಿರುವ ತುಳುನಾಡು ಯಾ ಕೊಂಕಣ ಪ್ರದೇಶದವರಿಗೆ ಅದು ಯಾವತ್ತೂ ಒಂದು ಪ್ರಾಂತ್ಯೇತರ ಭಾಷೆಯಾಗಿ ಕಾಣುತ್ತ ಬಂದಿದೆ. ಆದರೆ, ಆಯಾ ಭಾಷೆಗಳ ಭಾವನಿಷ್ಠ ಜಗತ್ತಿನ ಒಳಗಡೆಗೆ ಇಂಥ ಸಾಪೇಕ್ಷ್ಯತೆಗಳು ಅಷ್ಟು ಸಮಸ್ಯಾತ್ಮಕವಾಗಿ ಕಂಡದ್ದಿಲ್ಲ. ಯಾಕೆಂದರೆ, ದೇಶಭಾಷೆಯ ಧೀಮಂತರು ತಮ್ಮ ಸಾಹಿತ್ಯ ಸಂಸ್ಕೃತಿಯನ್ನು ನಿರ್ವಚಿಸಿಕೊಳ್ಳುವುದು ವಿಶಾಲವಾದ ಇನ್ನೊಂದು ಸಂಸ್ಕೃತಿಗೆ ಪ್ರಜ್ಞಾಪೂರ್ವಕವಾಗಿ ಹೋಲಿಸಿಕೊಂಡು. ಆ ಬಳಿಕ ಅವರು ಅಷ್ಟೇನೂ ಚಲಾವಣೆಯಲ್ಲಿಲ್ಲದ – ಮತ್ತು ಚಲಾವಣೆಯಲ್ಲಿಲ್ಲ ಎಂದು ತಮಗೂ ಗೊತ್ತಿರುವ – ಭಾಷೆಯೊಂದನ್ನು ಆಯ್ದುಕೊಂಡು ಬರೆಯುತ್ತಾರೆ; ವಿಶ್ವಾತ್ಮಕ ಭಾಷೆಯ ಚಲನಶೀಲತೆ ತಮ್ಮ ಭಾಷೆಗಿಲ್ಲವೆಂಬುದನ್ನು ಅರಿತವರಾಗಿರುತ್ತಾರೆ. ಮುಂದೆ ನಾನು ಚರ್ಚಿಸಲಿರುವ ಅಂಥ ದೇಶಭಾಷೆಗಳ ಭೌಗೋಲಿಕ-ರಾಜಕೀಯ



ಸ್ಥಳದ ಸ್ವರೂಪವು ಇದನ್ನು ಪುಷ್ಟೀಕರಿಸುತ್ತದೆ. ಈ ಬೆಳವಣಿಗೆಯ ಮುಂದಿನ ಹೆಜ್ಜೆಯೆಂದರೆ, ಈ 'ಸ್ಥಳೀಯತೆ'ಯೇ ಅಲ್ಲಿನ ಸಣ್ಣಸಣ್ಣ ಸಂಸ್ಕೃತಿಗಳಿಗೆ ಯಜಮಾನಿಕೆಯದಾಗಿ ಕಾಣಿಸಿಕೊಳ್ಳುವ ಪ್ರಕ್ರಿಯೆ. ಇಂಥ ಪ್ರಕ್ರಿಯೆಯಿಲ್ಲದೆ ದೇಶಭಾಷೆಯು ವಿಶ್ವಾತ್ಮಕಗೊಳ್ಳುವ ಬದಲಾವಣೆಯನ್ನು ಊಹಿಸುವುದೂ ಅಸಾಧ್ಯ.

## ಸಾಹಿತ್ಯಕತೆ

ಇವತ್ತಿನ ಸಮಕಾಲೀನ ಚಿಂತನೆಯು 'ಸಾಹಿತ್ಯ'ವೆನ್ನುವುದರ ವ್ಯಾಖ್ಯಾನವನ್ನು ಮೂಲೆಗೆ ತಳ್ಳಿದೆ, ನಿರೋಧಿಸಿದೆ, ಅದನ್ನು ಅಸ್ಪಷ್ಟವೂ ಗೊಂದಲಮಯವೂ ಆಗಿ ನಿರೂಪಿಸುತ್ತದೆ. ಆದರೆ, ನಾವೀಗ ಅಭ್ಯಾಸ ಮಾಡುತ್ತಿರುವ ಐತಿಹಾಸಿಕ ಸಮಾಜಗಳು ಅಂಥ ವ್ಯಾಖ್ಯಾನವನ್ನು ಸ್ಪಷ್ಟವಾಗಿ ಮತ್ತು ವಿವಾದಾತೀತವಾಗಿ ನಿರೂಪಿಸಿಕೊಂಡಿದ್ದವು – ಎಂಬುದನ್ನು ನಾವು ನೆನಪಿಡಬೇಕು. ಅಲ್ಲಿ ಎರಡು ರೀತಿಯ ಸಾಹಿತ್ಯನಿರ್ಮಾಣಗಳ ನಡುವೆ ಸೈದ್ಧಾಂತಿಕವಾಗಿ ವರ್ಗೀಕರಿಸಿಕೊಳ್ಳಲಾಗಿತ್ತು. ಒಂದು, ದಾಖಲೆಯನ್ನು ಉದ್ದೇಶವಾಗಿಟ್ಟುಕೊಂಡ ಸಾಹಿತ್ಯ. ಇನ್ನೊಂದು, ಅದಕ್ಕಿಂತ ಬೇರೆಯಾದದ್ದು – ಅದನ್ನು ಅಭಿವ್ಯಕ್ತಿಶೀಲವೆಂದೋ ವ್ಯಾಖ್ಯಾನಾತ್ಮಕವೆಂದೋ 'ಕ್ರಿಯಾಶೀಲ'ವೆಂದೋ (ದಾಸ್ ವರ್ಕ್‌ಪ್ಟೆ, ಹೈಡೆಗರ್ ೧೯೬೦) ಕರೆದುಕೊಳ್ಳಿ, ಅಥವಾ ಸಾಹಿತ್ಯಕವೆಂದೋ ಏನಾದರೂ ಹೆಸರಿಸಿಕೊಳ್ಳಿ. ಇವತ್ತಿನ ಜ್ಞಾನಶಾಖೆಗಳು ಇಂಥ ಸ್ಥಳೀಯ ವರ್ಗೀಕರಣಗಳನ್ನು ಪ್ರಶ್ನಿಸುತ್ತ ದಾಖಲೆಯ ಸಾಹಿತ್ಯದಲ್ಲಿ ಕ್ರಿಯಾತ್ಮಕವಾದ್ದನ್ನೂ ಮತ್ತು ಅದರ ವಿರುದ್ಧವನ್ನೂ ಹುಡುಕುತ್ತವೆ – ಅದು ಸರಿಯಾದದ್ದೇ (ಲಾ ಕಾಪ್ರಾ ೧೯೮೩, ೨೩-೭೧). ಆದರೆ, ಅದು ಎರಡನೆಯ ಮಜಲಿನ ಕೆಲಸ. ಅದಕ್ಕೆ ಮೊದಲು, ನಾವು ದಕ್ಷಿಣ ಏಶಿಯಾದ ಮಧ್ಯಕಾಲದಲ್ಲಿ ಕವಿಗಳು ಇಂಥ ವರ್ಗೀಕರಣವನ್ನು ಏಕೆ, ಹೇಗೆ ಮತ್ತು ಯಾವಾಗ ಮಾಡುತ್ತಿದ್ದರು ಎಂಬುದರ ಕುರಿತು ಐತಿಹಾಸಿಕ ಮತ್ತು ಮಾನವಶಾಸ್ತ್ರೀಯ ಚರ್ಚೆಯನ್ನು ಮಾಡಿಕೊಳ್ಳಬೇಕಿದೆ. ದಾಖಲೆ ಮತ್ತು ಸಾಹಿತ್ಯದ ನಡುವೆ, ಸೀಮಿತ ಮತ್ತು ವಿಸ್ತ್ರತ ಮಾಧ್ಯಮಗಳ ನಡುವೆ, ಮಾಡಲ್ಪಟ್ಟ ಈ ವರ್ಗೀಕರಣವು ಮುಖ್ಯವಾಗಿ ಆಧರಿಸಿದ್ದು ಭಾಷೆಯ ಆಯ್ಕೆಯನ್ನು. ಶಾಸನಗಳ ಇತಿಹಾಸವು ಈ ಸಂಗತಿಯನ್ನು ಚೆನ್ನಾಗಿ ತೋರಿಸುತ್ತದೆ. ಈ ಆಯ್ಕೆಯ ಹಿಂದೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧಿಕಾರದ ಪ್ರಶ್ನೆಗಳು ಕೆಲಸ ಮಾಡಿವೆ. ಸೀಮಿತ ಮತ್ತು ವಿಸ್ತ್ರತ ಮಾಧ್ಯಮಗಳ ಬಳಕೆಯ ಭಿನ್ನತೆಗಳು ಸಾಹಿತ್ಯ ಮತ್ತು ದಾಖಲೆಗಳ ಸಂದರ್ಭದಲ್ಲಿ ಕ್ರಮವಾಗಿ ಬೆಳವಣಿಗೆಗೆ ಸಹಾಯಕವಾಗಿಯೂ ಮತ್ತು ಬೆಳವಣಿಗೆಗೆ ತಡೆಯಾಗಿಯೂ ವರ್ತಿಸಿವೆ. ದೇಶಭಾಷೆಗಳ ನಿರ್ಮಾಣದ ಪ್ರಕ್ರಿಯೆಯೇನಿದೆ ಅದು

ಇಂಥ ತಡೆಗಳಿಗೆ ವಿರುದ್ಧವಾದ ಒಂದು ಪ್ರತಿರೋಧ. ಈ ಪ್ರತಿರೋಧವು ತನ್ನ ಮೇಲೆ ಆಕ್ರಮಿಸಿರುವ ಸಾಂಸ್ಕೃತಿಕ ವ್ಯವಸ್ಥೆಯ ಸಾಹಿತ್ಯಕ ಉಪಕರಣಗಳನ್ನೂ (ವಸ್ತು, ಸಾಹಿತ್ಯಪ್ರಕಾರ, ಛಂದಸ್ಸು, ನಿಘಂಟು) ಹಾಗೂ ಆ ಸಾಹಿತ್ಯಿಕ ಆಟದ ನಿಯಮಗಳನ್ನೂ ಪಳಗಿಸಿ ಅಳವಡಿಸಿಕೊಂಡಿದೆ.

## ಬರವಣಿಗೆ

ದಕ್ಷಿಣ ಏಶಿಯಾದ ಮಧ್ಯಕಾಲದಲ್ಲಿ ಸಾಹಿತ್ಯಕ ಎನ್ನುವುದು ಹೆಚ್ಚುಹೆಚ್ಚು ತನ್ನನ್ನು ತಾನು ದಾಖಲೆಯಿಂದ ಪ್ರತ್ಯೇಕಿಸಿಕೊಂಡಿದ್ದು ಮಾತ್ರವೇ ಅಲ್ಲ, ಜತೆಗೇ ಅದು ತನ್ನನ್ನು ತಾನು ಮೌಖಿಕ ಮಾಧ್ಯಮಗಳಿಂದಲೂ ಬೇರ್ಪಡಿಸಿಕೊಂಡು ಬರವಣಿಗೆಯೊಂದಿಗೆ ತಳುಕುಹಾಕಿಕೊಳ್ಳಲು ಹವಣಿಸಿತು. ಆ ಬರವಣಿಗೆಯಿಂದ ಲಭ್ಯವಾಗುವ ಅಧಿಕೃತತೆ, ಅದರೊಂದಿಗೇ ಬರುವ ಗ್ರಾಂಥಿಕತೆ ಮತ್ತು ಆ ಮೂಲಕ ನಿರ್ಮಾಣವಾಗುವ ಇತಿಹಾಸಗಳು ಅದಕ್ಕೆ ಮುಖ್ಯವಾಗಿ ಕಂಡವು. ಬರವಣಿಗೆಯ ಅಧಿಕೃತತೆ ಎಂಬುದು, ಮಾತನಾಡುವ ಸಾಮರ್ಥ್ಯದ ಹಾಗೆ, ಸಹಜವಾಗಿ ಲಭ್ಯವಾಗುವಂಥದಲ್ಲ. ಇದು ಸಾಮಾಜಿಕ ಮತ್ತು ರಾಜಕೀಯ ಅನುಕೂಲಗಳ ಜತೆಗೆ ಜೋಡಿಸಿಕೊಂಡಿರುವಂಥದು; ಅಂಥ ಅನುಕೂಲದ ಕಾರಣದಿಂದಾಗಿ ಸಾಹಿತ್ಯವೆನ್ನುವುದು ತಥಾಕಥಿತ ಮೌಖಿಕ ಸಾಹಿತ್ಯಗಳಿಂದ ಬೇರೆಯಾದ ಸಾಂಸ್ಕೃತಿಕ ನಿರ್ಮಿತಿ ಮತ್ತು ಸಂವಹನೆ – ಎಂಬ ಸೀಮಿತ ಅರ್ಥ ಅದಕ್ಕೆ ಪ್ರಾಪ್ತವಾಗುತ್ತದೆ.[೨] ದಕ್ಷಿಣ ಏಶಿಯಾದ ಇಂಥ ಲಿಖಿತ ಸಾಹಿತ್ಯವು ಮೌಖಿಕತೆಯ ಪಠ್ಯದ ಅಂತರ್ಗುಣಗಳನೇಕವನ್ನು ಪಡೆದಿರುತ್ತದೆ ಎಂಬುದೇನೋ ನಿಜ. (ಇದನ್ನೇ ಹಳೆಯ ಫ್ರೆಂಚ್ ಭಾಷಾವಿದ್ವಾಂಸ ಪಾಲ್ ಜಮ್ತೋರ್ 'ವೋಕಲೈಟ್' ಎಂದು ಕರೆದದ್ದು).[೩] ಹಾಗೆಯೇ ಈ ಸಾಹಿತ್ಯವು ಪ್ರಸಾರವಾಗುತ್ತಿದ್ದುದೂ ಹೆಚ್ಚಾಗಿ ಶ್ರವಣರೂಪದಲ್ಲೇ ಎನ್ನುವುದೂ ಸತ್ಯ. ಹಾಗಿದ್ದರೂ ಬರವಣಿಗೆಯೆನ್ನುವುದು ಸಾಹಿತ್ಯಕ ಸಂವಹನೆಯನ್ನು ಆಳವಾದ ರೀತಿಗಳಲ್ಲಿ ಬದಲಾಯಿಸಿಬಿಟ್ಟಿತು. ಈ ಪ್ರಕ್ರಿಯೆಯನ್ನಿನ್ನೂ ವ್ಯವಸ್ಥಿತವಾಗಿ ವಿಶ್ಲೇಷಿಸಬೇಕಿದೆಯಾದರೂ ಒಂದು ಸಂಗತಿಯ ಬಗ್ಗೆ ಏನೂ ಅನುಮಾನವಿಲ್ಲ – ಇದರಿಂದಾಗಿ, ಲಿಖಿತ ಸಾಹಿತ್ಯವನ್ನು ರಚಿಸುವುದೆನ್ನುವುದು ಭಾಷೆಯ ಬುದ್ಧಿಪೂರ್ವಕ ಮತ್ತು ಬೌದ್ಧಿಕ ಬಳಕೆಯಾಯಿತು ಹಾಗೂ ಭಾಷೆಗೆ ಹೊಸ ನೀತಿಗಳನ್ನೂ ಮಿತಿಗಳನ್ನೂ ಹಾಕಿಕೊಟ್ಟಿತು. ಐತಿಹಾಸಿಕವಾಗಿ ಹೇಳುವುದಾದರೆ – ಅಂದರೆ, ಐತಿಹಾಸಿಕ ಸಂಗತಿಗಳನ್ನು ಕೊಡುವ ಮೂಲಕ ನಮಗೆ ಯಾವುದು ಇತಿಹಾಸವಾಗುತ್ತದೆಯೋ ಅದಷ್ಟನ್ನು ಮಾತ್ರವೇ ಗಮನಿಸಿಯಲ್ಲ; ಯಾವುದು ಆ ಇತಿಹಾಸದ ಪಾಲುದಾರರಿಗೆ ಇತಿಹಾಸದ ಹರಿವಿನಲ್ಲಿ ಮಹತ್ವದ ತಿರುವು ಎಂದು ಕಾಣುತ್ತದೆಯೋ ಅಂಥ ಇತಿಹಾಸವನ್ನು ಗಮನಿಸಿ ಹೇಳುವುದಾದರೆ



– ದೇಶಭಾಷಾ ಸಾಹಿತ್ಯ ಸಂಸ್ಕೃತಿಯಲ್ಲಿ ಸಾಹಿತ್ಯವನ್ನು ಬರವಣಿಗೆಗೆ ಬದ್ಧಗೊಳಿಸುವ ಲೇಖನಕರಣವೇನಿದೆ ಅದು, ಒಂದು ಪ್ರಮುಖ ಘಟ್ಟ.

## ಆರಂಭಗಳು

ಆದ್ದರಿಂದ, ದೇಶಭಾಷೆಯು ಮೊದಲಿಗೆ ಒಂದು ಸಾಂಸ್ಕೃತಿಕ ಆಯ್ಕೆಯ ಮೂಲಕ ಸಾಹಿತ್ಯಕ ಮಾರ್ಗವನ್ನು ಹಿಡಿಯುತ್ತದೆ ಮತ್ತು ಆ ಸಾಹಿತ್ಯಕ ಮಾರ್ಗವು ಬರವಣಿಗೆಯನ್ನು ಸ್ವೀಕರಿಸುತ್ತದೆ. ಇವೆರಡೂ ಆದಾಗಲೇ ಆಯಾ ಸಾಹಿತ್ಯ ಆರಂಭವಾಗುವುದು – ಅಂದರೆ, ಅಂಥ ನಿರ್ದಿಷ್ಟ ಸಂದರ್ಭಗಳಲ್ಲಿ ಜನ ಪಠ್ಯಗಳನ್ನು ಬರೆಯತೊಡಗುತ್ತಾರೆ; ಅಥವಾ ಐತಿಹಾಸಿಕ ಪ್ರಶ್ನೆಯಾಗಿ ಇದನ್ನು ನೋಡುವುದಾದರೆ, ಸ್ಥಳೀಯ ಭಾಷೆಗಳಲ್ಲಿ ಲಿಖಿತವಾದದ್ದನ್ನು ಜನ ಸಂಗ್ರಹಯೋಗ್ಯವೆಂದು ಗಣಿಸಲು ಆರಂಭಿಸುತ್ತಾರೆ. ದಕ್ಷಿಣ ಏಶಿಯಾದ ಅಂಥ ಸಾಹಿತ್ಯಕ ಆರಂಭಗಳು ಮಾನವ ಶಾಸ್ತ್ರೀಯ-ಐತಿಹಾಸಿಕ ಅಭ್ಯಾಸಕ್ಕೆ ವಸ್ತುಗಳಾಗಿ ಒದಗಿಬರುತ್ತವೆ. ಮತ್ತು, 'ಆರಂಭ' ಎನ್ನುವ ಪರಿಕಲ್ಪನೆಯನ್ನೇ ಕುರಿತಂತೆ ಇರುವ ಹಲವು ತಾರ್ಕಿಕ ಮತ್ತು ಸೈದ್ಧಾಂತಿಕ ತೊಂದರೆಗಳೇನೇ ಇರಲಿ, ಇವು ಐತಿಹಾಸಿಕ ವಿಶ್ಲೇಷಣೆಗೆ ಒಗ್ಗಿಕೊಳ್ಳುತ್ತವೆ (ಪೊಲಾಕ್ ೧೯೯೮). ದೇಶಭಾಷೆಯ ಆಯ್ಕೆಯ ಪ್ರಕ್ರಿಯೆಗೆ ಸತತವಾದ ಒಂದು ಇತಿಹಾಸ ಇದ್ದೇ ಇದೆ, ಆದರೆ, ನನ್ನ ಮುಖ್ಯವಾದ ಆಸಕ್ತಿ ಇರುವುದು ಇಂಥ ದೇಶಭಾಷಾ ಸಾಹಿತ್ಯದ ಉದ್ಘಾಟನೆಗಳ ಪ್ರಕ್ರಿಯೆಯಲ್ಲಿ.

## ಸಮುದಾಯ

ನನ್ನ ಚರ್ಚೆಯಲ್ಲಿ ಕಡೆಯದು ಸಾಹಿತ್ಯ ಮತ್ತು ಸಮುದಾಯಗಳ ನಡುವಿನ ಪರಸ್ಪರ ಪೂರಕ ಸಂಬಂಧ. ಇದು ಇದ್ದಿದ್ದರಲ್ಲೇ ಕಡಿಮೆ ವಿವಾದಾತ್ಮಕವಾದದ್ದು, ಆದರೆ, ಅಷ್ಟೇ ಕಡಿಮೆ ಐತಿಹಾಸಿಕ ಚರ್ಚೆಗೆ ಒಳಪಟ್ಟಂಥದು ಕೂಡಾ. ಸಾಹಿತ್ಯವೆನ್ನುವುದು ನಿರ್ದಿಷ್ಟ ಸಾಮಾಜಿಕ-ಪಠ್ಯಾಧಾರಿತ ಸಮುದಾಯಗಳನ್ನು ಉದ್ದೇಶಿಸಿ ರಚಿತವಾಗಿರುತ್ತದೆ; ಅಥವಾ ಕೆಲವೊಮ್ಮೆ ಅಂಥ ಸಮುದಾಯಗಳನ್ನು ಅಸ್ತಿತ್ವಕ್ಕೆ ಬರುವಂತೆ ಆಹ್ವಾನಿಸುತ್ತದೆ. ಈ ಸಮುದಾಯಗಳು ತಮ್ಮನ್ನು ತಾವು ಬೇರೆಬೇರೆ ರೀತಿಗಳಲ್ಲಿ ನಿರ್ವಚಿಸಿಕೊಳ್ಳುವುದು ತಾವು ಹಂಚಿಕೊಳ್ಳುವ ಸಾಹಿತ್ಯಗಳ ಮೂಲಕ. ಆದ್ದರಿಂದ ಹೊಸ ಹೊಸ ಆತ್ಮವ್ಯಾಖ್ಯಾನಗಳು ಹೊಸ ಹೊಸ ಸಾಹಿತ್ಯಗಳನ್ನೇ ಸೃಷ್ಟಿಸಿಕೊಳ್ಳುತ್ತವೆ. ಅರ್ಥಾತ್, ಒಂದು ನಿರ್ದಿಷ್ಟ ಸಾಹಿತ್ಯಭಾಷೆಯನ್ನು ಆಯ್ದುಕೊಳ್ಳುವುದು ಎಂದರೆ, ಅಥವಾ ಯಜಮಾನ ಸಂಸ್ಕೃತಿಯ ಮಾದರಿಗಳನ್ನೇ ಅನುಸರಿಸಿ ತಾನೂ ಬರವಣಿಗೆಯನ್ನು ನಡೆಸುವುದು ಎಂದರೆ, ಅದು ಜತೆಜತೆಗೇ ಒಂದು ಸಮುದಾಯ

ವನ್ನು ಆಯ್ದುಕೊಳ್ಳುವ ಪ್ರಕ್ರಿಯೆಯೂ ಹೌದು. ಆಧುನಿಕಪೂರ್ವ ಜಗತ್ತಿನ ಅಂಥ ಸಮುದಾಯಗಳನ್ನು ಕುರಿತಂತೆ ನಾವು ಕಾಲ್ಪನಿಕವಾಗಿ ಗ್ರಹಿಸಿದರಷ್ಟೇ ಸಾಲದು, ಅವುಗಳನ್ನು ಕುರಿತು ನಾವು ಗಹನವಾಗಿ ವಿಚಾರಿಸಬೇಕು; ಅವುಗಳ ಅರ್ಥವಂತಿಕೆಯೇನು, ಅವು ಸಾಹಿತ್ಯದಿಂದ ಸೃಷ್ಟಿಸಿಕೊಳ್ಳುವ ವಿಶಿಷ್ಟ ಸ್ವಚಿಹ್ನೆಗಳೇನು – ಎಂಬುದನ್ನು ನಾವು ತಿಳಿಯಬೇಕು.

ಇಂಥ ಒಂದು ತಾತ್ವಿಕ ಚೌಕಟ್ಟು ಇರದೇ ಹೋದ ಪಕ್ಷದಲ್ಲಿ, ದೇಶಭಾಷೆಯ ನಿರ್ಮಾಣದ ಹಿನ್ನೆಲೆಯಲ್ಲಿರುವ – ಯಾ ವಿಶ್ವಾತ್ಮಕತೆಯ ಹಿಂದಿರುವ – ಆಯ್ಕೆಗಳನ್ನು ಗುರುತಿಸುವುದೂ ಅಸಾಧ್ಯ; ಇನ್ನು ಅವುಗಳ ಇತಿಹಾಸ ಮತ್ತು ಸಾಮಾಜಿಕ ಅರ್ಥವಂತಿಕೆಯನ್ನು ತಿಳಿಯುವುದಂತೂ ಸಾಧ್ಯವೇ ಇಲ್ಲ.

ಎರಡನೆಯ ಸಹಸ್ರಮಾನದ ಆರಂಭದ ದಕ್ಷಿಣ ಏಶಿಯಾದಲ್ಲಿ, ಹೀಗೆ, ದೇಶಭಾಷೆಯ ಪರವಾಗಿ ಆಯ್ಕೆಯು ನಡೆದದ್ದು ಸಂಸ್ಕೃತ ಭಾಷೆಯನ್ನು ಪ್ರತಿಯಾಗಿಟ್ಟುಕೊಂಡು ಮತ್ತು ಸಂಸ್ಕೃತ ಸಾಹಿತ್ಯದಿಂದ ಗಾಢವಾಗಿ ಪ್ರಭಾವಿತವಾಗಿ. ಆದ ಕಾರಣ, ಅದಕ್ಕೆ ಮೊದಲು ಸಂಸ್ಕೃತವು ಸೃಷ್ಟಿಸಿದ ಸಾಹಿತ್ಯ ಜಗತ್ತನ್ನೂ ಮತ್ತು ಆ ಜಗತ್ತಿನಲ್ಲಿ ಸಂಸ್ಕೃತವು ಮಾಡಿದ ಕೆಲಸಗಳ ಇತಿಹಾಸವನ್ನೂ ಅರಿಯದೆ ನಾವು ಈ ವಿಶ್ವಭಾಷೆಯ ವಿರೋಧಧ ಪ್ರಕ್ರಿಯೆಯನ್ನೂ ಅರಿಯಲಾರೆವು; ದೇಶಭಾಷೆಗಳು ಆ ಸಮಯದಲ್ಲಿ ಎಂಥ ಕೆಲಸಗಳನ್ನು ಮಾಡಬೇಕಾಯಿತು, ಏಕೆ ಮಾಡಬೇಕಾಯಿತು ಎಂಬುದೂ ಸಂಸ್ಕೃತದ ಹಿನ್ನೆಲೆಯಿಲ್ಲದೆ ನಮಗೆ ತಿಳಿಯುವುದು ಕಷ್ಟ. ಇಂಥ ಸಾಂಸ್ಕೃತಿಕ ಮುಖಾಮುಖಿಯ ಗುಣವನ್ನು ತುಸು ವಿಶದಪಡಿಸಲಿಕ್ಕಾಗಿ ನಾನು ಮೊದಲಿಗೆ ಅಷ್ಟೇನೂ ಪ್ರಚಲಿತವಲ್ಲದ ಒಂದು ಕ್ಷೇತ್ರಕ್ಕೆ ಪ್ರವೇಶಮಾಡುತ್ತೇನೆ – ಅದು, ಸಂಸ್ಕೃತ ಶಾಸನಗಳ ಜಿಜ್ಞಾಸೆಯ ಇತಿಹಾಸದ ಕ್ಷೇತ್ರ. ಇಲ್ಲಿ ಮೂರು ವಿಷಯಗಳನ್ನು ಕುರಿತು ನಾನು ಕೇಂದ್ರೀಕರಿಸುತ್ತೇನೆ – ಒಂದು, ಪ್ರಾಂತ್ಯಗಳ ಸೀಮಿತತೆಯನ್ನು ಮೀರಿ ಸಂಸ್ಕೃತ ಭಾಷೆಯ ಸಂಸ್ಕೃತಿಯು ನಿರ್ಮಾಣವಾದ ಇತಿಹಾಸ; ಅದು ಹೇಗೆ ಅಸ್ತಿತ್ವಕ್ಕೆ ಬಂತು ಮತ್ತು ಏನೇನನ್ನು ಒಳಗೊಂಡಿತ್ತು ಎಂಬ ಚರ್ಚೆ ಇದು. ಎರಡನೆಯದಾಗಿ, ರಾಜಕೀಯ ಅಭಿವ್ಯಕ್ತಿಯ ಮಾಧ್ಯಮವಾಗಿ ಸಂಸ್ಕೃತ ಭಾಷೆಯ ಪಾತ್ರ. ಮತ್ತು ಮೂರನೆಯದಾಗಿ, ಇದಕ್ಕೆ ಹೊಂದಿಕೊಂಡಂತೆಯೇ, ಸ್ಥಳೀಯ ಭಾಷೆಗಳಿಗೆ ಹೋಲಿಸಿದರೆ ಸಾಹಿತ್ಯ ಭಾಷೆಯಾಗಿ ಸಂಸ್ಕೃತವು ಗಳಿಸಿಕೊಂಡಿದ್ದ ಅತ್ಯುನ್ನತ ಸ್ಥಾನಮಾನಗಳು. ಈ ನಿಜಜಗತ್ತಿನ ನಿರೂಪಣೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಆಮೇಲೆ ನಾನು, ಸಂಸ್ಕೃತದ ಭೌಗೋಲಿಕ-ಸಾಂಸ್ಕೃತಿಕ ಪ್ರತಿನಿಧೀಕರಣದ ಬಗ್ಗೆ ಪ್ರಸ್ತಾಪಿಸಲು ತಿರುಗುತ್ತೇನೆ.



## ಸಂಸ್ಕೃತ ವಿಶ್ವದ ಇತಿಹಾಸೀಕರಣ

ಎರಡನೆಯ ಸಹಸ್ರಮಾನದ ಆರಂಭದಲ್ಲಿ ನಡೆದ ದೇಶಭಾಷೆಯ ಪರಿವರ್ತನೆಯ ಪ್ರಕ್ರಿಯೆ ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವದ ಇನ್ನೊಂದು ವಿದ್ಯಮಾನ – ಈ ಬದಲಾವಣೆಯು ಯಾವುದಕ್ಕೆ ಪ್ರತಿಕ್ರಿಯೆಯಾಗಿ ಬಂತೋ ಆ ಸಂಸ್ಕೃತ ವಿಶ್ವದ ಉದ್ಭವದ ಘಟನೆ.[೪] ಅದು ನಡೆದದ್ದು ಮೊದಲನೆಯ ಸಹಸ್ರಮಾನದ ಆರಂಭದಲ್ಲಿ. ಈ ವಿಶ್ವವ್ಯವಸ್ಥೆಯ ಸ್ಥಾಪನೆಗೆ ಕಾರಣವಾದ ಎರಡು ಪರಸ್ಪರ ಸಂಬಂಧಿತ ಬೆಳವಣಿಗೆಗಳೆಂದರೆ – ಶಾಸನದಲ್ಲಿ ಸಂಸ್ಕೃತದ ಬಳಕೆ ಮತ್ತು 'ಸಾಹಿತ್ಯ' ವೆಂಬುದರ ಅನ್ವೇಷಣೆ. ಈ ಸಂಸ್ಕೃತ ಶಾಸನಗಳನ್ನು ರಾಜಾಸ್ಥಾನಗಳು ರಾಜಕೀಯ ಅಭಿವ್ಯಕ್ತಿಯಾಗಿ ಬರೆಸಿದವು ಮತ್ತು ಸಾಹಿತ್ಯಭಾಷೆಯ ಬಳಕೆಯ ಮೂಲಕ ಸಾಹಿತ್ಯಕತೆ ಎಂಬುದನ್ನು ನಿರೂಪಿಸುವ ಮಾಧ್ಯಮವಾಗಿ ಅವು ಉಪಯುಕ್ತವಾದವು. ಮುಂದಿನ ಸಂಸ್ಕೃತ ಶಾಸನಗಳು ಈ ಎರಡೂ ಲಕ್ಷಣಗಳನ್ನು ದೃಢೀಕರಿಸಿದವು.

ತನ್ನ ಮೊದಲ ೪೦೦ ವರ್ಷಗಳಲ್ಲಿ, ದಕ್ಷಿಣ ಏಶಿಯಾದ ಶಾಸನಗಳು ಸಂಪೂರ್ಣ ಸಂಸ್ಕೃತೇತರವೇ ಆಗಿದ್ದವು. (ಬದಲು, ಆಗ ಶಾಸನಗಳಲ್ಲಿ ಬಳಕೆಯಾಗಿದ್ದು ಪ್ರಾಕೃತವೆಂದು ಕರೆಯಲಾದ ಮಧ್ಯಇಂಡಿಕಾದ ಉಪಭಾಷೆಗಳು). ಆದರೆ, ಮೊದಲ ಸಹಸ್ರಮಾನದ ಆರಂಭದಲ್ಲಿ ಈ ಸನ್ನಿವೇಶವು ನಾಟಕೀಯವಾಗಿ ಬದಲಾಯಿತು. ಆಗ ಸಂಸ್ಕೃತದಲ್ಲಿಯೇ ಲಿಖಿತವಾದ ಹೊಸ ಮಾದರಿಯ ಪಠ್ಯವೊಂದು ಅಂಕುರಿಸಿತು; ರಾಜಮಾನ್ಯರನ್ನು ಹೊಗಳುವ ಈ ಆಲಂಕಾರಿಕ ಪಠ್ಯಗಳನ್ನು ಕಲ್ಲು, ಕಂಬ, ಕಟ್ಟಡ ಮತ್ತು ತಾಮ್ರದ ತಗಡುಗಳ ಮೇಲೆ ಲಿಖಿಸಲಾಗಿತ್ತು; ಅದಕ್ಕೇ ಮುಂದೆ 'ಪ್ರಶಸ್ತಿ' ಎಂಬ ಹೆಸರು ಬಂತು. ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾದದ್ದು – ಇಂಡೋಸ್ಕೈಥಿಯನ್ ದೊರೆ ರುದ್ರದಾಮನ (ಕ್ರಿ.ಶ. ೧೫೦) ನಿಗಾಗಿ ಯಾ ಅವನಿಂದಲೇ ರಚಿಸಲ್ಪಟ್ಟ ಶಾಸನ. ನೂರು ವರ್ಷಗಳ ಹಿಂದೆಯೇ ಈ ಶಾಸನ ವಿದ್ವಾಂಸರ ಗಮನಕ್ಕೆ ಬಂದಿದೆ ಮತ್ತು ಆ ಬಳಿಕ ಈ ಶಾಸನದ ಮಹತ್ವವನ್ನು ಪಲ್ಲಟಿಸುವ ಇನ್ನೊಂದು ದಾಖಲೆ ಇದುವರೆಗೂ ಲಭ್ಯವಾಗಿಲ್ಲ. ಈ ಶಾಸನಕ್ಕೆ ಮೊದಲು ಸಂಸ್ಕೃತವನ್ನು ಹೀಗೆ ಮಾತಾಡುವ ಯಾ ಸಾರ್ವಜನಿಕವಾಗಿ ಬರೆಯುವ ಅಥವಾ ಇಷ್ಟು ಸೌಂದರ್ಯಾತ್ಮಕ ಭಾಷೆಯಲ್ಲಿ ಐತಿಹಾಸಿಕ ರಾಜನೊಬ್ಬನನ್ನು ಸ್ತುತಿಸುವ ಪರಿಪಾಠವೇ ಕಾಣಸಿಗುವುದಿಲ್ಲ. ಅದೇ, ಈ ಶಾಸನ ಬಂದ ಕೂಡಲೇ, ಮುಂದಿನ ಒಂದು ನೂರು ವರ್ಷ, ತಟ್ಟನೆ ಸಂಸ್ಕೃತ ಕಾವ್ಯದ ಧ್ವನಿ ಮೇಲೆದ್ದು ಕಾಣಿಸಿಕೊಂಡಿತು; ಪೇಶಾವರದ ಪರ್ವತಗಳಿಂದ ತೊಡಗಿ ಮಧ್ಯಜಾವಾದ ಪ್ರಂಬನಮ್ ಬಯಲಿನವರೆಗೆ ಹಲವು ರಾಜ್ಯಗಳಲ್ಲಿ ಈ ಧ್ವನಿ ಕೇಳಲಾರಂಭಿಸಿತು.

ಹೆಚ್ಚೂಕಮ್ಮಿ ಇದೇ ಕಾಲದಲ್ಲಿಯೇ ಮುಂದೆ ಕಾವ್ಯ (ಅಂದರೆ, ಲಿಖಿತ ಸಾಹಿತ್ಯ) ಎಂದು ಕರೆಯಿಸಿಕೊಂಡ ಪರಿಕಲ್ಪನೆಯು ಮುನ್ನೆಲೆಗೆ ಬಂದದ್ದು. ಆಗಷ್ಟೇ ಹುಟ್ಟಿ ಬೆಳೆಯುತ್ತಿದ್ದ ಅಲಂಕಾರಶಾಸ್ತ್ರದ ಪ್ರಸ್ಥಾನಗಳೂ ಹರಳುಗಟ್ಟತೊಡಗಿದ್ದೂ ಆಗಲೇ. ಆಗಲೇ 'ಮಹಾಕಾವ್ಯ' ಮತ್ತು 'ನಾಟಕ'ದಂತಹ ಮಹತ್ವದ ಪ್ರಕಾರಗಳೂ ಅವುಗಳ ರೂಢಶೈಲಿಗಳೂ ಪ್ರಚಲಿತವಾದವು; ಧ್ವನಿಸಿದ್ಧಾಂತದ ರೂಪಗಳೂ ಛಂದಶ್ಶಾಸ್ತ್ರದ ನಿಖರ ಅಳತೆಗಳೂ ರೂಢಿಗೆ ಬಂದವು; ಮುಂದೆ ಏಶಿಯಾದಾದ್ಯಂತ ವ್ಯಾಪ್ತಿ ವಿಸ್ತಾರವನ್ನು ಪಡೆದ ಸಂಸ್ಕೃತ ಸಾಹಿತ್ಯಕ್ಕೆ ಈ ಎಲ್ಲ ಬೆಳವಣಿಗೆಗಳು ವಿಶಿಷ್ಟವಾದ ಸ್ವರೂಪಗಳನ್ನು ನಿರ್ಮಿಸಿಕೊಟ್ಟವು. ಸಾಹಿತ್ಯ ವಿಮರ್ಶೆಯಲ್ಲಿ ಕಾಣುವ ಹಾಗೆ ಅಥವಾ ಸಾಹಿತ್ಯಕೃತಿಗಳನ್ನು ಪರಿಚಯಿಸುವ ಸಾಂಪ್ರದಾಯಿಕ ಮಾಧ್ಯಮವಾದ ಕವಿಪ್ರಶಂಸೆಗಳಲ್ಲಿ ಗೋಚರವಾಗುವ ಹಾಗೆ, ಸಂಸ್ಕೃತ ಭಾಷೆಯ ಸಾಹಿತ್ಯ-ಸಾಂಸ್ಕೃತಿಕ ಸ್ಮೃತಿ ಎನ್ನುವುದು ಮೊದಲ ಸಹಸ್ರಮಾನದ ಈ ಆರಂಭದ ಶತಮಾನಗಳಿಗಿಂತ ಹಿಂದಕ್ಕೆ ಹೋಗುವುದಿಲ್ಲ. ಮುಂದೆ 'ಕಾವ್ಯ' ಎಂದು ಹೆಸರು ಪಡೆದ ಸಾಹಿತ್ಯ ಪ್ರಕಾರವೂ ಕೂಡಾ ಈ ಕಾಲಕ್ಕಿಂತ ಹಳೆಯದೆಂದು ಸಾಧಿಸುವುದು ಇತಿಹಾಸದ ಪಂಡಿತರಿಗೆ ಕಷ್ಟವೇ. ಆದ್ದರಿಂದ, ರುದ್ರದಾಮನನ ಶಾಸನದಂಥ ಬರಹಗಳನ್ನು ನಾವೀಗ ನೋಡುತ್ತಿರುವ ಹಾಗೆ, ಬಹಳಕಾಲ ಸಾಹಿತ್ಯಪ್ರಕಾರವೊಂದು ಅಸ್ತಿತ್ವದಲ್ಲಿದ್ದಬಳಿಕ ಬಂದಂಥದು ಎಂದು ನೋಡಲಾಗದು; ಬದಲು, ಅದು ಇಂಥದೊಂದು ಪರಂಪರೆಯ ಆರಂಭಿಕ ದಾಖಲೆಯೆಂದು ಪರಿಗಣಿಸಬೇಕು. ಅರ್ಥಾತ್, ಇಂಥ 'ಕಾವ್ಯ' ಮತ್ತು 'ಪ್ರಶಸ್ತಿ'ಗಳ ಉಬ್ಬರದ ಈ ಕಾಲವನ್ನು ನಾವು ಮೌರ್ಯಯುಗದ ನಡುವಿರಾಮದ ಬಳಿಕ ಸಂಭವಿಸಿದ ಸಂಸ್ಕೃತದ 'ನವೋದಯ' ಎಂದಾಗಲೀ (ಯಾ ಪುನರುತ್ಥಾನ, ಪುನರ್‌ನವೀಕರಣ, ಪುನರ್‌ನಿರ್ಮಾಣ ಎಂದಾಗಲೀ) ಭಾವಿಸಬಾರದು; ಇದನ್ನು ಹೊಸ ಸಾಂಸ್ಕೃತಿಕ ಸಂರಚನೆಯೊಂದರ ಉದ್ಘಾಟನೆಯೆಂದೇ ತಿಳಿಯಬೇಕು. ಇದಕ್ಕೆ ಮೊದಲು ಈ ಸಂಸ್ಕೃತ ಸಂಸ್ಕೃತಿಯು ಧಾರ್ಮಿಕ ಆಚರಣೆಗಳ ಜಗತ್ತಿಗೆ ಮತ್ತು ಅಂಥ ಆಚರಣೆಗಳ ವ್ಯಾಖ್ಯಾನಕ್ಕೆ ಸೀಮಿತವಾಗಿದ್ದಂತೆ ತೋರುತ್ತದೆ; ಮುಂದೆ ಪ್ರಚಾರಕ್ಕೆ ಬಂದ ಹೊಸ ರೂಪಗಳು ಅದುವರೆಗೆ ಚಾಲ್ತಿಗೆ ಬಂದಂತೆ ಕಾಣುವುದಿಲ್ಲ.

ಸಂಸ್ಕೃತದ ಇಂಥ ಎರಡು ಆವರಣಗಳ ನಡುವೆ – ಒಂದು ಕಡೆಗೆ ತುಂಬ ಸೀಮಿತವಾದ ಧಾರ್ಮಿಕ-ಶೈಕ್ಷಣಿಕ ಬಳಕೆಯ ಆವರಣ ಮತ್ತು ಇನ್ನೊಂದು ಕಡೆಗೆ ಹೊಸ ಲಿಖಿತ ಸಾಹಿತ್ಯವನ್ನೊಳಗೊಂಡ ಸಂಸ್ಕೃತದ ರಾಜಕೀಯ ಬಳಕೆಯ ಆವರಣಗಳ ನಡುವೆ – ನಾನಿಲ್ಲಿ ಮಾಡುತ್ತಿರುವ ಭೇದವು ಉತ್ಪ್ರೇಕ್ಷಿತವೆಂದು ಕಂಡೀತು. ಆದರೆ, ಆಮೇಲೆ ಶಾಸನಗಳ ಮೂಲಕ ಕಾಣಿಸಿಕೊಂಡಂಥ ಸಂಸ್ಕೃತ ಭಾಷೆಯ ಇತಿಹಾಸವು



ಮೊದಲಿನ ಸಂಸ್ಕೃತದ ಬಳಕೆಗಳಿಗಿಂತ ತುಂಬ ವಿಸ್ತಾರವಾದ ಭಿನ್ನತೆಗಳನ್ನೊಳಗೊಂಡಿದ್ದು – ಎನ್ನುವುದಂತೂ ನಿಜ. ಇಂಥ ಶಾಸನ ಸಾಹಿತ್ಯವು ೨-೩ನೆಯ ಶತಮಾನದ ಹೊತ್ತಿಗೆ ಉತ್ತರ ಭಾರತದಲ್ಲಿ ಒಮ್ಮೆ ಕಾಣಿಸಿಕೊಂಡದ್ದೇ ತಡ, ಉಳಿದ ಕಡೆಗಳಲ್ಲೂ ಕೂಡಾ ಅಸಾಧಾರಣ ವೇಗದಲ್ಲಿ ಸಂಸ್ಕೃತದ ಬಳಕೆಯನ್ನು ಆರಂಭಿಸಲಾಯಿತು. ಒಂದೇ ಶತಮಾನದ ಅವಧಿಯೊಳಗಡೆ, ಭಾರತದಾದ್ಯಂತ ಶಾಸನಗಳಲ್ಲಿ ಪ್ರಾಕೃತಗಳನ್ನು ಬಳಸುವ ರೂಢಿ ಬಿಟ್ಟೇ ಹೋಯಿತು; ಆಮೇಲೂ ಕೂಡಾ ಪ್ರಾಕೃತವು ಇಂಥ ಬಳಕೆಯಿಂದ ಹೊರದೂಡಲ್ಪಟ್ಟು ಅಲ್ಲಲ್ಲಿ ಪಳೆಯುಳಿಕೆಯಂತೆ ಉಳಿದುಕೊಂಡಿತು.

ಶಾಸನಗಳಲ್ಲಿ ಸಂಸ್ಕೃತದ ಬಳಕೆ ಮತ್ತು ಕಾವ್ಯಪ್ರಕಾರದ ಉತ್ಥಾನ – ಈ ಪ್ರಕ್ರಿಯೆಯ ಒಂದು ಅತ್ಯಂತ ಪ್ರಮುಖ ಲಕ್ಷಣವೆಂದರೆ, ಶಾಸನಗಳ ಆವರಣದೊಳಗಿನ ಭಾಷಾಶಾಸ್ತ್ರೀಯ ಶ್ರಮವಿಭಾಗ. ಇದಕ್ಕೆ ಸಂವಾದಿಯಾದ ಇನ್ನೊಂದು ಪ್ರಕ್ರಿಯೆ – ಸಂಸ್ಕೃತವಿಶ್ವವು ರೂಪುಗೊಳ್ಳುತ್ತಿದ್ದ ಈ ಅವಧಿಯುದ್ದಕ್ಕೂ ದೇಶಭಾಷಾಸಾಹಿತ್ಯದ ಮೌನಸ್ಥಿತಿ. ಒಮ್ಮೆ ಸಂಸ್ಕೃತವು ದಕ್ಷಿಣ ಏಶಿಯಾದಾದ್ಯಂತ ರಾಜಕೀಯ ಪ್ರಜ್ಞೆಯ ಸಾರ್ವಜನಿಕ ಅಭಿವ್ಯಕ್ತಿಯ ಸಾಧನವಾಗಿ ಆರೂಢವಾಗಿದ್ದೇ ತಡ ಅದು ಆ ಉದ್ದೇಶಕ್ಕೆ ಬಳಸಲ್ಪಡುವ ಏಕೈಕ ಭಾಷೆಯೂ ಆಗಿಬಿಟ್ಟಿತು. ಆಗ, ಶಾಸನಗಳ ಆವರಣದಲ್ಲಿ ದೇಶಭಾಷೆಗಳು ಮಾತಾಡುವುದಕ್ಕೆ ಪೂರ್ಣ ನಿಷೇಧವನ್ನೇನೂ ಹೇರಲಿಲ್ಲ, ಆದರೆ, ಅದಕ್ಕೆ ಮಿತಿಗಳನ್ನು ಹಾಕಲಾಯಿತು. ಒಂದು ಮಾದರಿ ಶಾಸನವು ಆರಂಭವಾಗುವುದು ಆ ಶಾಸನವನ್ನು ಬರೆಸುತ್ತಿರುವ ದೊರೆಯ ಸ್ತುತಿ ಮತ್ತು ವಂಶಾವಳಿಯ ವರ್ಣನೆಯೊಂದಿಗೆ; ಆಮೇಲೆ ಆ ಶಾಸನವು ದಾಖಲಿಸಲಿಕ್ಕೆ ಹೊರಟ ವ್ಯವಹಾರದ ವಿವರಗಳು ಬರುತ್ತವೆ. (ದಾನಕೊಟ್ಟ ಭೂಮಿಯ ಗಡಿಗಳು, ದೇಗುಲಕ್ಕೆ ಕೊಡಮಾಡಿದ ಆಸ್ತಿಯ ಷರತ್ತುಗಳು ಇತ್ಯಾದಿ). ಇಲ್ಲಿ ಒಮ್ಮೆ ದೇಶಭಾಷೆಗಳಿಗೆ ಏನಾದರೂ ಅವಕಾಶ ಸಿಕ್ಕರೆ, ಅದು ಈ ವ್ಯವಹಾರಸಂಬಂಧಿಯಾದ ಎರಡನೆಯ ಭಾಗದಲ್ಲಿ; ಅಂದರೆ, ಅವುಗಳ ಉದ್ದೇಶ – ಅಳೆಯುವುದು, ಲೆಕ್ಕಹಾಕುವುದು ಇತ್ಯಾದಿ ಸ್ಥಳೀಯ ವಿಚಾರಗಳು ಮಾತ್ರ. ಸಾಹಿತ್ಯಕವಾದ ಕೆಲಸವೇನಿದ್ದರೂ ಅದು ಸಂಸ್ಕೃತ ಕಾವ್ಯಕ್ಕೆ ಮೀಸಲು. ಅದು ಇಲ್ಲಿ ತನ್ನ ಹುಟ್ಟು, ವೈಭವ, ಸೌಂದರ್ಯ, ನಿರಂತರತೆಗಳನ್ನು ವರ್ಣಿಸುವ ಮೂಲಕ ಅಧಿಕಾರವನ್ನು ಆವಾಹಿಸುವ ಕೆಲಸ ಮಾಡುತ್ತದೆ; ಈ ಲೋಕವನ್ನು ವ್ಯಾಖ್ಯಾನಿಸುವ ಮತ್ತು ನಿಜವಾಸ್ತವಕ್ಕೆ ಭಿನ್ನವಾದ ಸಾಹಿತ್ಯಕವಾಸ್ತವವೊಂದನ್ನು ಕಟ್ಟಿಕೊಡುತ್ತದೆ. ಇಂಥ ಶ್ರಮವಿಭಜನೆಯ ಮೂಲಕ ಹುಟ್ಟುವ ಪರಸ್ಪರ ವಿಭಿನ್ನ ಭಾಷೆಗಳ ಸಹಯೋಗ ಮತ್ತು ವರ್ಗೀಕರಣವೇನಿದೆ ಅದನ್ನೇ

ನಾನು 'ಹೈಪರ್‌ಗ್ಲಾಸಿಯಾ' (ಭಾಷಾತರತಮವ್ಯವಸ್ಥೆ) ಎಂದು ಕರೆಯುತ್ತೇನೆ. ಸಂಸ್ಕೃತ ಭಾಷೆಯ ಆತ್ಯಂತಿಕ ಆಕರ್ಷಣೆಗೆ ಕಾರಣವಾದ ಸೌಂದರ್ಯಾತ್ಮಕತೆಯನ್ನು ಪೋಷಿಸುವ ಕೆಲಸವನ್ನು ಇಂಥ ಶ್ರಮವಿಭಾಗವು ಮಾಡುತ್ತದೆ.

ಶಾಸನಗಳ ಇಂಥ ಶ್ರಮವಿಭಾಗಕ್ಕೆ ಸಂಬಂಧಿಯಾಗಿರುವ ಇನ್ನೊಂದು ಅಂಶ – ಸಾಹಿತ್ಯ ಭಾಷೆಯ ಲಕ್ಷಣಗಳನ್ನು ನಿಗದಿಪಡಿಸುವ 'ಅಲಂಕಾರ' ಪದ್ಧತಿಯ ಪ್ರಸ್ಥಾನ. ೭ನೆಯ ಶತಮಾನದಿಂದ ಮುಂದೆ ಈ ಪ್ರಸ್ಥಾನವು ಎಷ್ಟು ಪ್ರಚಾರಕ್ಕೆ ಬರತೊಡಗಿತು ಎಂದರೆ ಆಬಳಿಕ 'ಕಾವ್ಯ'ವೆಂಬುದನ್ನು ಸೀಮಿತವಾದ ಕೆಲವೇ ಭಾಷೆಗಳ ಆವರಣದಲ್ಲಿ ಮಾತ್ರ ನಿರ್ಮಿಸಲು ಸಾಧ್ಯವೆನ್ನುವ ನಂಬಿಕೆ ರೂಢಿಯಾಯಿತು. ಅಂಥ ಭಾಷೆಗಳಲ್ಲಿ ಸಹಜವಾಗಿಯೇ ಸಂಸ್ಕೃತಕ್ಕೆ ಮೊದಲ ಸ್ಥಾನ; ಅದನ್ನು ಬಿಟ್ಟರೆ ಎರಡನೆಯ ಸ್ಥಾನ – ಸಂಸ್ಕೃತಕ್ಕಿಂತ ತನ್ನ ತಾತ್ವಿಕತೆಯಲ್ಲಿ ಮತ್ತು ಸಾಹಿತ್ಯನಿರ್ಮಾಣವ್ಯಾಪ್ತಿಯಲ್ಲಿ ಸಾಕಷ್ಟು ಹಿಂದಿದ್ದ ಮಹಾರಾಷ್ಟ್ರೀಪ್ರಾಕೃತ ಮತ್ತು ಅಪಭ್ರಂಶಗಳಿಗೆ. ಇವೆರಡೂ ಭಾಷೆಗಳೂ ಸಂಸ್ಕೃತದ ಪ್ರಭಾವದಿಂದಲೇ ವಿಶ್ವಾತ್ಮಕ ಭಾಷೆಯ ಸಹಯೋಗಕ್ಕೆ ಅರ್ಹತೆ ಗಳಿಸಿದಂಥವು ಮತ್ತು ಆದ್ದರಿಂದಲೇ ಸಂಸ್ಕೃತ ವಿಶ್ವದಲ್ಲಿ ಎಲ್ಲಿ ಬೇಕಾದರೂ ಸಾಹಿತ್ಯಸೃಷ್ಟಿಗೆ ಬಳಸಬಲ್ಲಂಥದಾಗಿ ಕಾಣಿಸಿಕೊಂಡಂಥವು.[೫] ಆದರೆ, 'ಕಾವ್ಯ'ವನ್ನು ಮಾತ್ರ ದೇಶಭಾಷೆಯಲ್ಲಿ ಸೃಷ್ಟಿಸುವುದು ಆಗ ಅಸಾಧ್ಯವಾಗಿತ್ತು. ಆದ್ದರಿಂದಲೇ ಆ ಕಾಲದಲ್ಲಿ ಕನ್ನಡ ಮರಾಠಿಯಿಂದತೊಡಗಿ ಒರಿಯಾದವರೆಗಿನ ಎಲ್ಲ ಪ್ರಾಂತ್ಯಭಾಷೆಗಳೂ ಮೌನದಲ್ಲಿ ಉಳಿಯಬೇಕಾಯಿತು.

ಹೀಗೆ, ಭಾರತ ಉಪಖಂಡದಲ್ಲಿ ಶಾಸನಸೃಷ್ಟಿಗೆ ಸಂಬಂಧಿಸಿ ಸಂಸ್ಕೃತದ ಕಡೆಗಿನ ಒಲವು ಕಾಣಿಸಿಕೊಂಡಿದ್ದು ಹಾಗೂ ರಾಜಕೀಯ ಮತ್ತು ಸಾಹಿತ್ಯಕವಾಗಿ ಕೂಡಾ ಇದು ಸಾರ್ವಜನಿಕ ಆವರಣಗಳಲ್ಲಿ ವ್ಯಕ್ತಗೊಳ್ಳತೊಡಗಿದ್ದು – ಇವೆಲ್ಲ ಆಗತೊಡಗಿದಾಗ, ಇನ್ನೊಂದು ಕಡೆಗೆ, ಈ ಪ್ರಕ್ರಿಯೆ ನಾವಿವತ್ತು ಬರ್ಮಾ, ಥಾಯ್ಲೆಂಡ್, ಲಾವೋಸ್, ಕಾಂಬೋಡಿಯಾ, ವಿಯೆಟ್ನಾಮ್, ಮಲೇಶಿಯಾ ಮತ್ತು ಇಂಡೋನೇಶಿಯಾಗಳೆಂದು ಕರೆಯುವ ಪ್ರಾಂತ್ಯಗಳಲ್ಲೂ ಆಶ್ಚರ್ಯವೆನಿಸುವಷ್ಟು ಏಕಕಾಲದಲ್ಲಿ ಸಂಭವಿಸಿತು ಎನ್ನುವುದು ಗಮನಾರ್ಹ ಸಂಗತಿ. ಸರಿಸುಮಾರು ಇದೇ ಕಾಲದಲ್ಲೇ, ಅಂದರೆ ಭಾರತದಲ್ಲಿ ಈ ವಿದ್ಯಮಾನಗಳು ನಡೆದ ಕೇವಲ ಎರಡು ಮೂರು ತಲೆಮಾರಿನ ಅಂತರದಲ್ಲೇ, ಹೆಚ್ಚೆಂದರೆ ಕ್ರಿ.ಶ. ೫ನೆಯ ಶತಮಾನದೊಳಗೆ, ಸಂಸ್ಕೃತದ ಮೊದಲ ಪದ್ಯಗಳು ಖ್ಮೇರ್ ನಾಡಿನಲ್ಲೂ ಚಂಪಾ, ಜಾವಾ, ಕಾಲಿಮಂಥನ್‌ಗಳಲ್ಲೂ ಸಾರ್ವಜನಿಕವಾಗಿ ಕಾಣಿಸಿಕೊಂಡವು. ಮಾತ್ರವಲ್ಲ ಕೆಲವೆಡೆ ಈ ಪ್ರಕ್ರಿಯೆಯು ಮುಂದಿನ ಒಂದು ಸಹಸ್ರವರ್ಷಗಳ ಕಾಲ ತಡೆಯಿಲ್ಲದೆ ಮುಂದುವರೆಯಿತು;



ಉದಾಹರಣೆಗೆ, ಕಾಂಬೋಡಿಯಾದ ಕಡೆಯ ಸಂಸ್ಕೃತ ಶಾಸನವು ಕ್ರಿ.ಶ. ೧೨೯೫ರ ಸುಮಾರಿನದೆಂದು – ಅಂದರೆ ಅಂಕೋರ್ ಪಟ್ಟಣದ ಅವನತಿಗೆ ತುಸುವೇ ಹಿಂದಿನ ಕಾಲದ್ದೆಂದು – ಹೇಳಲಾಗಿದೆ.

ಮೇಲೆ ಉಲ್ಲೇಖಿಸಿದ ಸಾಹಿತ್ಯ-ಸಂಸ್ಕೃತಿಗಳ ರಾಜಕೀಯಾತ್ಮಕ ಪ್ರಕ್ರಿಯೆಗೆ ಒಳ್ಳೆಯ ಉದಾಹರಣೆ ನಮಗೆ ಕ್ರಿ.ಶ. ೬೦೦-೧೩೦೦ರ ನಡುವಿನ ಖ್ಮೇರ್ ನಾಡಿನಲ್ಲಿ ಕಾಣಸಿಗುತ್ತದೆ. ಇಲ್ಲಿ, ಆ ಕಾಲದಲ್ಲಿ, ಸಾರ್ವಜನಿಕ ಕಾವ್ಯದ ಜಗತ್ತು ಸಂಸ್ಕೃತ ವಿಶ್ವದೊಳಗೇ ಸೀಮಿತಗೊಂಡಿತ್ತು. ಆದರೆ, ಶಾಸನಗಳು ಮಾತ್ರ ಸಂಸ್ಕೃತದ ಜತೆಜತೆಗೇ ಖ್ಮೇರ್ ಭಾಷೆಯಲ್ಲೂ ಆರಂಭಗೊಂಡಿವೆ. ಅಲ್ಲಿನ ಸುಮಾರು ಅರ್ಧಾಂಶ ಶಾಸನಗಳು ಖ್ಮೇರ್ ಭಾಷೆಯಲ್ಲೇ ಇದ್ದರೆ ಮೂರನೆಯ ಒಂದಂಶ ಸಂಸ್ಕೃತದಲ್ಲೂ ಕಾಲುಭಾಗ ಎರಡೂ ಭಾಷೆಗಳ ಮಿಶ್ರಣದಲ್ಲೂ ಇದ್ದಾವೆ. ಆದರೆ, ಇವೆಲ್ಲದರಲ್ಲೂ ತಪ್ಪದೇ ಕಾಣಿಸುವ ಒಂದು ಲಕ್ಷಣ – ಈ ಮೊದಲು ಭಾರತದ ಶಾಸನಗಳಿಗೆ ಸಂಬಂಧಿಸಿ ನಾನು ಹೇಳಿದ 'ಹೈಪರ್‌ಗ್ಲಾಸಿಯಾ' ಎಂಬಂಥದು; ಭಾಷೆಗಳ ನಡುವೆ ಶ್ರಮವಿಭಜನೆಯನ್ನು ಕಾಣಿಸುವಂಥದು. ಈ ಶಾಸನಗಳಲ್ಲಿ ವರ್ಣನಾತ್ಮಕ ಮಾತುಗಳೆಲ್ಲ ಖ್ಮೇರ್ ಭಾಷೆಯಲ್ಲಿರದೆ ಸಂಸ್ಕೃತದಲ್ಲಿ ಬಂದಿವೆ; ಆದರೆ ಪರಿಮಾಣಾತ್ಮಕ ಮಾತುಗಳೆಲ್ಲ ಹೆಚ್ಚಾಗಿ ಖ್ಮೇರ್‌ನಲ್ಲೂ ಅಪರೂಪಕ್ಕೆ ಸಂಸ್ಕೃತದಲ್ಲೂ ಬಂದಿವೆ. ಒಬ್ಬ ರಾಜನ ಪ್ರಸಿದ್ಧಿಯನ್ನು ಹೊಗಳುವಾಗ ಯಾ ಅವನ ವಂಶಾವಳಿಯನ್ನೋ ಯುದ್ಧದ ಗೆಲುವನ್ನೋ ಘೋಷಿಸುವಾಗ ಬರಹಗಾರ ಸಂಸ್ಕೃತವನ್ನು ಬಳಸುತ್ತಾನೆ; ಅದೇ ಒಂದು ದೇಗುಲಕ್ಕೆ ಆ ರಾಜ ಉಂಬಳಿ ಕೊಟ್ಟ ಗುಲಾಮರ ಪಟ್ಟಿಯನ್ನು ಖ್ಮೇರ್ ಭಾಷೆಯಲ್ಲಿ ಕೊಡುತ್ತಾನೆ. ಜತೆಗೆ, ಈ ಎರಡೂ ಭಾಷೆಗಳ ನಡುವಿನ ಪರಸ್ಪರ ಸಂಬಂಧ ಕೂಡಾ ಅಸಮಾನತೆಯುಳ್ಳದ್ದು. ಸಂಸ್ಕೃತವು ಖ್ಮೇರ್‌ನಿಂದ ಯಾವತ್ತೂ ಪ್ರಭಾವಿತವಾಗದೇ ಉಳಿದಿದೆ; ಅಂಕೋರ್ ನಗರದ ಅವಸಾನದವರೆಗೂ ಅದರ ವ್ಯಾಕರಣ ಮತ್ತು ಸಂರಚನೆಗಳಲ್ಲಿ ಖಚಿತ ಸಾತತ್ಯ ಮುಂದುವರೆದುಕೊಂಡಿದೆ. ಆದರೆ, ಖ್ಮೇರ್ ಮೊದಲಿನಿಂದಲೂ ಸಂಸ್ಕೃತದ ಪ್ರಭಾವದಿಂದ ಆಕ್ರಮಣಕ್ಕೊಳಗಾಗುತ್ತಲೇ ಬಂದಿದೆ. ಹೀಗೆ, ಶಾಸನಭಾಷೆ ಮತ್ತು ಸಾಹಿತ್ಯಭಾಷೆಗಳ ನಡುವಿನ ಈ ಸಂಬಂಧವು ಸೂಚಿಸುವಂತೆ, ಆರಂಭದ ಸುಮಾರು ಒಂದು ಸಾವಿರ ವರ್ಷ ಕಾಂಬೋಡಿಯಾದಲ್ಲಿ ಸಾಹಿತ್ಯಕಕಾವ್ಯವೆಂಬುದು ಸಂಸ್ಕೃತ ಕಾವ್ಯವೇ ಆಗಿತ್ತು; ಹಳೆಯಖ್ಮೇರ್ ಭಾಷೆಯನ್ನು ಅದು ಯಾವತ್ತೂ ಬಳಸಿದ್ದಿಲ್ಲ. ಖ್ಮೇರ್ ಭಾಷೆಯಲ್ಲೇನಾದರೂ ಸಾಹಿತ್ಯನಿರ್ಮಾಣ ಆದಂತೆ ಕಾಣತೊಡಗುವುದು ೧೫ನೆಯ ಶತಮಾನದಲ್ಲೇ. ಅಂದರೆ, ಅಂಕೋರ್ ನಗರವನ್ನು ತ್ಯಜಿಸಿದ ಒಂದು ಶತಮಾನದ ಬಳಿಕ; ಅರ್ಥಾತ್, ದಕ್ಷಿಣ ಏಶಿಯಾದ

ಸಂಸ್ಕೃತವಿಶ್ವವು ತನ್ನ ಕಟ್ಟಕಡೆಯ ಆ ರಾಜಧಾನಿಯನ್ನು ಕಳೆದುಕೊಂಡ ಬಳಿಕವೇ (ಖಿಂಗ್ ೧೯೯೦, ೨೪-೫೯). ನಮಗೀಗ ಉಳಿದಿರುವ ಖ್ಮೇರ್ ಭಾಷೆಯ ಹಳೆಯ ಪಠ್ಯಗಳ ಉದಾಹರಣೆಯಿಂದ ಮತ್ತು ಆಮೇಲಿನ ಖ್ಮೇರ್ ಭಾಷಾಸಾಹಿತ್ಯದ ಇತಿಹಾಸದಿಂದ ನಮಗೆ ಸೂಚಿತವಾಗುವ ಸಂಗತಿಯೆಂದರೆ – ಯಾವತ್ತಿನವರೆಗೆ ಸಂಸ್ಕೃತ ಸಾಹಿತ್ಯ ಸಂಸ್ಕೃತಿಯ ಇಳಿತ ಆಗಲಿಲ್ಲವೋ ಅಲ್ಲಿಯತನಕವೂ ಖ್ಮೇರ್ ಭಾಷೆಯು ಸಾಹಿತ್ಯಕ ಅಭಿವ್ಯಕ್ತಿಗೆ ಬಳಕೆಯಾಗುವುದು ಸಾಧ್ಯವೇ ಆಗಲಿಲ್ಲ ಎನ್ನುವುದು.

ಸಂಸ್ಕೃತದ ಇಂಥ ರಾಜಕೀಯ ಪ್ರಭಾವವು ಹರಡಿಕೊಂಡ ಈ ಪ್ರಕ್ರಿಯೆಯು ವಿಶಾಲ ಸ್ಥಳದಲ್ಲಿ ಅಸಾಧಾರಣ ವೇಗದಿಂದ ಸಂಭವಿಸಿತು ಮಾತ್ರವಲ್ಲ, ಇಂಥ ಪ್ರಕ್ರಿಯೆಗೆ ಇನ್ನೊಂದು ಸಮಾನಾಂತರ ವಿದ್ಯಮಾನವು ಜಗತ್ತಿನ ಇತಿಹಾಸದಲ್ಲೇ ಇನ್ನೆಲ್ಲೂ ನಡೆದದ್ದಿಲ್ಲ. ಮೊದಲನೆಯದಾಗಿ, ಈ ಪ್ರಕ್ರಿಯೆಯ ಹಿಂದೆ ರೋಮನ್ ಸಾಮ್ರಾಜ್ಯದಂತಹ ಯಾವುದೇ ರಾಜಕೀಯ ಶಕ್ತಿಯು ಕೆಲಸ ಮಾಡಲಿಲ್ಲ. ಆ ಕಾಲದಲ್ಲಿ ದಕ್ಷಿಣ ಏಶಿಯಾದ ಮೇಲೆ ಯಾವುದೇ ವಸಾಹತುಶಾಹಿ ಆಕ್ರಮಣವೂ ಜರುಗಿತೆಂದು ಹೇಳಲಾಗುವುದಿಲ್ಲ. ಅಲ್ಲಿ ಯಾವುದೇ ಸೈನಿಕ ವಿಜಯವೂ ನಡೆಯಲಿಲ್ಲ; ಬಹಳ ದೊಡ್ಡ ಜನಸಂಖ್ಯಾ ವಲಸೆಯೂ ಸಂಭವಿಸಲಿಲ್ಲ. ಅಥವಾ ರಾಜಕೀಯ ಒತ್ತಾಯದ ಮತ್ತು ಆರ್ಥಿಕ ಅವಲಂಬನೆಯ ಯಾವ ಶೋಷಣೆಯನ್ನೂ ಅಲ್ಲಿ ತೋರಿಸಲು ಸಾಧ್ಯವಿಲ್ಲ. ಎರಡನೆಯದಾಗಿ, ಸಂಸ್ಕೃತದ ಈ ಹರಡುವಿಕೆಗೆ ಕಾರಣವಾದದ್ದು ಯಾವುದೇ ಒಂದು ನಿರ್ದಿಷ್ಟ ಏಕೀಕೃತ ಗ್ರಂಥಾಧಾರಿತ ಧರ್ಮವೂ ಅಲ್ಲ, ಹೊಸದೊಂದು ಧಾರ್ಮಿಕ ಕ್ರಾಂತಿಯಾಗಲೀ ಧಾರ್ಮಿಕ ಅರಿವಿನ ಸ್ಫೋಟವಾಗಲೀ ಆಗ ಸಂಭವಿಸಿದ್ದಿಲ್ಲ. ಇದಿಷ್ಟೂ ನಡೆದದ್ದು ಅಲ್ಪಸಂಖ್ಯಾತವಾಗಿದ್ದ ಒಂದು ಅಕ್ಷರಸ್ಥ ಸಮೂಹದಿಂದ; ಅವರು ಹೋದಲ್ಲೆಲ್ಲ ಹೊತ್ತೊಯ್ದ ಹಲವು ಬಗೆಯ ವಿಭಿನ್ನ ಸಿದ್ಧಾಂತಗಳುಳ್ಳ, ಬೇರೆ ಬೇರೆ ಧರ್ಮಗಳ ಅಥವಾ ಧರ್ಮಕ್ಕೆ ಸಂಬಂಧವೇಪಡದ ಸಾಹಿತ್ಯ ಗ್ರಂಥಗಳ ಮೂಲಕ. ಮೂರನೆಯದಾಗಿ, ಸಂಸ್ಕೃತವು ಯಾವತ್ತೂ ಗ್ರೀಕ್, ಲ್ಯಾಟಿನ್, ಅರೇಬಿಕ್, ಪರ್ಶಿಯನ್, ಚೀನೀ ಭಾಷೆಗಳ ಹಾಗೆ ಪ್ರಾಂತ್ಯಪ್ರಾಂತ್ಯಗಳ ನಡುವಿನ ಸಂಪರ್ಕಮಾಧ್ಯಮವಾಗಿ ಕೆಲಸಮಾಡಿದ್ದಿಲ್ಲ. ನಿಜವಾಗಿ, ಈ ಕಾಲದ ಸಂಸ್ಕೃತವು ಯಾವುದೇ ಸ್ಥಳದಲ್ಲೂ ನಿತ್ಯಜೀವನದ ಸಂಪರ್ಕಭಾಷೆಯಾಗಿ ಕೆಲಸಮಾಡಿದ ಉಲ್ಲೇಖವೇ ನಮಗೆ ಕಾಣುವುದಿಲ್ಲ; ಈ ಮಾತು ಇಡಿಯ ದಕ್ಷಿಣ ಏಶಿಯಾಕ್ಕೇ ಅನ್ವಯಿಸಿ ಹೇಳಬಹುದಾದ್ದು. ಅಥವಾ, ಈ ಭಾಷೆಯು ಆಡಳಿತಕ್ಕಾಗಲೀ ನೌಕರಶಾಹಿಗಾಗಲೀ ಕೂಡಾ ಯಾವರೀತಿಯಲ್ಲೂ ಸಹಾಯ ಮಾಡಿದ್ದು ಕಾಣುವುದಿಲ್ಲ.



ಸರಿಸುಮಾರು ಕ್ರಿ.ಶ. ೨೦೦-೩೦೦ರಿಂದ ೧೩೦೦ರವರೆಗಿನ (ಅಂದರೆ ಅಂಕೋರ್ ನಗರ ತ್ಯಜಿಸುವವರೆಗಿನ) ಸಹಸ್ರಮಾನದಲ್ಲಿ, ಪ್ರಾಚೀನ ಯುಗಕ್ಕೆ ವಿಸಂಗತವೆನ್ನಬಹುದಾದ ಜಾಗತಿಕ ಸಾಂಸ್ಕೃತಿಕ ಸಂರಚನೆಯೊಂದು ಸೃಷ್ಟಿಯಾಯಿತು. ಈ ಸಂರಚನೆಯ ಪ್ರಮುಖ ವೈಶಿಷ್ಟ್ಯ – ಬಹುತೇಕ ಏಕರೂಪತೆಯನ್ನು ಹೊಂದಿದ ಸಂಸ್ಕೃತ ಕಾವ್ಯದ ರಾಜಕೀಯ ಭಾಷೆಯೊಂದು ನಿರ್ಮಾಣಗೊಂಡಿದ್ದು ಮತ್ತು ಅದಕ್ಕೆ ಸಂವಾದಿಯಾಗಿ ದೇವಾಲಯ ನಿರ್ಮಾಣ, ನಗರಯೋಜನೆ ಮತ್ತು ಭೌಗೋಲಿಕ ನಾಮಕರಣ ಇತ್ಯಾದಿ ಸಮಾನಾಂತರ ಸಾಂಸ್ಕೃತಿಕ ಪದ್ಧತಿಗಳು ಆರಂಭವಾಗಿದ್ದು. ಆಲಿವರ್ ವೋಲ್ಟರ್ಸ್‌ನ ಮಾತನ್ನು ವಿಸ್ತರಿಸಿ ಹೇಳುವುದಾದರೆ – ಆ ಮಾತುಗಳು ಅಂಥ ವಿಸ್ತರಣಾನ್ವಯಕ್ಕೆ ಯೋಗ್ಯವಾಗಿಯೇ ಇವೆ – ಈ ಕಾಲಾವಧಿಯಾದ್ಯಂತ ಬೇರೆಬೇರೆ ಕ್ಷೇತ್ರಗಳ ಸುಸಂಸ್ಕೃತ ವರ್ಗವು ''ವಿಶಾಲ ತಳಹದಿಯ ಒಂದು ಧೋರಣೆಯ ಸಮುದಾಯ''ವನ್ನು ನಿರ್ಮಿಸಿಕೊಂಡದ್ದೇ ಅಲ್ಲದೆ, ಒಂದು ಸಾಧಾರಣೀಕೃತ ಸಂಸ್ಕೃತದ ''ಸರ್ವವ್ಯಾಪಿ ಸಂಜ್ಞಾಗುಣ''ವನ್ನು ಗ್ರಹಿಸಿಕೊಂಡಿತು (ವೋಲ್ಟರ್ಸ್ ೧೯೮೨, ೪೩). ಆದರೆ ಈ ಸಂರಚನೆಯು ನಿರ್ಮಿತವಾದದ್ದು ಮತ್ತು ಪೋಷಿತವಾದದ್ದು ಪ್ರಾಚೀನಯುಗದ ಬೇರೆಡೆಗಳಲ್ಲಿ ಕಾಣಬಹುದಾದ ಸ್ಥಳೀಯೇತರ ಶಕ್ತಿಗಳ ಮೂಲಕ ಅಲ್ಲ; ಆದ್ದರಿಂದಲೇ ಇದೊಂದು ಕೇಂದ್ರವಿಲ್ಲದ ಪರಿಧಿಯ ಹಾಗೆ, ಏಕತೆಯಿಲ್ಲದ ಸಮುದಾಯದ ಹಾಗೆ. ಹೀಗೆ, ಈ ಸಂರಚನೆಗೆ ಪರಿಚಿತವಾದ ಭೌತಿಕ, ಆಡಳಿತಾತ್ಮಕ ಮತ್ತು ಧಾರ್ಮಿಕ ಏಕೀಕರಣದ ನಿಯಮಗಳು ಅನ್ವಯವಾಗುವುದಿಲ್ಲವೆಂದಾದರೆ ಈ ಜಾಗತಿಕ ಸಂಸ್ಕೃತಿಗೆ ಔಚಿತ್ಯವಾದರೂ ಏನು – ಎಂದು ಆಶ್ಚರ್ಯವಾಗುತ್ತದೆ. ಉದಾಹರಣೆಗೆ, ಈ ಆಳುವ ಸುಸಂಸ್ಕೃತ ವರ್ಗವು ಸರ್ವವ್ಯಾಪಿ ಲಕ್ಷಣವುಳ್ಳ ಸಂಸ್ಕೃತ ಪಠ್ಯಗಳ ಸಮೂಹದ ಮೂಲಕ ಮಾಡಿದ ಸಾಂಸ್ಕೃತಿಕ ಕಾರ್ಯವಾದರೂ ಏನು? ಈ ಸಂರಚನೆಯು, ಈ ಭಾಗದ ಜಗತ್ತಿನಾದ್ಯಂತ, ಉದ್ಭವವಾಗಿದ್ದು ಇಲ್ಲಿನ ಅಧಿಕಾರ ಕೇಂದ್ರಗಳಿಂದ ಎನ್ನುವ ಕಾರಣದಿಂದಾಗಿ, ಈ ಪ್ರಕ್ರಿಯೆಯನ್ನು ವಿವರಿಸಲು ರಾಜಕೀಯವೆಂಬ ಅಂಶವನ್ನು ಎಳೆದುತರುವುದು ಸಹಜವೇ; ಆದರೆ, ಈ ರಾಜಕೀಯ ಮಾತ್ರ ತುಸು ಅಸ್ಪಷ್ಟವಾದದ್ದು, ಅಪರಿಚಿತ ತರ್ಕವುಳ್ಳದ್ದು.

ಈ ಸಂರಚನೆಯ ತರ್ಕವನ್ನು ಹೀಗೆ, ನಾವು ಗುರುತಿಸಲು ಹೊರಡುತ್ತಿದ್ದಂತೆಯೇ ಇನ್ನೊಂದು ಸವಾಲು ಎದುರಾಗುತ್ತದೆ – ಅದು, ಆಧುನಿಕಪೂರ್ವ ಜಗತ್ತನ್ನು ಆಧುನಿಕತೆಯಿಂದ ಬಳುವಳಿಯಾಗಿ ಬಂದ ಸಾಧನಗಳ ಮೂಲಕವೇ ಅರ್ಥೈಸಬೇಕಾದ ಅನಿವಾರ್ಯತೆಯ ಸವಾಲು. ಇದುವರೆಗೂ ಈ ವಿಶ್ವಾತ್ಮಕ ಸಂಸ್ಕೃತ ಸಂಸ್ಕೃತಿಯ ಸಾಮಾಜಿಕ ತಳಹದಿಯನ್ನು ಅರ್ಥೈಸಲು ನಮಗೆ ಲಭ್ಯವಿರುವುದು ಒಂದೇ

ತಾತ್ವಿಕ ಪ್ರಸ್ಥಾನ.  ಅದು, ಅಧಿಕಾರಕೇಂದ್ರಿತ ಸಿದ್ಧಾಂತ ಮತ್ತು ಆ ಸಿದ್ಧಾಂತದ ಯಾಂತ್ರಿಕ ತರ್ಕಸಮೂಹ.  ಈ ವಿವರಣೆಯ ಪ್ರಕಾರ – ಸಾಮಾಜಿಕ ಅಧಿಕಾರದ ಈ ಹೊಸ ರೂಪಗಳನ್ನು ಅಧೀನದಲ್ಲಿರಿಸಿಕೊಂಡ ಸುಸಂಸ್ಕೃತವರ್ಗವು ಸಂಸ್ಕೃತದ ನಿಗೂಢ ಸಂಜ್ಞೆ-ಸಂಕೇತಗಳನ್ನು ಬಳಸುವ ಮೂಲಕ ಸಾಮಾಜಿಕ ಸಮ್ಮತಿಯನ್ನು ಗಳಿಸಿಕೊಂಡಿತ್ತು.  ಆದರೆ ಈ ಸಿದ್ಧ ವಿವರಣೆಯು ಕಾಲವಿಸಂಗತ ಮಾತ್ರವೇ ಅಲ್ಲ, ಅದು ಒಂದು ಊಹೆಯಷ್ಟೇ.  ಜತೆಗೆ, ಇದು ಬೌದ್ಧಿಕವಾಗಿ ಜಡವಾದದ್ದು, ಸಾಂಸ್ಕೃತಿಕವಾಗಿ ಏಕರೂಪಿ ಗುಣವುಳ್ಳದ್ದು ಮತ್ತು ತಾರ್ಕಿಕವಾಗಿ ಮುಗ್ಧವೂ ಆಗಿರುವಂಥದು.[೬]

ಈ ಸಂಸ್ಕೃತ ವಿಶ್ವವನ್ನು ಅದರ ಉತ್ತುಂಗಕಾಲದಲ್ಲಿ, ಅಂದರೆ ಮೊದಲು ಹೇಳಿದ ಸಹಸ್ರಮಾನದ ಕಡೆಯ ಶತಮಾನಗಳಲ್ಲಿ, ನಾವು ಪರಿಶೀಲಿಸಿದರೆ, ಅಲ್ಲಿ ನಮಗೆ ಕಾಣುವುದು – ಸೀಮಿತ ಸಂಖ್ಯೆಯ ಕೆಲವು ಬೃಹತ್ ವ್ಯವಸಾಯಾಧಾರಿತ ರಾಜ್ಯಘಟಕಗಳು (ಮತ್ತು ಅವುಗಳನ್ನು ಅನುಕರಿಸಿದ ಕಿರುಮಾದರಿಗಳು).  ಇವು ಬಹುಜನಾಂಗಗಳನ್ನೊಳಗೊಂಡ ಬೃಹತ್ ಜನವರ್ಗವೊಂದರಿಂದ ಕಪ್ಪವನ್ನು ಸಂಗ್ರಹಿಸುವ ''ಕ್ಷಾತ್ರ-ಆರ್ಥಿಕ'' ರಾಜ್ಯಗಳಾಗಿದ್ದವು; ತಮ್ಮ ರಾಜಕೀಯ ಆಕಾಂಕ್ಷೆಯನ್ನು ಮಾತ್ರ ಇವು ಸಾರ್ವತ್ರಿಕ ಪರಿಭಾಷೆಯಲ್ಲಿ ವ್ಯಾಖ್ಯಾನಿಸಿಕೊಂಡಿದ್ದವು.  ಇಂಥ ರಾಜ್ಯಗಳನ್ನು – ಉದಾಹರಣೆಗೆ ಗುಪ್ತ, ಗುರ್ಜರ-ಪ್ರತೀಹಾರ ಅಥವಾ ಅಂಕೋರ್ ಮೊದಲಾದವುಗಳನ್ನು – ಸೂಚಿಸಲು ಬಳಕೆಯಾಗುವ ''ಸಾಮ್ರಾಜ್ಯ (ಎಂಪೈರ್)'' ಎಂಬ ಶಬ್ದವು ಸ್ಪಷ್ಟವಾಗಿ ವ್ಯಾಖ್ಯಾನಿಸಲಿಕ್ಕಾಗದಷ್ಟು ಅನಿರ್ದಿಷ್ಟತೆಗಳನ್ನೊಳಗೊಂಡಿದ್ದರೂ ಇವುಗಳ ನಡುವೆ ಕೆಲವು ಸಾಂಸ್ಥಿಕ ಸಂಸ್ಕೃತಿ ರೂಪಗಳು ಸಾಮಾನ್ಯವಾಗಿರುವುದು ಕಂಡುಬರುತ್ತದೆ.  ಈ ಜಾಡನ್ನೇ ಹಿಡಿದು ಬೇಕಿದ್ದರೆ ನಾವು, ಆಧುನಿಕ ಪೂರ್ವಯುಗದ ಸಾಮ್ರಾಜ್ಯವ್ಯವಸ್ಥೆಯ ಅಥವಾ ಸಾಮ್ರಾಜ್ಯಮಾದರಿಯ ಒಂದು ಸಿದ್ಧಾಂತವನ್ನು ರೂಪಿಸಲು ಸಾಧ್ಯ ಮತ್ತು ಸಾಮ್ರಾಜ್ಯಗಳ ಪುನರುತ್ಪತ್ತಿಯ ಪ್ರಕ್ರಿಯೆಯನ್ನೂ, ಸಾಮ್ರಾಜ್ಯಮಾದರಿಯ ಪ್ರಸಾರಗಳನ್ನೂ ಕುರಿತು ಈ ಸಿದ್ಧಾಂತದ ಮೂಲಕ ಚರ್ಚಿಸಲು ಸಾಧ್ಯವಿದೆ.  ಆಧುನಿಕ ಕಾಲದ ರಾಷ್ಟ್ರ-ಪ್ರಭುತ್ವಸಂಬಂಧಿ ಮಾದರಿಗಳಿಗೆ ಸಂವಾದಿಯಾಗಬಹುದಾದ ಈ ಸಾಮ್ರಾಜ್ಯಮಾದರಿಗಳಲ್ಲೂ ಕೂಡಾ ಆಯಾ ವ್ಯವಸ್ಥೆಯ ಮೂಲ ಆಕೃತಿಗಳೇ ಹಲವು ಸಾಂಸ್ಕೃತಿಕ ಪರಿಣಾಮಗಳನ್ನು ಸೃಷ್ಟಿಸುವ ಮತ್ತು ಆ ಮೂಲಕ ತನ್ನದೇ ಒಂದು ವಿಶಿಷ್ಟ ಸಾಂಸ್ಕೃತಿಕ ಆಕೃತಿಗಳ ಸಮೂಹವನ್ನು ನಿರ್ಮಿಸಿಕೊಳ್ಳುವ ಪ್ರಕ್ರಿಯೆಗಳನ್ನು ಕಾಣಬಹುದಾಗಿದೆ (ಬಾಲಿಬರ್ ಮತ್ತು ವ್ಯಾಲೆರ್‌ಸ್ಟೀನ್ ೧೯೯೧, ೯೧).



ಇಂಥ ಒಂದು ಸಾಮ್ರಾಜ್ಯ ಪದ್ಧತಿಯ ಅಡಿಯಲ್ಲಿ, ಸಾಮ್ರಾಜ್ಯದ ಮಾದರಿಯೊಂದು ಪದೇಪದೇ ಪುನರುತ್ಪಾದನೆಯಾಗುವ ವಿದ್ಯಮಾನವೊಂದು ಕೇವಲ ದಕ್ಷಿಣ ಏಶಿಯಾದಲ್ಲಷ್ಟೇ ಅಲ್ಲ, ಅದರಾಚೆಗೂ ಕಾಣಸಿಗುತ್ತದೆ.  ಒಂದು ಕಡೆಗೆ, ಈ ವಿದ್ಯಮಾನವು ದೇಶದೇಶಗಳ ನಡುವೆ ಸಮಾನಾಂತರವಾಗಿ ಜರುಗಿದೆ; ಆಗ ಅಲ್ಲಿ ಪ್ರಾಕ್ತನಶಾಸ್ತ್ರಜ್ಞರು ಹೇಳುವ ''ಸಮಾನಸ್ಕಂದ ರಾಜ್ಯಗಳ ಪರಸ್ಪರ ಪ್ರಭಾವ''ದ ಪರಿಣಾಮವನ್ನು ಕಾಣುತ್ತೇವೆ.  ಇನ್ನೊಂದು ಕಡೆ, ಇದು ಕಾಲಾಂತರದಲ್ಲೂ ಜರುಗಿದೆ; ಆಗ ಇದು ಐತಿಹಾಸಿಕವಾಗಿ ಪುನರ್‌ಕಲ್ಪಿತಗೊಂಡಿದೆ.  ಹೀಗೆ, ಕಾಲ-ದೇಶಗಳೆರಡಕ್ಕೂ ಹೊಂದಿಸಿ ಇಂಥ ಒಂದು ವಿದ್ಯಮಾನದ ನಕ್ಷೆಯನ್ನು ನಾವು ಬರೆಯುವುದಾದರೆ, ಅದಕ್ಕೆ ಸೇರಬಹುದಾದ ಸಾಮ್ರಾಜ್ಯಗಳು – ಆಖೆಮಿನಿಡ್ (ಮತ್ತು ಸಸ್ಸೇನಿಯನ್ ಹಾಗೂ ಘಜನಿ), ಹೆಲೆನಿಕ್ (ಮತ್ತು ಬೈಜಾಂಟೈನ್), ರೋಮನ್ (ಮತ್ತು ಕ್ಯಾರೋಲಿಂಗಿಯನ್ ಹಾಗೂ ಆಟೋನಿಯನ್) ಮತ್ತು ಕುಶಾನ (ಮತ್ತು ಗುಪ್ತ ಹಾಗೂ ಪ್ರಾಯಶಃ ಅಂಕೋರ್ ಕೂಡಾ) (ನೋಡಿ – ಡ್ಯುವರ್ಜರ್ ೧೯೮೦, ೨೧).  ಸಾಮ್ರಾಜ್ಯಗಳೆಂದು ಕರೆಯಿಸಿಕೊಂಡಿರುವ ಇಂಥ ಹಲವು ಉದಾಹರಣೆಗಳಲ್ಲಿ ಸಾಮ್ರಾಜ್ಯಶಾಹಿ ಆಡಳಿತ ವ್ಯವಸ್ಥೆ ಇತ್ತೋ ಇಲ್ಲವೋ ಎನ್ನುವುದಕ್ಕಿಂತ ಮುಖ್ಯವಾದದ್ದು – ಅಲ್ಲಿ ವಿಶ್ವಾತ್ಮಕ ಸ್ವರೂಪದ ಮತ್ತು ಜನಾಂಗಾತೀತ ಆಕರ್ಷಣೆಯನ್ನು ಪಡೆದ ಒಂದು ಭಾಷೆ ಅಗತ್ಯವಾಯಿತು ಮತ್ತು ಆ ಭಾಷೆಯು ಸ್ವತಃ ಆಯಾ ಆಳುವ ವರ್ಗಗಳು ಯಾವ ಜನಾಂಗದವರೆಂಬ ಅಸ್ತಿತ್ವವನ್ನು ಮೀರುವ ಸಾಧನವಾಗಿ ಕೆಲಸ ಮಾಡಿತು – ಎನ್ನುವುದು.  ಇಂಥ ಒಂದು ಭಾಷೆಯ ಮೊದಲ ಅಗತ್ಯವೆಂದರೆ ಅದು, ಕಾಲ್ಪನಿಕ ಸ್ತರದಲ್ಲಾದರೂ ಸರಿಯೇ, ಸ್ಥಳೀಯತೆಯನ್ನು ಮೀರುವ ಹೆಗ್ಗಳಿಕೆಯನ್ನು ಕಾಣಿಸಬೇಕು ಮತ್ತು ಆ ಮೂಲಕ ತತ್ಕಾಲೀನ ರಾಜಕೀಯ ಚಿಂತನೆಗೆ ಪೂರಕವಾಗಿ ಒದಗಿಬರಬೇಕು.  ಜತೆಗೆ, ಅಂಥ ಭಾಷೆಯು ತನ್ನ ಸಾಮರ್ಥ್ಯವನ್ನು ಧರ್ಮದೊಂದಿಗಿನ ಸಂಬಂಧದಲ್ಲಿ ಮಾತ್ರ ಕಾಣಿಸಿದರೆ ಸಾಲದು, ಅದು ತನ್ನ ಸೌಂದರ್ಯಾತ್ಮಕ ಸಾಮರ್ಥ್ಯದಿಂದಲೇ ಹೆಗ್ಗಳಿಕೆಯನ್ನು ಸಾಧಿಸಬೇಕು – ಎನ್ನುವುದು ಮುಖ್ಯ.  ಅಂಥ ಸಾಮರ್ಥ್ಯದಿಂದ ಅದು ವಾಸ್ತವವನ್ನು ಇನ್ನಷ್ಟು ವಾಸ್ತವಿಕವಾಗಿ (ಅಂದರೆ, ಇನ್ನಷ್ಟು ಸಂಕೀರ್ಣವಾಗಿ ಮತ್ತು ಆಲಂಕಾರಿಕವಾಗಿ) ಕಾಣಿಸಬಲ್ಲುದಾಗಿರಬೇಕು ಮತ್ತು ಅದಕ್ಕೆ ಅಗತ್ಯವಾದ ಸಾಹಿತ್ಯದ ನುಡಿಗಟ್ಟು ಮತ್ತು ಶೈಲಿಗಳನ್ನು ಪಡೆದಂಥದೂ ತನ್ನ ಸಾಹಿತ್ಯಕ ಇತಿಹಾಸದಲ್ಲಿ ಭಾಷಾಮಿಶ್ರಣಗಳನ್ನು ನಿರ್ಮಿಸಿ ತೋರಿಸಿದಂಥದೂ ಆಗಿರಬೇಕಾದ್ದು ಅವಶ್ಯ.  ''ರೋಮನ್ ಮರುಹುಟ್ಟ''ನ್ನು ಪ್ರತಿನಿಧಿಸುವ ಯುರೋಪಿನ ಕ್ಯಾರೋಲಿಂಗಿಯನ್ ಮತ್ತು ಆಟ್ಟೋನಿಯನ್ ಸಾಮ್ರಾಜ್ಯಗಳಲ್ಲಿ, ಲ್ಯಾಟಿನ್ ಅಂಥ

ಭಾಷೆಯಾಯಿತು. ಆಗ ಆ ಭಾಷೆಯನ್ನು ಮತ್ತೆಮತ್ತೆ ಪುನರುತ್ಥಾನಗೊಳಿಸ ಬೇಕಾಯಿತಾದರೂ ಅದು ಆ ರಾಜ್ಯದ ಸಾಂಸ್ಕೃತಿಕ-ರಾಜಕೀಯ ವ್ಯಾಖ್ಯೆಗೆ ಅನಿವಾರ್ಯ ಅಂಗವಾಗಿ ಉಳಿದು ಬೆಳೆದುಕೊಂಡಿತು. ಕ್ರಿ.ಶ. ೧೦೦೦ದ ಬಳಿಕದ ಪಶ್ಚಿಮ ಏಶಿಯಾದಲ್ಲಿ, ಹೊಸ ಪರ್ಷಿಯನ್ ಅಂಥದೇ ಭಾಷೆಯಾಯಿತು. ಅದು ತನ್ನ ಮೊದಲ ಮಹತ್ವದ ಸಾಹಿತ್ಯಕೃತಿ 'ಶಹನಾಮಾ'ದ ಮೂಲಕ ಅಲ್ಲಿನ ಹೊಸ ರಾಜಕೀಯ ಸಂಸ್ಥೆಗಳನ್ನು, ಕಲ್ಪಿತವಾದೊಂದು ಇರಾನಿ ಇತಿಹಾಸದೊಂದಿಗೆ ತಳುಕುಹಾಕುವ ಯತ್ನ ಮಾಡಿತು. ಜತೆಗೆ, ಈ ಭಾಷೆಯ ಇನ್ನಿತರ ಮಹತ್ಕೃತಿಗಳೊಂದಿಗೆ ಕೂಡಿ ಬೆಳೆದ ಈ ಭಾಷೆಯು ಸಿಸ್ತಾನದಿಂದ ದೆಹಲಿಯವರೆಗಿನ ಆಳುವವರ್ಗಗಳಿಗೆ ಅನಿವಾರ್ಯವಾದದ್ದಾಯಿತು; ಆ ವರ್ಗಗಳು ತಮ್ಮ ಖಾಸಗಿ ಸಂವಹನೆಯಲ್ಲಿ ಯಾವುದೇ ಭಾಷೆಯನ್ನು ಬಳಸಲಿ, ಸಾಮ್ರಾಜ್ಯ ರಾಜಕೀಯದ ವ್ಯವಹಾರದಲ್ಲಿ ಪಾಲ್ಗೊಳ್ಳಬೇಕೆಂದಾದರೆ ಇದನ್ನೇ ಬಳಸುವುದು ಅತ್ಯಗತ್ಯವಾಗುವ ಸ್ಥಿತಿ ಬಂತು. ಲ್ಯಾಟಿನ್ ಮತ್ತು ಪರ್ಷಿಯನ್ ಭಾಷೆಗಳ ಇಂಥ ರಾಜಕೀಯ-ಸಾಂಸ್ಕೃತಿಕ ತರ್ಕಕ್ಕೆ ಸಮಾನಾಂತರವಾದ ಸ್ವರೂಪವುಳ್ಳದ್ದು ಹಾಗೂ ಕಾಲದೇಶಗಳೆರಡೂ ಸ್ತರದಲ್ಲೂ ಆ ಭಾಷೆಗಳಷ್ಟೇ ವ್ಯಾಪ್ತಿಯನ್ನು ಗಳಿಸಿಕೊಂಡದ್ದು – ಸಂಸ್ಕೃತ.

ಸಂಸ್ಕೃತವು ಸಾದಾ ರಾಜ್ಯವೊಂದನ್ನು ಸಾಮ್ರಾಜ್ಯಶಾಹಿ ಸಂಸ್ಕೃತಿಗೆ ಎತ್ತರಿಸಿ ಪ್ರತಿಷ್ಠಿತಗೊಳಿಸಿತು, ಮಾತ್ರವೇ ಅಲ್ಲ, ಅದು ಸಾಮ್ರಾಜ್ಯಶಾಹಿ ಸಂಸ್ಕೃತಿಯ ನೈತಿಕ ಮತ್ತು ಕಲಾತ್ಮಕ ಮೌಲ್ಯಗಳ ಸಮೂಹವೊಂದನ್ನು ಪ್ರಸಾರಮಾಡುವ ಮಾಧ್ಯಮವಾಗಿಯೂ ಕೆಲಸಮಾಡಿತು. ಜತೆಗೆ, ಅದೇ ಹೊತ್ತಿಗೆ ಅದು, ಕೆಲವು ಮುಖ್ಯವಾದ ಸಾಂಕೇತಿಕ ಸರಕುಗಳನ್ನು – ಅಂಥ ಸರಕುಗಳಲ್ಲಿ ಪ್ರಧಾನವಾದದ್ದು ಕೀರ್ತಿ – ಸಂವಹಿಸುವ ವಾಹಕವಾಗಿ ಬೇರಾವುದೇ ಭಾಷೆಗೂ ಮಾಡಲಾಗದ (ಅಥವಾ ಮಾಡಲು ಅವಕಾಶ ಇರದಿದ್ದ) ಕೆಲಸವನ್ನು ಮಾಡಿತೋರಿಸಿತು. ಸಂಸ್ಕೃತ ಭಾಷೆಯಲ್ಲಿ ಇಂಥ ಸಾಮರ್ಥ್ಯಗಳ ಮೂಲವನ್ನು ಹುಡುಕುವುದಾದರೆ ಅದು ಕಾಣಬಹುದಾದ್ದು ಆ ಭಾಷೆಯ ಪ್ರಭಾವಿ ಕ್ಷೇತ್ರಗಳಾದ ವ್ಯಾಕರಣ, ಅಲಂಕಾರ ಮತ್ತು ಛಂದಸ್ಸುಗಳಲ್ಲಿ.

ಪ್ರಮಾಣಬದ್ಧವಾಗಿರುವ ವ್ಯಾಕರಣವು ಭಾಷೆಗೆ ಪ್ರತಿಷ್ಠೆಯನ್ನೂ ಸುಸ್ಥಿತಿಯನ್ನೂ ಒದಗಿಸುತ್ತದೆ – ಎಂಬುದನ್ನು ಸಾಮ್ರಾಜ್ಯಭಾಷೆಯು ಮೊದಲಿಗೇ ತಿಳಿದುಕೊಂಡಿತು. ವ್ಯಾಕರಣದ ಅಂಥ ಬಿಗಿಯಾದ ಬಂಧನವಿರುವ ಮತ್ತು ಆ ಕಾರಣದಿಂದಲೇ ಭಾಷೆಯ ಛಿದ್ರೀಕರಣದ ಅಪಾಯವೂ ಇಲ್ಲದಿರುವ ಅಂಥ ಒಂದು ಭಾಷೆಯಲ್ಲಿ ಮಾತ್ರವೇ ಕೀರ್ತಿ ಮತ್ತು ಔನ್ನತ್ಯಗಳು ಬಹುಕಾಲ ಬಾಳುವ ಅಭಿವ್ಯಕ್ತಿಯನ್ನು ಪಡೆಯಲು ಸಾಧ್ಯ. ಆದರೆ ಸಂಸ್ಕೃತ ಸಂಪ್ರದಾಯದ ಇಂಥ ವ್ಯಾಕರಣಬದ್ಧ ಸ್ವರೂಪಕ್ಕೆ ಕೇವಲ ಉಪಯುಕ್ತತೆಯ ಅಗತ್ಯವೊಂದೇ ಕಾರಣವಲ್ಲ, ಅದಕ್ಕೆ ಕಾರಣ ಇನ್ನೂ ಆಳವಾಗಿದೆ. ಸಂಸ್ಕೃತ ಭಾಷೆಯಲ್ಲಿ ಕಾವ್ಯವ್ಯವಸ್ಥೆಯು ವ್ಯಾಕರಣವ್ಯವಸ್ಥೆಗೆ ಬದ್ಧವಾಗಿದೆ ಮಾತ್ರವಲ್ಲ, ಮೂಲತಃ ಈ ವ್ಯವಸ್ಥೆಯೇ ವಿಶಾಲವಾದ ರಾಜಕೀಯ-ನೈತಿಕ-ಸಾಮಾಜಿಕ ವ್ಯವಸ್ಥೆಗಳ ಪ್ರತಿರೂಪವಾಗಿದೆ. ಈ ಸಂಪ್ರದಾಯದಲ್ಲಿ ಒಬ್ಬ ಒಳ್ಳೆಯ (ಸಾಧು) ರಾಜ ಯಾರೆಂದರೆ ಆತ ಒಳ್ಳೆಯ ಭಾಷೆಯನ್ನು (ಸಾಧುಶಬ್ದ) ಬಳಸುವಾತ. ಆದ್ದರಿಂದಲೇ ರಾಜನಿರೂಪದ ಅಭಿವ್ಯಕ್ತಿಗೆ ಸಂಸ್ಕೃತವು ಅತ್ಯುತ್ತಮ ವಾಹಕವಾಯಿತು ಮಾತ್ರವಲ್ಲ, ಸಂಸ್ಕೃತದ ಕಲಿಕೆಯೆನ್ನುವುದು ರಾಜತ್ವವನ್ನು ಗಳಿಸುವ ಮಾರ್ಗವೂ ಆಯಿತು. ಇದಕ್ಕೆ ದೃಷ್ಟಾಂತವಾಗಿ ನಾವು ಹಲವು ರಾಜರನ್ನು ನೋಡಬಹುದು – ಕ್ರಿ.ಶ. ೧೫೦ರಲ್ಲಿ ದಕ್ಷಿಣ ಗುಜರಾತಿನಲ್ಲಿದ್ದ ರುದ್ರದಾಮನನಿಂದ ತೊಡಗಿ ಒಂದು ಸಾವಿರ ವರ್ಷಗಳ ಬಳಿಕ ಬಂದ ತೋನ್ಲೆ ಸಾಪ್‌ದ ಎರಡನೆಯ ಸೂರ್ಯವರ್ಮನತನಕ. ಇವರೆಲ್ಲ ತಮ್ಮ ಸಂಸ್ಕೃತ ಪರಿಣತಿಯನ್ನು, ಅದರಲ್ಲೂ ಮುಖ್ಯವಾಗಿ ವ್ಯಾಕರಣದ ತಿಳುವಳಿಕೆಯನ್ನು, ಸಾರ್ವಜನಿಕ ಕಾವ್ಯಗಳಲ್ಲಿ ಹೆಗ್ಗಳಿಸಿ ಹೇಳಿಕೊಂಡರು; ಮತ್ತು ಇವತ್ತು ನಮಗೆ ಗೊತ್ತಿರುವ ಹೆಚ್ಚೂಕಮ್ಮಿ ಎಲ್ಲ ವ್ಯಾಕರಣ ಗ್ರಂಥಗಳನ್ನೂ ಬರೆಯಿಸುವ ಮೂಲಕ ತೋರಿಸಿಕೊಂಡರು.[೨]

ಈ ಇಡೀ ಪ್ರಕ್ರಿಯೆಗೆ ಸಂಸ್ಕೃತದ ಅಲಂಕಾರ ಮತ್ತು ಛಂದಸ್ಸಿನ ಸಂಪ್ರದಾಯಗಳು ಕೇಂದ್ರವಾಗಿದ್ದವು ಎನ್ನುವುದಕ್ಕೆ ಸಾಕ್ಷಿಯಾಗಿ ಶಾಸನ ಕಾವ್ಯವನ್ನೇ ಗಮನಿಸಬಹುದು. ಆದರೆ ಈ ಪ್ರಕಾರದ ಪಠ್ಯಗಳು ವಿಶ್ವವ್ಯಾಪ್ತಿಯ ಸಾಂಸ್ಕೃತಿಕ ಸರಕುಗಳೆಂಬಂತೆ ಚಾಲ್ತಿಯಲ್ಲಿದ್ದವು ಮತ್ತು ಇವೇ ಅಂತಿಮವಾಗಿ ದೇಶಭಾಷೆಯ ಕಾವ್ಯಗಳು ಉದ್ಭವಗೊಳ್ಳಲಿಕ್ಕೆ ಅಗತ್ಯವಾದೊಂದು ತಾತ್ವಿಕ ಹಿನ್ನೆಲೆಯನ್ನು ನಿರ್ಮಿಸಿಕೊಟ್ಟವು. ಉದಾಹರಣೆಗೆ, ೭ನೆಯ ಶತಮಾನದ ತುದಿಯ ದಂಡಿಯ 'ಕಾವ್ಯಾದರ್ಶ'(ಸಾಹಿತ್ಯದ ಕನ್ನಡಿ)ವು ಕ್ರಿ.ಶ. ೯೦೦-೧೩೦೦ರ ಅವಧಿಯಲ್ಲಿ ಶ್ರೀಲಂಕಾದಿಂದ ತೊಡಗಿ ತಮಿಳುದೇಶವನ್ನೂ ಒಳಗೊಂಡು ಟಿಬೆಟ್ಟಿನವರೆಗಿನ ಪ್ರದೇಶಗಳಲ್ಲಿ ಅಭ್ಯಸಿಸಲ್ಪಟ್ಟಿತು. ಅದೇರೀತಿ, ಕೇದಾರಭಟ್ಟನ 'ವೃತ್ತರತ್ನಾಕರ' (ಸಂಸ್ಕೃತ ಛಂದಸ್ಸಿನ ರತ್ನದ ಖನಿ)ದ ಮಾದರಿಯ ಛಂದಸ್ಸಿನ ಪಠ್ಯಗಳ ಪ್ರಯಾಣದ ಕಥಾನಕವನ್ನೂ ಗುರುತಿಸಬಹುದು. ಇದು, ೧೨ನೆಯ ಶತಮಾನದ ತನ್ನ ಪಾಲಿ ಅನುವಾದ 'ವುತ್ತೋದಯ'ದ ಮೂಲಕ, ೧೭ನೆಯ ಶತಮಾನದ ಆಯುತ್ತಾಯ ರಾಜ್ಯದಲ್ಲಿ ಥಾಯಿ ಕಾವ್ಯವು ಸೃಷ್ಟಿಯಾಗಲಿಕ್ಕೆ ಕಾರಣವಾಯಿತು (ಟೆರ್‌ವೀಲ್ ೧೯೯೬). ಏಶಿಯಾದಾದ್ಯಂತ ಧೀಮಂತರು ಮತ್ತು ಅವರ ಆಶ್ರಯದಾತರ ಮೇಲೆ ಸಂಸ್ಕೃತದ ಈ ಎಲ್ಲ ಸಾಂಸ್ಕೃತಿಕ ಹಿರಿಮೆಯು ಎಂಥ ಪರಿಣಾಮ ಮಾಡಿತು

ಎನ್ನುವುದಕ್ಕೆ ನಮಗೆ ಇಂಥ ಉದಾಹರಣೆಗಳೇ ಆಧಾರ ಒದಗಿಸಬಲ್ಲವು.

ಇದೆಲ್ಲದರ ಪರಿಣಾಮವಾಗಿ, ಇಡಿಯ ಸಂಸ್ಕೃತ ಸಾಹಿತ್ಯ (ಕಾವ್ಯ) ಮತ್ತು ಅದರಲ್ಲೂ ಮುಖ್ಯವಾಗಿ ರಾಜಕೀಯ ಕಾವ್ಯ (ಪ್ರಶಸ್ತಿ)ಗಳು ಆ ಕಾಲದ ಒಂದು ವಿಶ್ವಾತ್ಮಕ ಸಾಂಸ್ಕೃತಿಕ ಪ್ರಕಾರಕ್ಕೆ ಏಕರೂಪಿ ಶೈಲಿಯ ಸಾಂಗತ್ಯವೊಂದನ್ನು ನಿರ್ಮಿಸಿಕೊಟ್ಟವು. ಇದರಲ್ಲಿ ಸ್ಥಳೀಯ ವರ್ಣವೈವಿಧ್ಯಗಳು ಇರಲಿಲ್ಲವೆಂದೇನೂ ಅಲ್ಲ, (ಅಂಕೋರ್‌ನ ವಿಚಾರದಲ್ಲಿ ಇಂಥ ಸ್ಥಳೀಯತೆಯನ್ನು ಉತ್ಪ್ರೇಕ್ಷಿಸಲಾಗಿದೆ, ನೋಡಿ – ವೋಲ್ಟರ್ಸ್ ೧೯೮೨, ೬೧), ಆದರೆ ಈ ವಿಶ್ವಾತ್ಮಕ ವ್ಯವಸ್ಥೆಯ ಮೂಲೋದ್ದೇಶವೇ ಸ್ಥಳೀಯತೆಯ ವೈವಿಧ್ಯಗಳನ್ನು ಕಡೆಗಣಿಸುವಂಥದಾಗಿತ್ತು. ಈ ಸಂಪ್ರದಾಯದ ಒಬ್ಬ ಕವಿ ತನ್ನ ತಾತ್ವಿಕ ಹಿನ್ನೆಲೆ ಮತ್ತು ಸಾಹಿತ್ಯಕ ರೂಢಿಗಳೆರಡೂ ಮಾರ್ಗಗಳ ಮೂಲಕ ಪ್ರಾಂತ್ಯಾಂತರವ್ಯಾಪ್ತಿಯ ಸಾಂಸ್ಕೃತಿಕ ಚಟುವಟಿಕೆಯೊಂದರಲ್ಲಿ ಪಾಲ್ಗೊಳ್ಳಬೇಕು – ಎಂಬ ಒತ್ತಾಯವು ಈ ಶಾಸನ-ಸಾಹಿತ್ಯಿಕ ಪಠ್ಯಗಳ ರೂಪ, ಶೈಲಿ, ನುಡಿಗಟ್ಟು ಮತ್ತು ವಸ್ತುವಿನ ಒತ್ತಡದಿಂದಲೇ ನಿರ್ಮಾಣಗೊಳ್ಳುತ್ತಿತ್ತು. ಸಂಸ್ಕೃತದ ಈ ಪ್ರಕ್ರಿಯೆಯು ಈ ಪ್ರಾಚೀನ ಜಗತ್ತಿನ ಇನ್ನೊಂದು ತುದಿಯಲ್ಲಿದ್ದ ಲ್ಯಾಟಿನ್‌ನಂತಹ ಭಾಷೆಗಳಲ್ಲಿ (ಮತ್ತು, ನನ್ನ ಊಹೆಯ ಪ್ರಕಾರ, ಚೀನೀ ಭಾಷೆಯಲ್ಲಿ ಕೂಡಾ) ನಡೆಯುತ್ತಿದ್ದುದಕ್ಕೆ ಸಮಾನಾಂತರವಾದ ಪ್ರಕ್ರಿಯೆಯಾಗಿತ್ತು.[೮] ಸಂಸ್ಕೃತ ಭಾಷೆಯ ಕೃತಿಯೊಂದರ ಕಾಲದೇಶಗಳನ್ನು ಸ್ಪಷ್ಟವಾಗಿ ತೀರ್ಮಾನಿಸಲಾಗದೇ ಇರುವುದಕ್ಕೂ ಇದೇ ಕಾರಣ; ಮತ್ತು, ನನ್ನ ಪ್ರಕಾರ, ಇದೇ ಈ ಸಾಹಿತ್ಯ ಪರಂಪರೆಯ ಪ್ರಮುಖ ಆಕರ್ಷಣೆಯೂ ಹೌದು.

ಸಂಸ್ಕೃತದ ಜಗತ್ತಿನಲ್ಲಿ ಸಂಭವಿಸಿದಂತಹ, ಅಧಿಕಾರ ಮತ್ತು ಸಂಸ್ಕೃತಿಗಳ ಈ ಎಲ್ಲ ಕ್ರಿಯೆ-ಪ್ರತಿಕ್ರಿಯೆಗಳು, ನನ್ನ ಈ ಕಿರುಸಮೀಕ್ಷೆಯಲ್ಲಿ ಹೇಳಬಹುದಾದದ್ದಕ್ಕಿಂತ (ಅಥವಾ ನಾನು ತಿಳಿದಿರುವುದಕ್ಕಿಂತ) ಹೆಚ್ಚು ಸಂಕೀರ್ಣವಾಗಿತ್ತು ಎಂಬುದರಲ್ಲಿ ಅನುಮಾನವಿಲ್ಲ. ಹಾಗಿದ್ದರೂ ಈ ಆಧಾರದ ಮೇಲೆ ನಾವು ಇಷ್ಟಂತೂ ವಾದಿಸಲು ಸಾಧ್ಯ – ಸಂಸ್ಕೃತಿ ಮತ್ತು ಸಾಮ್ರಾಜ್ಯಗಳ ನಡುವಿನ ಈ ಸೌಂದರ್ಯಾತ್ಮಕ ಸಂಬಂಧವೇನಿದೆ ಅದು ಈ ಕಾಲದ ರಾಜಕೀಯ ಪರಿಭಾಷೆಯನ್ನೇ ನಿರ್ಮಿಸಿಕೊಟ್ಟಿತು; ಜಗತ್ತನ್ನು ವಿಶ್ವಾತ್ಮಕವಾಗಿ ಪರಿಭಾವಿಸುವ ವಿಧಾನದಿಂದ ಇದು ಆಕರ್ಷಿತವಾಗಿತ್ತು; ಮತ್ತು ಈ ಪ್ರಕ್ರಿಯೆಯು ಕೇವಲ ಅಪರಿಚಿತಗೊಳಿಸುವ ಮೂಲಕ ನಿಗೂಢತೆಯನ್ನು ಸೃಷ್ಟಿಸುವ ತಂತ್ರವಷ್ಟೇ ಆಗಿರಲಿಲ್ಲ. ಅಂದರೆ, ಸಂಸ್ಕೃತವು ಸಾಮ್ರಾಜ್ಯ ರಾಜಕೀಯದ ಭೌತಿಕ-ವಾಸ್ತವಿಕ ಅಗತ್ಯಗಳಿಂದ ಮಾತ್ರ ಸೃಷ್ಟಿಯಾದದ್ದಲ್ಲ; ಅದು ಆ ರಾಜಕಾರಣದ ಸೌಂದರ್ಯಾತ್ಮಕ ರೂಢಿಗಳಿಗೆ ಒಂದು ಧ್ವನಿಯಾಯಿತು. ಇಂಥ ರಾಜಕೀಯ



ಕಾವ್ಯವೇ ಆತ್ಯಂತಿಕವಾಗಿ, ಸಂಸ್ಕೃತ ಮಹಾವಿಶ್ವವೆಂಬ ಪರಿಕಲ್ಪನೆಗೆ ಕಾರಣವಾದದ್ದು.

ತಾತ್ವಿಕ ಸ್ತರದಲ್ಲಿ ನೋಡಿದರೆ, ಈ ಸಂಸ್ಕೃತ ವಿಶ್ವದ ಪರಿಕಲ್ಪನೆಯು ತನ್ನ ಅಭಿವ್ಯಕ್ತಿಯನ್ನು ಗಳಿಸಿಕೊಂಡಿದ್ದು ಸಾಂಸ್ಕೃತಿಕ ಚಲಾವಣೆಯ ಆವರಣದಲ್ಲಿ; ಹಲವು ನಿರ್ದಿಷ್ಟ ಪ್ರತಿನಿಧೀಕರಣಗಳ ಮೂಲಕ. ದೇಶಭಾಷಾ ನಿರ್ಮಾಣದ ಪ್ರಕ್ರಿಯೆಯನ್ನು ತಾತ್ವಿಕವಾಗಿ ವಿವರಿಸಲಿಕ್ಕೆ ತುಂಬ ಉಪಯುಕ್ತವಾಗುವ ಇಂಥ ಎರಡನ್ನು ಇಲ್ಲಿ ಪ್ರಸ್ತಾಪಿಸಬೇಕು – ಒಂದು, ರಾಜಕೀಯದ ಕ್ರಿಯೆಗೆ ಪುರಾಣದ ಆವರಣದ ಆರೋಪ; ಇದರ ಬಗ್ಗೆ ನಾನು ಚುಟುಕಾಗಿಯಷ್ಟೇ ಹೇಳುತ್ತೇನೆ. ಇನ್ನೊಂದು – ಸಾಹಿತ್ಯ ಶೈಲಿಗಳದ್ದೇ ಆವರಣವೊಂದರ ನಿರ್ಮಾಣ. ಈ ಎರಡನೆಯದನ್ನು ತುಸು ವಿವರವಾಗಿ ಪ್ರಸ್ತಾಪಿಸುವುದು ಅಗತ್ಯ.

### ವಿಶ್ವಾತ್ಮಕ ದರ್ಶನದಲ್ಲಿ ರಾಜಕೀಯ ಆವರಣ

ವಿಭಿನ್ನ ರೀತಿಯ ಕಾವ್ಯ ಮತ್ತು ಪ್ರಶಸ್ತಿ ಪಠ್ಯಗಳ ಒಂದು ಒತ್ತಾಸೆಯ ಕಾಳಜಿ ಎನೆಂದರೆ – ರಾಜಕೀಯ ಮತ್ತು ಸಾಂಸ್ಕೃತಿಕ ಉಲ್ಲೇಖಗಳನ್ನೊಳಗೊಂಡ ಸ್ಥಳೀಯೇತರ ಆವರಣದ ಪ್ರಸ್ತುತಿ. ಉದಾಹರಣೆಗೆ, ೧೦ನೆಯ ಶತಮಾನದಲ್ಲಿ ತ್ರಿಪುರದ ರಾಜರಿಗೆ ಆಸ್ಥಾನಕವಿಯಾಗಿದ್ದ ರಾಜಶೇಖರ, ಬಹುಕಾಲದಿಂದ ನಡೆದುಬಂದ ರೂಢಿಯನ್ನೇ ಮುಂದುವರೆಸಿ ತನ್ನ ಆಶ್ರಯದಾತರನ್ನು ಹೀಗೆಂದು ವರ್ಣಿಸುತ್ತಾನೆ – ''ಪೂರ್ವ ದಿಕ್ಕಿಗೆ ಗಂಗೆಯು ಸಮುದ್ರಕ್ಕೆ ಸೇರುವಲ್ಲಿಂದ ಪಶ್ಚಿಮಕ್ಕೆ ನರ್ಮದೆಯು ಸಾಗರಕ್ಕೆ ಬರಿದಾಗುವಲ್ಲಿಯತನಕ, ದಕ್ಷಿಣದ ತಾಮ್ರಪರ್ಣಿಯಿಂದ ಉತ್ತರದ ಕ್ಷೀರಸಾಗರದ ವರೆಗೆ''ಅವರು ಸಾರ್ವತ್ರಿಕವಾಗಿ ಆಳುತ್ತಿದ್ದಾರೆ (ವಿದ್ಧಸಾಲಭಂಜಿಕಾ, ೪.೨೧). ಮುಂದೆ, ಕಳಚೂರ್ಯ ರಾಜರೂ ತಮ್ಮ ಶಾಸನಗಳಲ್ಲಿ ಇದೇ ಮಾತುಗಳನ್ನು ಪುನರುಚ್ಚರಿಸಿಕೊಂಡಿದ್ದಾರೆ. ಇಂಥ ದಾರ್ಶನಿಕ ವರ್ಣನಾಕ್ರಮಕ್ಕೆ ಮೂಲ, ಅಥವಾ ಸೊಗಸಾದ ಒಂದು ಪೂರ್ವನಿದರ್ಶನವೆನ್ನಬಹುದಾದ ಪಠ್ಯ – ''ಪುರಾಣ'' ಅಥವಾ ''ಇತಿಹಾಸ''ವೆಂದು ಕರೆಯಿಸಿಕೊಳ್ಳುವ ಮಹಾಭಾರತ. ಮಹಾಭಾರತದ ಒಟ್ಟೂ ಕಥನದಲ್ಲಿ ಕಾಣುವ ಒಂದು ಕೇಂದ್ರ ಉದ್ದೇಶ – ವಿಶಾಲವಾದ ಜಗತ್ತಿನ ಒಂದು ವಿಂಗಡಣೆಯನ್ನು ನಿರೂಪಿಸಿ ಅದರೊಳಗೆ ತನಗೆ ಮುಖ್ಯವಾದ ರಾಜಕೀಯ ಕ್ರಿಯೆಗಳು ನಡೆಯುವ ಸ್ಥಳವನ್ನು ಸ್ಥಾಪಿಸುವುದು. (ಇದು 'ಕ್ರೋನೋಟೋಪ್' – ಕಾಲದೇಶಸಮೀಕರಣ – ಎಂಬ ಪರಿಕಲ್ಪನೆಗೆ ಕೊಡಬಹುದಾದ ಶುದ್ಧವಾದ ಒಂದು ಉದಾಹರಣೆ. ಈ ಪರಿಕಲ್ಪನೆಯನ್ನು ಪ್ರಸ್ತಾಪಿಸುವ ಬಾಖ್ತಿನ್ ಅರ್ಥಮಾಡಿಕೊಂಡಿರುವುದಕ್ಕಿಂತ ಇನ್ನೂ ನಿಖರವಾಗಿ ಈ ಉದಾಹರಣೆಯು ಈ ಪ್ರಕ್ರಿಯೆಯನ್ನು

ನಿರೂಪಿಸುತ್ತದೆ, ೧೯೮೧, ೮೪-೨೫೮). ಮಹಾಭಾರತದ ಇಂಥ ನಕ್ಷೆಯಿಲ್ಲದ ನಕ್ಷೆಗೆ, ಅಂದರೆ, ತನ್ನ ಕಥನದ ಆಯಕಟ್ಟಿನ ಜಾಗಗಳಲ್ಲಿ, ಅಪರಿಚಿತವೇನೂ ಅಲ್ಲದ ಐತಿಹಾಸಿಕ ಸ್ಥಳಗಳನ್ನು ವಿಭಿನ್ನ ರೀತಿಗಳಲ್ಲಿ ಕೂಡಿಸಿ ನಕ್ಷೆಯಾಗಿ ಹೆಣೆಯುವ ಪ್ರಕ್ರಿಯೆಗೆ, ಈ ಪಠ್ಯದಲ್ಲಿ ಮೊದಲಿಂದ ಕಡೆಯವರೆಗೆ ಹಲವು ದೃಷ್ಟಾಂತಗಳನ್ನು ಕೊಡಬಹುದು. ಅಂಥ ರೂಢಿಯ ಗುರುತು ಗೊತ್ತಾಗಲೆಂದು ನಾನಿಲ್ಲಿ ಹಲವು ದೃಷ್ಟಾಂತಗಳನ್ನು ಕೂಡಿಸಿ ಕೊಟ್ಟಿದ್ದೇನೆ:

> *ತನ್ನ ಸ್ವಯಂಪ್ರೇರಿತ ದೇಶತ್ಯಾಗದ ಅವಧಿಯಲ್ಲಿ ಅರ್ಜುನ, ಈ ಹಾದಿಗಳಲ್ಲಿ ಅಲೆದಾಡುತ್ತಾನೆ – ಇಂದ್ರಪ್ರಸ್ಥದಿಂದ ಉತ್ತರಕ್ಕೆ ಗಂಗಾದ್ವಾರಕ್ಕೆ, ಅಲ್ಲಿಂದ ಪೂರ್ವ ಹಿಮಾಲಯಕ್ಕೆ, ಆಗ್ನೇಯ ದಿಕ್ಕಿಗೆ ನೈಮಿಷಕ್ಕೆ, ಪೂರ್ವಕ್ಕೆ ಕೌಶಿಕಿಗೆ, ಮತ್ತೆ ಆಗ್ನೇಯದ ಗಯಾಕ್ಕೆ, ಅಲ್ಲಿಂದ ಮುಂದೆ ವಂಗದೇಶಕ್ಕೆ, ಕಳಿಂಗದ ಮೂಲಕ ದಕ್ಷಿಣಕ್ಕೆ, ಅಲ್ಲಿ ಪಶ್ಚಿಮ ಕರಾವಳಿಯ ಗೋಕರ್ಣಕ್ಕೆ, ಅಲ್ಲಿಂದ ಮತ್ತೆ ಉತ್ತರದ ಪ್ರಭಾಸ ಮತ್ತು ದ್ವಾರಕೆಗೆ, ಈಶಾನ್ಯದ ಪುಷ್ಕರಕ್ಕೆ ಮತ್ತು ಅಲ್ಲಿಂದ ಮರಳಿ ಇಂದ್ರಪ್ರಸ್ಥಕ್ಕೆ (ಮಹಾಭಾರತ, ೧.೨೦೦-೧೦). ತನ್ನ ಸಿಂಹಾಸನಾ ರೋಹಣಕ್ಕೆ ಮೊದಲು ಚಕ್ರವರ್ತಿ ಯುಧಿಷ್ಠಿರ ನಾಲ್ಕೂ ದಿಕ್ಕುಗಳನ್ನು ಗೆದ್ದು ಬರಲು ತನ್ನ ತಮ್ಮಂದಿರನ್ನು ಕಳಿಸುತ್ತಾನೆ – ಅರ್ಜುನ ಉತ್ತರಕ್ಕೆ ಹೋಗುತ್ತಾನೆ (ಆನರ್ತ, ಕಾಶ್ಮೀರ ಮತ್ತು ಬ್ಯಾಕ್ಟ್ರಿಯಾ); ಭೀಮ ಪೂರ್ವಕ್ಕೆ ಹೋಗುತ್ತಾನೆ (ವಿದೇಹ, ಮಗಧ, ಅಂಗ, ವಂಗ, ತಾಮ್ರಲಿಪ್ತಿ); ಸಹದೇವ ದಕ್ಷಿಣಕ್ಕೆ ಹೋಗುತ್ತಾನೆ (ತ್ರಿಪುರ, ಪೋತನ, ಪಾಂಡ್ಯ-ದ್ರಾವಿಡ-ಚೋಳ-ಕೇರಳ- ಆಂಧ್ರಭೂಮಿಗಳು); ನಕುಲ ಪಶ್ಚಿಮಕ್ಕೆ ಹೋಗುತ್ತಾನೆ (ಮರುಭೂಮಿ, ಮಾಳವ, ಪಂಚನದ ದಾಟಿ ಪಲ್ಲವಭೂಮಿಯವರೆಗೂ) (ಮಹಾಭಾರತ, ೨.೨೩-೨೯). ಯುದ್ಧದ ಬಳಿಕ, ಪಾಂಡವರು ತಮ್ಮ ಸಾರ್ವತ್ರಿಕ ಆಳ್ವಿಕೆಯನ್ನು ಸಾರಲು ಅಶ್ವಮೇಧಯಾಗವನ್ನು ಮಾಡುವ ಸಂದರ್ಭದಲ್ಲಿ, ಆ ಕುದುರೆ ಹಾದುಹೋಗುವ ದಾರಿಯ ನಕ್ಷೆಯು – ತ್ರಿಗರ್ತದಿಂದ ಹೊರಟು ಪ್ರಾಗ್ಜ್ಯೋತಿಷಕ್ಕೆ, ಮುಂದೆ ಮಣಿಪುರ, ಮಗಧ, ವಂಗ, ಚೇದಿ, ಕಾಶಿ, ಕೋಸಲ, ದ್ರಾವಿಡ, ಆಂಧ್ರ, ಗೋಕರ್ಣ, ಪ್ರಭಾಸ, ದ್ವಾರಕ, ಪಂಚನದ ಮತ್ತು ಗಾಂಧಾರಕ್ಕೆ ಮುಟ್ಟುತ್ತದೆ (ಮಹಾಭಾರತ, ೧೫.೭೩-೮೫). ಕಡೆಯದಾಗಿ, ಅವರು ತಮ್ಮ ರಾಜತ್ವವನ್ನು ಬಿಟ್ಟುಕೊಟ್ಟು ತಮ್ಮ 'ಮಹಾಪ್ರಸ್ಥಾನ' ಮಾಡುವಾಗ, ಪಾಂಡವರು ಮೊದಲು ಪೂರ್ವದ ಲೌಹಿತ್ಯ ನದಿಯತ್ತ ಹೋಗುತ್ತಾರೆ; ಅಲ್ಲಿಂದ ಉತ್ತರಕ್ಕೆ (ಅಂದರೆ, ಈಶಾನ್ಯಕ್ಕೆ) ತಿರುಗಿ ಕರಾವಳಿಯ ಮೂಲಕ ಹಾದು ನೈರುತ್ಯ ಭಾಗಕ್ಕೆ ಬರುತ್ತಾರೆ; ಅಲ್ಲಿಂದ ದ್ವಾರಕೆಗೆ ಹೋಗಿ ಮುಂದೆ ಹಿಮವನ್, ವಾಲುಕರ್ಣವ (ಮಹಾನ್ 'ಮರಳಿನ ಸಮುದ್ರ') ದಾಟಿ ಮೇರು ಪರ್ವತವನ್ನು ತಲುಪುತ್ತಾರೆ (ಮಹಾಭಾರತ, ೧೭). ಈರೀತಿ ಅವರು, ಯಾವ ಕಾರಣಕ್ಕಾಗಿ ತಮ್ಮ ಕುಟುಂಬ ನಾಶವಾಯಿತೋ ಅಂಥ ಕಾರಣದ ನಿಯಂತ್ರಣಕ್ಕಾಗಿ, ಹಿಂದೆ ಹೇಳಿದಂತಹ ಮಾರ್ಗಗಳನ್ನೇ ಅನುಸರಿಸಿ, ಕಡೆಯ ವಿಶ್ವಪ್ರದಕ್ಷಿಣೆಯನ್ನು ಮುಗಿಸಿ – ಉಚಿತ ರೀತಿಯಲ್ಲಿ ತಮ್ಮ ಸಾವಿನತ್ತ ಪ್ರಸ್ಥಾನಗೈಯುತ್ತಾರೆ.*

ಹೀಗೆ, ಮಹಾಭಾರತವು ತನ್ನ ಮುಖ್ಯಕಥನದ ಮೊದಲ ಅಧ್ಯಾಯಗಳಿಂದಲೇ, ಅಲ್ಲಲ್ಲಿ ಆಯಕಟ್ಟಿನ ಸ್ಥಳಗಳಲ್ಲಿ – ಯುದ್ಧಕ್ಕೆ ಮೊದಲು ಸಿಂಹಾಸನಾರೋಹಣ, ಯುದ್ಧದ



ಬಳಿಕ ರಾಜ್ಯಸ್ಥಾಪನೆಯ ಘೋಷಣೆ, ಮತ್ತು ಕಥೆಯ ಕಡೆಗೆ ಸಾವಿನ ಕಡೆಗೆ ಹೋಗುವ ಕ್ರಿಯಾವಿಧಿಗಳಲ್ಲಿ – ಇಂಥ ನಕ್ಷೆಯನ್ನು ಕೊಡುವ ಮೂಲಕ ಕ್ರಿಯೆಯನ್ನು ಮೂರ್ತ ಸ್ಥಳಗಳಲ್ಲಿ ಸ್ಥಾಪಿಸುತ್ತ ಹೋಗಬೇಕೆನ್ನುವ ಸತತ ಒತ್ತಾಯವನ್ನು ಬಿಂಬಿಸುತ್ತದೆ. ಇಲ್ಲಿ ನನ್ನ ಆಸಕ್ತಿಯನ್ನು ಕೆರಳಿಸುವುದು, ಮಹಾಭಾರತದಲ್ಲಿ ಇಂಥ ಒಂದು ಸ್ಥಳಸೂಚಕ ಪ್ರತಿಭಾವಿಲಾಸ ಕೆಲಸ ಮಾಡಿದೆ ಎನ್ನುವುದು; ಆ ಸ್ಥಳಸೂಚನೆ ಎಷ್ಟು ನಿಖರವಾಗಿದೆ ಎನ್ನುವುದಲ್ಲ (ನಿಜ, ಇದರಲ್ಲಿ ಅಸ್ಪಷ್ಟತೆಯಿದೆ, ಗೊಂದಲವಿದೆ, ಕೆಲವೊಮ್ಮೆ ವಿಚಿತ್ರ ಅವಾಸ್ತವಿಕತೆಗಳೂ ಇವೆ). ಆದರೆ ಈ ಮೂಲಕ ಪ್ರಸ್ತುತ ಕಥನವು ಒಂದು ಗೋಚರ ಭೌಗೋಲಿಕ ಆವರಣವನ್ನು ನಿರ್ಮಿಸುತ್ತದೆ; ಮತ್ತು ಆ ಆವರಣದಲ್ಲಿ, ಆ ಪುರಾಣಕ್ಕೆ ಮಾಧ್ಯಮವಾಗಿ ಒದಗಿಬಂದಂಥ ಸಂಸ್ಕೃತ ಸಂಸ್ಕೃತಿಯ ಸಂದೇಶವನ್ನೂ ರಾಜಕೀಯ ಅಧಿಕಾರವನ್ನೂ ಅನ್ವಯಿಸಬಹುದೆನ್ನುವ ಸೂಚನೆ ಕೊಡುತ್ತದೆ.

ಸಂಸ್ಕೃತ ಮಹಾಕಾವ್ಯಗಳಲ್ಲಿ ಕಾಣುವ ಇಂಥ ಸ್ಥಳನಿರ್ಮಾಣಪ್ರತಿಭೆಯು, ಮೊದಲ ಸಹಸ್ರಮಾನದ ಆರಂಭದ ಶತಮಾನಗಳಲ್ಲಿ ಬಂದ ಆಸ್ಥಾನ ಸಾಹಿತ್ಯಗಳಲ್ಲಿ – ಅದರಲ್ಲಿ ಪ್ರಸಿದ್ಧವಾದ ದಂಡಯಾತ್ರೆಯ ಸಿದ್ಧಮಾದರಿಯಲ್ಲಿ – ಇನ್ನೂ ಹೆಚ್ಚಿನ ಪ್ರಖರತೆಯನ್ನು ಪಡೆಯುತ್ತದೆ. ಖ್ಮೇರ್ ದೇಶದವರೆಗಿನ ವ್ಯಾಪ್ತಿಯಲ್ಲಿ ನೋಡಿದಾಗ, ಇದಕ್ಕೆ ಕಾಣಬಹುದಾದ ಅತ್ಯಂತ ಪ್ರಭಾವಶಾಲಿ ಉದಾಹರಣೆ ಕಾಲಿದಾಸನ 'ರಘುವಂಶ'ದಲ್ಲಿದೆ. ವಿವರಗಳನ್ನು ಔಚಿತ್ಯಪೂರ್ಣವಾಗಿ ಸೇರಿಸುತ್ತ ಹೋಗುವ ಮೂಲಕ ಇಲ್ಲಿ ವಾಸ್ತವಿಕತೆಯೆನ್ನಬಹುದಾದ ಪರಿಣಾಮವೊಂದನ್ನು ಸೃಷ್ಟಿಸುವ ಪ್ರಯತ್ನ ಸ್ಪಷ್ಟವಾಗಿಯೇ ಗೋಚರಿಸುವಂತಿದೆ. ಇಲ್ಲಿ ಕಾಣಸಿಗುವ ಸ್ಥಳಾವರಣದ ಸ್ಪಷ್ಟ ಚಿತ್ರೀಕರಣವು, ಅಧಿಕಾರದ ಆವರಣವನ್ನೂ ಮತ್ತು ಆ ಮೂಲಕ ಪರೋಕ್ಷವಾಗಿ ಆ ಅಧಿಕಾರಕ್ಕೆ ಧ್ವನಿಯನ್ನು ಕೊಡುವ ಹಾಗೂ ಆ ಆವರಣದಲ್ಲಿ ಅಧಿಕಾರದ ವ್ಯಾಪ್ತಿಯನ್ನು ಬಿಂಬಿಸುವ ಕಾವ್ಯದ ವ್ಯಾಪ್ತಿಯನ್ನೂ ಬಿಂಬಿಸುತ್ತದೆ. ಈ ಕಾವ್ಯದ ಇಂಥ ಗುಣಕ್ಕೂ ಮತ್ತು ಕಾಲಿದಾಸನು ಅದಕ್ಕೆ ಮೂಲವಾದ ಸ್ಥಳವಿವರಗಳನ್ನು ಸಮುದ್ರಗುಪ್ತ (ಕ್ರಿ.ಶ. ೩೩೫-೭೬) ನಿಲ್ಲಿಸಿದ ಅಲಹಾಬಾದಿನ ಸ್ತಂಭಶಾಸನದಿಂದ ಎರವಲು ಪಡೆದ ಎನ್ನುವುದಕ್ಕೂ ಸಂಬಂಧವಿದೆ. ಇದರರ್ಥ ಈ ಕಾವ್ಯಕ್ಕಿಂತ ಆ ಶಾಸನವು ಕಡಿಮೆ ಸಾಹಿತ್ಯಕವೆಂದೋ ಹೆಚ್ಚು ದಾಖಲೆಯ ಗುಣವುಳ್ಳದ್ದೆಂದೋ ಅರ್ಥವಲ್ಲ (ಆ ಶಾಸನವನ್ನು ಬರೆದ ಹರಿಷೇಣನೆಂಬಾತ ಅದನ್ನು ಕಾವ್ಯವೆಂದೇ ಕರೆದುಕೊಂಡಿದ್ದಾನೆ; ಒಮ್ಮೆ ಆತ ಹಾಗೆ ಕರೆದಿರದಿದ್ದರೂ ಅದನ್ನು ಕಡಿಮೆಯೆನ್ನಲು ಬಾರದು). ಮತ್ತು, ಇಂಥ ಎರವಲು ಪಡೆದ ಪರಿಣಾಮವಾಗಿಯೇ ಕಾಳಿದಾಸನ ವರ್ಣನೆಗೆ ಒಂದು ಐತಿಹಾಸಿಕ ಮಾದರಿ ಒದಗಿ ಅದು ಆ ಮೂಲಕ ಹೆಚ್ಚು 'ಸತ್ಯ'ವೆಂದು ಕಾಣಲು

ತೊಡಗುತ್ತದೆಯೆಂಬುದೂ ಇಲ್ಲಿನ ಸೂಚನೆಯಲ್ಲ. ಆದರೆ, ಹೀಗೆ ಶಾಸನ ಮತ್ತು ಪಠ್ಯಗಳನ್ನು ಅವುಗಳ ಐತಿಹಾಸಿಕ ಸಂಬಂಧದಲ್ಲಿ ಜೋಡಿಸಿ ನೋಡಿದಾಗ ನಮಗೆ ಸರಳವಾದ ಸಂಗತಿಯೊಂದು ಗೋಚರಿಸುತ್ತದೆ – ಸಂಸ್ಕೃತ ಸಂಸ್ಕೃತಿಯೊಳಗೆ ಕಾಣುವ ಅಧಿಕಾರದ ಸಾಹಿತ್ಯಕ ರೂಪವೇನಿದೆ ಅದು ಕೆಲವೊಮ್ಮೆ ಸಾಕ್ಷಾತ್ ಐತಿಹಾಸಿಕ ರಾಜಕೀಯ ಆಕಾಂಕ್ಷೆಗಳೊಂದಿಗೂ ಹೊಂದಿಕೊಂಡದ್ದಾಗಿತ್ತು – ಎಂಬುದು.

ಒಟ್ಟಿನಲ್ಲಿ, ರಾಜಕೀಯ ಮತ್ತು ಕಾವ್ಯಗಳೆರಡನ್ನೂ ಒಳಗೊಂಡ ಈ ಒಂದು ವಿಶಾಲ ಆವರಣವನ್ನು ನಾವು ಹೇಗಾದರೂ ವ್ಯಾಖ್ಯಾನಿಸಿಕೊಳ್ಳಲಿ, (ಗಮನಿಸಿ – ಈ ವಿಶಾಲ ಆವರಣವು ಯಾವಾಗಲೂ ಶಾಸನ ಅಥವಾ ಅಂಥ ಮಾಧ್ಯಮಗಳು ನಿರೂಪಿಸುವ ಜಾಗತಿಕ ಸ್ಥಳಕ್ಕೇ ಸಂಪೂರ್ಣ ಬದ್ಧವಾಗಿರಬೇಕಿರಲೂ ಇಲ್ಲ) ಮತ್ತು, ಈ ಆವರಣದೊಳಗಿನ ಸಾಮ್ರಾಜ್ಯಶಾಹಿ ಅಧಿಕಾರ ಮತ್ತು ಸಂಸ್ಕೃತಿಗಳ ನಡುವಿನ ಸಂಬಂಧಸ್ವರೂಪ ಎಂಥದೇ ಆಗಿರಲಿ, ಇಂಥ ಆವರಣಗಳು ಆ ಕಾಲದ ಪುರಾಣ ಪಠ್ಯಗಳಲ್ಲಿ ನಿರ್ಮಿತವಾದವು – ಎಂಬುದಂತೂ ನಿರ್ವಿವಾದದ ಸಂಗತಿ. ಹೀಗೆ, ಪುರಾಣ ಪಠ್ಯಗಳಲ್ಲಿ ನಿರ್ಮಿತವಾದ ಇಂಥ ವಿಶಾಲ ಆವರಣವನ್ನು ಹಿನ್ನೆಲೆಯಾಗಿ ಇಟ್ಟುಕೊಂಡೇ ನಾವೀಗ ಹಲವು ಮಾದರಿಯ ದೇಶಭಾಷಾ ಆವರಣಗಳು – ಸಾಂಸ್ಕೃತಿಕ ಮತ್ತು ಅಧಿಕಾರದ ಆವರಣಗಳು – ರೂಪುಗೊಂಡ ವಿಧಾನವನ್ನು ವ್ಯಾಖ್ಯಾನಿಸಬೇಕು.

## ಸಂಸ್ಕೃತ ಸಾಹಿತ್ಯಕ ಶೈಲಿಯ ಸ್ಥಳಾವರಣ

ತ್ರಿಪುರದ ದೊರೆಗಳ ಸಾರ್ವತ್ರಿಕ ಚಕ್ರವರ್ತಿತ್ವವನ್ನು ಕುರಿತು ಬರೆದಿರುವ ರಾಜಶೇಖರನೇ ಸಾಹಿತ್ಯದ ಉಗಮವನ್ನು ಕುರಿತ ಅನ್ಯೋಕ್ತಿಯೊಂದನ್ನು ಬರೆದಿದ್ದಾನೆ; ಅದರಲ್ಲಿ ಆತ ''ಕಾವ್ಯದ ಆದಿಮ ಅಸ್ತಿತ್ವ''ವನ್ನು ಕುರಿತಂತೆ ಕಾವ್ಯಪುರುಷನ ಕಥೆಯನ್ನು ಹೀಗೆ ಹೇಳುತ್ತಾನೆ:

> *ವಾಗ್ದೇವಿಗೆ ಬ್ರಹ್ಮನು ಒಬ್ಬ ಮಗನನ್ನು ಸೃಷ್ಟಿಸಿದ. ಆತನ ಬಾಯಿ ಸಂಸ್ಕೃತದ್ದು, ತೋಳುಗಳು ಪ್ರಾಕೃತದ್ದು, ಸೊಂಟ ಅಪಭ್ರಂಶದ್ದು, ಕಾಲುಗಳು ಪೈಶಾಚದ್ದು ಮತ್ತು ಆತನ ಎದೆ ಮಿಶ್ರಭಾಷೆಯದ್ದಾಗಿತ್ತು. ಆತನ ಸಂಗಾತಿಯಾಗಿ ಸಾಹಿತ್ಯವಿದ್ಯೆಯನ್ನು ಸೃಷ್ಟಿಸಿದ ಬ್ರಹ್ಮ, ಆತ ಎಲ್ಲಿ ಹೋದರೂ ಅವಳು ಅವನನ್ನು ಅನುಸರಿಸುವಂತೆ ಏರ್ಪಡಿಸಿದ. ಅವರಿಬ್ಬರೂ ಮೊದಲು ಪೂರ್ವಕ್ಕೆ ಹೋದರು, ಮತ್ತು ಆಗ ಸಾಹಿತ್ಯವಿದ್ಯೆಯು ಕಾವ್ಯಪುರುಷನನ್ನು ವಶೀಕರಿಸಿಕೊಳ್ಳಲು ಪ್ರಯತ್ನಿಸತೊಡಗಿದಾಗ, ಆಗ ಕಾವ್ಯಪುರುಷನು ಆಕೆಯೊಂದಿಗೆ ಸಂಧಿಸಮಾಸಗಳನ್ನೊಳಗೊಂಡ ಪ್ರಾಸಗಳಲ್ಲೂ ಕ್ಲಿಷ್ಟಮೂಲದ ಪದಗಳೊಡನೆಯೂ ಕಾವ್ಯದಲ್ಲಿ ಮಾತಾಡಿದಾಗ,ಅದು ಗೌಡಪಥವಾಗಿ ರೂಢಿಗೆ ಬಂತು. ಆಮೇಲೆ ಆತ ಉತ್ತರದಿಕ್ಕಿಗೆ ಪಾಂಚಾಲ ದೇಶಕ್ಕೆ ಹೋದ. ಅಲ್ಲಿ ಆತ ಅರೆಸಂಧಿಸಮಾಸಗಳನ್ನೊಳಗೊಂಡ*



> *ಪ್ರಾಸಗಳಲ್ಲೂ ರೂಪಕಗಳ ನ್ನೊಳಗೊಂಡ ನುಡಿಗಟ್ಟುಗಳಲ್ಲೂ ಕಾವ್ಯದಲ್ಲಿ ಮಾತಾಡಿದ; ಅದು ಪಾಂಚಾಲಪಥವಾಯಿತು. ಕಡೆಗೆ ಅವರು ದಕ್ಷಿಣದಿಕ್ಕಿಗೆ ಬಂದರು. ಅಲ್ಲಿ ಅವನು ಸಾಧಾರಣಪ್ರಾಸಗಳನ್ನು ಬಳಸಿ ಸಂಧಿಸಮಾಸಗಳಿಲ್ಲದೆ ಸರಳ ಶಬ್ದಗಳಲ್ಲಿ ಕಾವ್ಯದಲ್ಲಿ ಮಾತಾಡಿದಾಗ ಅದು ವೈದರ್ಭಪಥವೆಂದು ಹೆಸರು ಪಡೆಯಿತು. (ಕಾವ್ಯಮೀಮಾಂಸೆ ೪)*

ಇಲ್ಲಿ ಚುಟುಕಾಗಿ ಸಂಗ್ರಹಿಸಿದ ರಾಜಶೇಖರನ ಈ ಸಾಹಿತ್ಯದ ಅನ್ಯೋಕ್ತಿ ಕಥನವು ನಾವು ಈಗಾಗಲೇ ಪ್ರಸ್ತಾಪಿಸಿರುವ ಹಲವು ಸಂಗತಿಗಳನ್ನು ಎತ್ತಿಕೊಳ್ಳುತ್ತದೆ – ಸಂಸ್ಕೃತ ಪ್ರತಿಭೆಯಲ್ಲಿ ಅಡಕವಾದ ಭೌಗೋಲಿಕ ಸ್ವರೂಪದ ಆವರಣದ ಪ್ರಸ್ತಾಪ ಮತ್ತು ಸಾಹಿತ್ಯಕ ಭಾಷೆಯ ನಿರ್ಮಿತಿಯಲ್ಲಿ ನಿಯಂತ್ರಣಗಳನ್ನು ವಿಧಿಸುವಂಥ ಕಟ್ಟುಪಾಡುಗಳ ಪ್ರಸ್ತುತಿ – ಇವು ಅಂಥವು. ಆದರೆ ನಾನಿಲ್ಲಿ ಈ ಉಲ್ಲೇಖವನ್ನು ತರುತ್ತಿರುವುದು ಅದಕ್ಕಾಗಿಯಲ್ಲ, ಸಾಹಿತ್ಯಕ ಶೈಲಿಯ ಪ್ರಾಂತ್ಯಾಂತರವ್ಯಾಪ್ತಿಯ ಭೌಗೋಲಿಕತೆಯ ಪ್ರಶ್ನೆಯನ್ನು ಪರಿಚಯಿಸುವ ಸಲುವಾಗಿ ನಾನಿಲ್ಲಿ ಈ ಪ್ರಸ್ತಾಪವನ್ನು ಎತ್ತುತ್ತಿದ್ದೇನೆ. ಇಲ್ಲಿ ರಾಜಶೇಖರನು ಪ್ರಸ್ತಾಪಿಸುವ ಮಾರ್ಗ/ರೀತಿ ಎಂಬ ವಿಷಯಕ್ಕೆ ಸಾಕಷ್ಟು ಪೂರ್ವವೃತ್ತಾಂತಗಳಿದ್ದಾವೆ. ಅಲ್ಲಿ, ಈ ಮಾರ್ಗ/ರೀತಿಯ ಪ್ರಶ್ನೆಗಳು ಮೊದಮೊದಲಿಗೆ ತುಸು ಗೊಂದಲಮಯವಾಗಿ ಮತ್ತು ಮುಂದೆ, ಹತ್ತನೆಯ ಶತಮಾನದ ಹೊತ್ತಿಗೆ ಸಾಕಷ್ಟು ಸ್ಪಷ್ಟವಾಗಿ ವ್ಯಕ್ತಗೊಂಡಿವೆ.

ಈ ಎರಡರಲ್ಲಿ ಪ್ರಾಥಮಿಕವೂ ಮುಖ್ಯವೂ ಆದ ಮಾರ್ಗ ಎಂಬ ಶಬ್ದವು ಮುಖ್ಯವಾಗಿ ಎರಡು ಅರ್ಥಗಳನ್ನು ಒಳಗೊಂಡಿದೆ. ಮೊದಲನೆಯದಾಗಿ, ಇದು ಈಗಾಗಲೇ ಹಲವರು ಹೋಗಿರುವ ಒಂದು ಹಾದಿ; ಆದ್ದರಿಂದ ಇದೊಂದು ಬರವಣಿಗೆಯ ಕಟ್ಟಳೆ ಯಾ ಸಂಪ್ರದಾಯ. ಅಲ್ಲದೆ, ಗ್ರೀಕ್ ಶಬ್ದ 'ಓಡೋಸ್' (ದಾರಿ) ನ ಹಾಗೆ, ಮಾರ್ಗ ಎನ್ನುವುದೂ ಸಾಹಿತ್ಯಸೃಷ್ಟಿಯಲ್ಲಿ 'ಒಂದು ದಾರಿಯ ಅನುಸರಣೆ' ಅಥವಾ ಒಂದು ಪದ್ಧತಿ, ಮೆಥಡ್ (ಮೆಥ್-ಓಡೋಸ್).[೬] ಸಂಸ್ಕೃತದ ಸಾಹಿತ್ಯಮೀಮಾಂಸೆಯ ಪರಿಭಾಷೆಯಲ್ಲಿ ಈ ಶಬ್ದಕ್ಕೆ ಕ್ರಿ.ಶ. ೭ರಿಂದ ೧೦ನೆಯ ಶತಮಾನದವರೆಗೆ ಬಹಳ ಮಹತ್ವವನ್ನು ಹಚ್ಚಲಾಗಿತ್ತು. ೯ನೆಯ ಶತಮಾನದ ಮೊದಲ ಭಾಗದಲ್ಲಿ ಕಾಶ್ಮೀರಿ ಸಿದ್ಧಾಂತಕಾರ ವಾಮನ ''ರೀತಿಯೇ ಕಾವ್ಯದ ಆತ್ಮ'' ಎಂದು ಘೋಷಿಸಿದ. ಮುಂದೆ, ಇಂಥ ಮಹತ್ವ ಈ ಶಬ್ದಕ್ಕೆ ಬರಲಿಲ್ಲವಾದರೂ ವಿಶ್ವಾತ್ಮಕ ಮತ್ತು ದೇಶೀಯ ಬರವಣಿಗೆಯ ಸಿದ್ಧಾಂತೀಕರಣದಲ್ಲಿ ಇದಕ್ಕೆ ಪ್ರಾಮುಖ್ಯವಿದ್ದೇ ಇದೆ. ಕೆಲವೊಮ್ಮೆ ಇದು ಕೇವಲ ಸೀಮಿತವ್ಯಾಪ್ತಿಯ ಭಾಷಾಶಾಸ್ತ್ರೀಯ ಪರಿಶೀಲನೆಯೆಂದು ಅನಿಸಬಹುದು – ಕಾರಣ, ಮಾರ್ಗವೆನ್ನುವುದು ಸಾಹಿತ್ಯದ ಭಾಷಾಂಗವನ್ನು ಕುರಿತ ಚರ್ಚೆಯೇ. ಆದರೆ, ದಕ್ಷಿಣ ಏಶಿಯಾದಾದ್ಯಂತ

ಹಲವು ಶತಮಾನಗಳ ಕಾಲ, ಇಲ್ಲಿನ ಧೀಮಂತರು ಇದೇ ಪ್ರಶ್ನೆಗಳನ್ನು ಕುರಿತು ಮಗ್ನರಾಗಿದ್ದರು – ಎಂಬುದನ್ನೂ ನಾವಿಲ್ಲಿ ನೆನಪಿನಲ್ಲಿ ಇಟ್ಟುಕೊಳ್ಳಬಹುದು.

ಮೇಲಿನ ರಾಜಶೇಖರನ ವೃತ್ತಾಂತದಲ್ಲಿಯೇ ಕಾಣುವ ಹಾಗೆ, ಸಂಸ್ಕೃತ ಸಾಹಿತ್ಯದ ಮಾರ್ಗವು ಬಹುತ್ವದಿಂದ ಕೂಡಿ ಪ್ರಾಂತೀಯ ಗುಣವುಳ್ಳದ್ದೆಂದು ಆ ಸಿದ್ಧಾಂತ ಹೇಳುತ್ತದೆ: ಅದರಲ್ಲಿ ಪೂರ್ವದ ಒಂದು ಮಾರ್ಗವಿದೆ (ಗೌಡ, ಅಂದರೆ ಸುಮಾರಾಗಿ ಬಂಗಾಲದ್ದು), ದಕ್ಷಿಣದ ಮಾರ್ಗವಿದೆ (ವೈದರ್ಭ ಅಂದರೆ ವಿದರ್ಭದ್ದು), ಉತ್ತರದ ಮಾರ್ಗವಿದೆ (ಪಾಂಚಾಲ ಮತ್ತು ಉತ್ತರ ಗಂಗಾಬಯಲಿನದ್ದು); ಕಾಲಾನಂತರದಲ್ಲಿ ಇದಕ್ಕೆ ಪಶ್ಚಿಮದ ಮಾರ್ಗ (ಲಾಟ್ಯ, ಅಂದರೆ ಲಾಟದೇಶದ್ದು ಯಾ ದಕ್ಷಿಣ ಗುಜರಾತಿನದ್ದು) ಮತ್ತು ಇನ್ನೂ ಹಲವು ಮಾರ್ಗಗಳೂ ಸೇರಿಕೊಳ್ಳುತ್ತವೆ. ಸಾಹಿತ್ಯದ ಇಂಥ ಪ್ರಾಂತೀಯ ವೈವಿಧ್ಯಗಳನ್ನು ಬೇರ್ಪಡಿಸುವ ಹಲವು ಲಕ್ಷಣಗಳನ್ನು ಇಲ್ಲಿ ಭಾಷೆಯ ಬಳಕೆಯ 'ಗುಣ'ಗಳೆಂದು ಕರೆಯಲಾಗಿದೆ – ಈ ಗುಣಗಳು ಧ್ವನಿಶಾಸ್ತ್ರ (ಧ್ವನಿಮಾಗಳ ರಚನೆಯಲ್ಲಿ), ವಾಕ್ಯರಚನೆ (ನಾಮವಾಚಕ ನಿರ್ಮಾಣದಲ್ಲಿ) ಮತ್ತು ಪದಕೋಶ (ರೂಢಿಗತವಾದ ಮತ್ತು ಉತ್ಪನ್ನಗೊಂಡ ಶಬ್ದಗಳ ಸಾಪೇಕ್ಷ್ಯ ಪ್ರಾಮುಖ್ಯವನ್ನು ಸೂಚಿಸುವಲ್ಲಿ) ಗಳ ಮೂಲಕ ಕಾಣಿಸುತ್ತವೆ. ಉದಾಹರಣೆಗೆ, ೭ನೆಯ ಶತಮಾನದ ತುದಿಗೆ ದಂಡಿಯು ವೈದರ್ಭವನ್ನು ''ಸಕಲಗುಣಗಳನ್ನುಳ್ಳದ್ದು'' ಎಂದೂ ಅದೇ ಗೌಡವು ಆ ಗುಣಗಳಾವುವೂ ಕಾಣಿಸದ ವಿಪರ್ಯಾಯ ಸ್ವರೂಪದ್ದು -- ಎಂದೂ ನಿರ್ವಚಿಸುತ್ತಾನೆ.[೧೦] ಮೊದಲನೆಯದರಲ್ಲಿ ಸಂಯುಕ್ತಗಳೂ ಉತ್ಪನ್ನಶಬ್ದಗಳೂ ಕಡಿಮೆಯಾದರೆ ಎರಡನೆಯದರಲ್ಲಿ ಅವೆರಡೂ ಗರಿಷ್ಠವಾಗಿವೆ.

ಮೊದಲಿನಿಂದಲೂ ಈ ಮಾರ್ಗ ಸಿದ್ಧಾಂತದ ಬರವಣಿಗೆಗಳನ್ನು ಪ್ರತ್ಯಕ್ಷವಾಗಿ ಯಾ ಪರೋಕ್ಷವಾಗಿ ವಿಮರ್ಶಿಸುತ್ತ ಬರಲಾಗಿದೆ. ಇಂಥ ವಿಮರ್ಶೆಯ ಪ್ರಕಾರ ಲೇಖಕರು ಯಾವುದೇ ಒಂದು ಮಾರ್ಗವನ್ನಾದರೂ ಸ್ವತಂತ್ರವಾಗಿ ಆಯ್ದುಕೊಳ್ಳಲು ಸಾಧ್ಯ – ಎನ್ನುವುದು ಒಂದು ಸಾಧಾರಣ ನಂಬಿಕೆ. ವಾಮನನ ಪ್ರಕಾರ, ''ಈ ಪ್ರಾಂತೀಯ ವೈದೃಶ್ಯಗಳ ಅರ್ಥ ಆಯಾ ಪ್ರಾಂತೀಯ ಕವಿಗಳ ಬರಹಗಳಲ್ಲಿ ಕಾಣುವ ಶೈಲಿಯ ಭಿನ್ನತೆಯಷ್ಟೇ; ಸ್ವತಃ ಆಯಾ ಪ್ರಾಂತ್ಯಗಳು ಈ ವೈದೃಶ್ಯಗಳಿಗೆ ಏನೂ ಕಾರಣವಲ್ಲ'' (ಕಾವ್ಯಾಲಂಕಾರಸೂತ್ರ ೧.೨.೬-೧೦; ೧೪-೧೮). ಹೀಗೆ ಹೇಳುವಾಗ ಆತ ಇಂಥ ಪ್ರಾಂತೀಯ ಶೈಲಿಗಳು ಆಯಾಯಾ ಪ್ರಾಂತ್ಯದ ಲೇಖಕರಲ್ಲೇ ಯಾಕೆ ಕಾಣಿಸಿಕೊಳ್ಳುತ್ತವೆ ಎಂಬುದನ್ನು ವಿಶದಪಡಿಸುವುದಿಲ್ಲವಾದ್ದರಿಂದ ಆತನ ಈ ಅಭಿಪ್ರಾಯಗಳು (ಮತ್ತು ಉದಾಹರಣೆಗಳೂ) ಸಾಕಷ್ಟು ಗೊಂದಲಮಯವಾಗಿವೆ. ಆದರೆ ಒಂದು ನಿರ್ದಿಷ್ಟ ಪ್ರಾಂತ್ಯಕ್ಕೆ ಸೇರಿರುವುದು ಆಯಾ ಕವಿಗೆ ಅದೇ ಭಾಷೆಯನ್ನು



ಬಳಸುವ ವಿಧಿಯನ್ನೇನೂ ಸೃಷ್ಟಿಸುವುದಿಲ್ಲ – ಎಂಬುದನ್ನಂತೂ ಆತ ಸ್ಪಷ್ಟವಾಗಿಯೇ ಹೇಳುತ್ತಾನೆ. ಇದೇ ಮಾತನ್ನು ಹಲವು ಶತಮಾನಗಳ ಬಳಿಕ ಬಂದ ಕುಂತಕನೂ ಪುನರುಚ್ಚರಿಸುತ್ತಾನೆ:

> *ಶೈಲಿಯ ಭಿನ್ನತೆಯೆನ್ನುವುದು ನಿಜವಾಗಿಯೂ ಪ್ರಾಂತೀಯ ಭಿನ್ನತೆಯನ್ನು ಆಧರಿಸಿದ್ದಲ್ಲಿ, ಶೈಲಿಗಳೂ ಪ್ರಾಂತ್ಯಗಳಷ್ಟೇ ಅಸಂಖ್ಯವಾಗಬೇಕಿತ್ತು. ಬರವಣಿಗೆಯು ಒಂದು ನಿರ್ದಿಷ್ಟ 'ರೀತಿ'ಯನ್ನು ಅನುಸರಿಸುತ್ತದೆ ಎಂದ ಮಾತ್ರಕ್ಕೆ ಅದನ್ನು, ಉದಾಹರಣೆಗೆ, ಒಳಕುಟುಂಬದ ಮದುವೆಗಳ ಹಾಗೆ, ಒಂದು ಪ್ರಾಂತೀಯ ಪದ್ಧತಿಯೆಂದು ವರ್ಗೀಕರಿಸಲಾಗದು... ಅದೂ ಅಲ್ಲದೆ, ಶೈಲಿಯೆನ್ನುವುದು ಒಂದು ಪ್ರಾಂತ್ಯಕ್ಕೆ ಸಹಜವಾಗಿ ಒದಗಿಬರುವ ಒಂದು ಲಕ್ಷಣವೇನೂ ಅಲ್ಲ; ದಕ್ಷಿಣದವರ ಹಾಡುಗಾರಿಕೆಗೆ ಕೆಲವು ಸುಂದರವಾದ ಧ್ವನಿ, ಶಯ್ಯೆಗಳು ಒದಗಿಬರುವ ಹಾಗೆ. (ವಕ್ರೋಕ್ತಿಜೀವಿತ ೧.೨೪)*

ಸಂಸ್ಕೃತದ ಇತಿಹಾಸದಲ್ಲಿ, ಲೇಖಕರು ಸ್ವೇಚ್ಛೆಯಿಂದ ಒಂದಲ್ಲ ಒಂದು ಶೈಲಿಯನ್ನು ಆಯ್ದುಕೊಳ್ಳಲು ಸ್ವತಂತ್ರರಾಗಿದ್ದರು. ಉದಾಹರಣೆಗೆ, ೧೧ನೆಯ ಶತಮಾನದ ಇನ್ನೊಬ್ಬ ಕಾಶ್ಮೀರಿ ಕವಿ ಬಿಲ್ಹಣ, ತಾನು ವೈದರ್ಭದಲ್ಲಿ ಬರೆಯುವುದಾಗಿ ಹೇಳಿಕೊಳ್ಳುತ್ತಾನೆ (''ಸ್ವಚ್ಛ ಆಗಸದಿಂದ ಬಿದ್ದ ಮಕರಂದದ ಹನಿಗಳ ಹಾಗೆ... ನಿಶ್ಚಯವಾಗಿಯೂ ಸಾಹಿತ್ಯಕ ಸೌಂದರ್ಯವನ್ನು ತಂದುಕೊಡುವಂಥ ವೈದರ್ಭವು ಅತ್ಯುತ್ಕೃಷ್ಟ ಕವಿಗಳಿಗೆ ಮಾತ್ರ ಸಿದ್ಧಿಸುವಂಥದು,'' ವಿಕ್ರಮಾಂಕದೇವಚರಿತ, ೯). ಮುಂದೆ, ಈ ರೀತಿ ಹಲವು ಪ್ರಾಂತೀಯ ಶೈಲಿಗಳಲ್ಲಿ ಒಂದನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ಇನ್ನಷ್ಟು ಗಟ್ಟಿಯಾಗಿ ರೂಢವಾಗುತ್ತ ಹೋಯಿತು. ಕಾರಣ – ಆಗಲೇ ಮಾರ್ಗ ಪದ್ಧತಿಯು ರಸಸಿದ್ಧಾಂತದ ಜತೆಗೆ ಹೆಚ್ಚುಹೆಚ್ಚು ಕೈಜೋಡಿಸಲು ಆರಂಭಿಸಿತು; ರಸಸಿದ್ಧಾಂತದ ಅನ್ವಯ, ಒಂದು ದೃಶ್ಯ ಯಾ ಸನ್ನಿವೇಶದ ಭಾವಸ್ಥಿತಿಯನ್ನು ಸೃಷ್ಟಿಸಲಿಕ್ಕೆ ಭಾಷಾಮಾರ್ಗಗಳ ಬಳಕೆ ಉಪಯುಕ್ತವಾಗಿ ಒದಗಿಬಂತು. ೯ನೆಯ ಶತಮಾನದ ಲೇಖಕ ರುದ್ರಟ ಅದನ್ನೇ ಹೇಳುತ್ತಾನೆ – ವೈದರ್ಭ ಮತ್ತು ಪಾಂಚಾಲ ಮಾರ್ಗಗಳು 'ಶೃಂಗಾರ', 'ಕರುಣ', 'ಭಯಾನಕ' ಮತ್ತು 'ಅದ್ಭುತ' ರಸಗಳನ್ನು ಸೃಷ್ಟಿಸಲು ಅನುಕೂಲವೆಂದು. ಇನ್ನೂ ಮುಂದುವರೆದು ಆತ, ಇಂಥ ವಿಭಿನ್ನ ಮಾರ್ಗಗಳನ್ನು 'ಅನುಭಾವ'ಗಳು ಎಂದು – ಅಂದರೆ, ವಿಭಿನ್ನ ಸನ್ನಿವೇಶಗಳಲ್ಲಿ ಪಾತ್ರವು ತೋರುವ ಪ್ರತಿಕ್ರಿಯೆಗಳನ್ನು ಸೂಚಿಸಲು ಸಹಾಯಕವಾದದ್ದು ಎಂದು – ವರ್ಗೀಕರಿಸುತ್ತಾನೆ (ರುದ್ರಟ, ಕಾವ್ಯಾಲಂಕಾರ ೧೫.೨೦).

ವಿವರಣಾತ್ಮಕ ಮಟ್ಟದಲ್ಲಿ ನೋಡುವುದಾದರೆ, ನಿಜವಾಗಿ, ಈ ಮಾರ್ಗಗಳೆಂಬ ವರ್ಗೀಕರಣವೇ ಸಂಸ್ಕೃತ ಸಾಹಿತ್ಯದ ವಿಶ್ವಾತ್ಮಕ ಗುಣವನ್ನು ಸಂವಹಿಸುವ ವಿಧಾನಗಳು. ಇಂಥ ''ಪ್ರಾಂತೀಯ'' ವ್ಯತ್ಯಾಸಗಳೇನಿವೆ ಇವೇ ಜಾಗತಿಕರೂಪಿ

ಸಂಸ್ಕೃತದ ಅಂಶಗಳು; ಇಂಥ ವ್ಯತ್ಯಾಸಗಳನ್ನೊಳಗೊಂಡಿರುವುದರಿಂದಲೇ ಸಂಸ್ಕೃತವು ''ಪ್ರಾಂತ್ಯಾಂತರವ್ಯಾಪ್ತಿಯ'' ಗುಣವನ್ನು ಸಂಪಾದಿಸಿಕೊಳ್ಳುತ್ತದೆ. ಅರ್ಥಾತ್, ಇವು ಸ್ಥಳೀಯೇತರ ಉದ್ದೇಶಗಳಿಂದ ಸೃಷ್ಟಿಯಾದ ಸ್ಥಳೀಯ ವರ್ಣಛಾಯೆಗಳು; ಸಂಸ್ಕೃತವು ಎಲ್ಲ ಸ್ಥಳೀಯತೆಗಳನ್ನೂ ಒಳಗೊಂಡು ವ್ಯಾಪಿಸುವ ಪರಿಣಾಮ ಸಿದ್ಧಿಸುವುದು ಇವುಗಳ ಮೂಲಕವೇ. ಇದರ ಫಲವಾಗಿಯೇ, ಮುಂದೆ ನಾವು ಗುರುತಿಸುವಂತೆ, ಸಂಸ್ಕೃತದ ಅಂತರ್ಗತ ಲಕ್ಷಣವಾದ ಈ ಪ್ರಾಂತ್ಯಾಂತರವ್ಯಾಪ್ತಿಯ ಸ್ವರೂಪವು ಪ್ರಾಂತೀಯತೆಯ ಅಭಿವ್ಯಕ್ತಿಗೆ ವಿರುದ್ಧವಾಗಿ ಕಾಣಿಸಿಕೊಳ್ಳುತ್ತದೆ. ಮುಂದೆ, ಮಧ್ಯಯುಗದ ಕಡೆಯ ಭಾಗಗಳಲ್ಲಿ ದೇಶಭಾಷೆಯ ಕಾವ್ಯಗಳು ಉದ್ಭವಿಸಿದಾಗ ಮೊದಲುಗೊಂಡ ಜಗ್ಗಾಟವು ಸಂಸ್ಕೃತದ ಇದೇ ಲಕ್ಷಣಕ್ಕೆ ಪ್ರತಿಯಾಗಿ ನಿರ್ಮಿತವಾಗುತ್ತದೆ. ಅಲ್ಲಿ ಮಾರ್ಗಕ್ಕೆ ಪ್ರತಿಯಾಗಿ, ಅಂದರೆ ಜಾಗತಿಕ ಚಲನಶೀಲತೆಯುಳ್ಳ ಸಂಸ್ಕೃತದ ವಿಶ್ವಾತ್ಮಕ ಸ್ವರೂಪಕ್ಕೆ ಪ್ರತಿಯಾಗಿ, ದೇಶಿಯೆನ್ನುವ ಪರಿಕಲ್ಪನೆ ಚಾಲ್ತಿಗೆ ಬರುತ್ತದೆ; ಅದು ಚಲನೆಯಿಲ್ಲದ್ದು, ನಿರ್ದಿಷ್ಟ ಸ್ಥಳಕ್ಕೆ ಬದ್ಧವಾದದ್ದು.

ಈರೀತಿ, ದಕ್ಷಿಣ ಮತ್ತು ಆಗ್ನೇಯ ಏಶಿಯಾಗಳಲ್ಲಿ ಹೆಚ್ಚೂಕಮ್ಮಿ ಸಮಾನಾಂತರವಾದ ಐತಿಹಾಸಿಕ ಸಂದರ್ಭಗಳಲ್ಲಿ ರೂಪುಗೊಂಡ ಸಂಸ್ಕೃತ ಮಹಾವಿಶ್ವವು ತನ್ನ ಬೇರೆಬೇರೆ ಶಾಖೆಗಳ ನಡುವೆಯೂ ಸಾಂಸ್ಕೃತಿಕ ಸಾಮ್ಯಗಳನ್ನು ಪಡೆದಿದೆ. ರಾಜಕೀಯ ಅಭಿವ್ಯಕ್ತಿಗೆ ಅನುಕೂಲವಾಗುವ ಸಂಜ್ಞಾಮಾರ್ಗದ ಅನ್ವೇಷಣೆ, ಮತ್ತು, ವ್ಯಾಕರಣ-ಅಲಂಕಾರ-ಛಂದಸ್ಸುಗಳ ಸುಸಂಸ್ಕೃತ ನಿಯಮಗಳನ್ನಾ ಧರಿಸಿದ ಸಾಹಿತ್ಯ – ಇವೆರಡೂ ಸೇರಿ ಇಲ್ಲಿ ಇಂಥ ವಿಶ್ವಾತ್ಮಕತೆಯ ನಿರ್ಮಾಣಕ್ಕೆ ಅಗತ್ಯವಾದ ಏಕರೂಪತೆಯೊಂದನ್ನು ಅಣಿಗೊಳಿಸಿದವು. ಹೀಗೆ, ಪ್ರಾಂತ್ಯಾಂತರ ವ್ಯಾಪ್ತಿಯ ಸಂಜ್ಞಾಭಾಷೆಯಲ್ಲಿ ಸಾಹಿತ್ಯವನ್ನು ಉತ್ಪಾದಿಸುವ ಮೂಲಕ ಅದನ್ನು ಏಕಾಧಿಕಾರಕ್ಕೆ ಒಳಪಡಿಸುವ ಪ್ರಯತ್ನವೇನಿದೆ, ಅದು, ಹಲವು ಸ್ತರಗಳಲ್ಲಿ ಸಂಭವಿಸಿದಂಥದು – ಒಂದು ಮಟ್ಟದಲ್ಲಿ, ಪುರಾಣ ಮತ್ತು ಪುರಾಣೋತ್ತರ ಕಥನಗಳಿಗೆ ರಾಜಕೀಯ-ಸಾಂಸ್ಕೃತಿಕ ಪರಿವೇಷಗಳನ್ನು ತೊಡಿಸಿ ಕಟ್ಟಿದ ಸ್ಥಳೀಯೇತರ ಚೌಕಟ್ಟಿನಲ್ಲಿ ಸಾಹಿತ್ಯವನ್ನು ಅಳವಡಿಸುವುದು; ಇನ್ನೊಂದು ಮಟ್ಟದಲ್ಲಿ, ಸಾಹಿತ್ಯ ಸಿದ್ಧಾಂತದ ನೆಲೆಯಲ್ಲಿ, ಪ್ರಾಂತೀಯ ಲಕ್ಷಣವುಳ್ಳ ಬರವಣಿಗೆಯ ಮಾದರಿಗಳನ್ನು ಪ್ರಾಂತ್ಯಾಂತರವ್ಯಾಪ್ತಿಯ ಮಾರ್ಗದ ತಾತ್ವಿಕತೆಯಲ್ಲಿ ಅಳವಡಿಸಿ ಆ ಮೂಲಕ ಸಂಸ್ಕೃತವನ್ನು ಪ್ರಾಂತೀಯತೆಯಿಂದ ಮುಕ್ತಗೊಳಿಸುವುದು. ಸಂಸ್ಕೃತ ಸಾಹಿತ್ಯ ಪರಂಪರೆಯ ಈ ಮುಖ್ಯ ಲಕ್ಷಣಗಳೇ ಮುಂದೆ ದೇಶಭಾಷಾ ನಿರ್ಮಾಣದ ಪ್ರಕ್ರಿಯೆಯಲ್ಲಿ ಮುಖ್ಯಪಾತ್ರವನ್ನು ವಹಿಸಿದ್ದು.



## ದೇಶಭಾಷಾ ನಿರ್ಮಾಣ

ಆಧುನಿಕಪೂರ್ವಯುಗದಲ್ಲಿ, ಜಗತ್ತಿನ ಯಾವುದೇ ಭಾಗದ ಒಂದು ಸ್ಥಳೀಯ ಸಾಹಿತ್ಯ ಸಂಸ್ಕೃತಿಯು ತನ್ನ ಬೆಳವಣಿಗೆಯನ್ನು ನಿಖರವಾಗಿ ಗುರುತಿಸಲು ಅವಕಾಶ ಮಾಡಿಕೊಡುವ ಸ್ವಪ್ರಜ್ಞೆಯೊಂದನ್ನು ಸೂಚಿಸುವ ದೃಷ್ಟಾಂತವು ಇನ್ನೆಲ್ಲಿಗಿಂತ ಚೆನ್ನಾಗಿ ನಮಗೆ ಕಾಣದೊರೆಯುವುದು – ಕನ್ನಡದಲ್ಲಿ; ಇವತ್ತಿನ ಭಾರತದ ಕರ್ನಾಟಕ ರಾಜ್ಯದಲ್ಲಿ ನೆಲೆಯಾಗಿರುವ ಭಾಷೆ ಇದು. ಈಗ, ಈ ಭಾಷೆಯ ಸಾಹಿತ್ಯ ನಿರ್ಮಾಣದಲ್ಲಿ ನಡೆದ ವಿಶ್ವಾತ್ಮಕತೆ ಮತ್ತು ದೇಶೀಯತೆಗಳ ದೀರ್ಘಕಾಲದ ವ್ಯವಹಾರ ವಿವರಗಳ ಪರಿಶೀಲನೆಗೆ ತೊಡಗುವ ಮೊದಲು, ನಾನಿಲ್ಲಿ ಶಾಸನಗಳಲ್ಲಿ ವ್ಯಕ್ತವಾಗುವ ಅದರ ಇತಿಹಾಸವನ್ನು ಚುಟುಕಾಗಿ ಚಿತ್ರಿಸುತ್ತೇನೆ.

ಸಾರ್ವಜನಿಕವಾಗಿ ಪ್ರದರ್ಶಿತವಾದ ಶಾಸನಪಠ್ಯಗಳ ಕ್ಷೇತ್ರದಲ್ಲಿ ಕಾಣುವ ಕನ್ನಡದ ವೈಶಿಷ್ಟ್ಯಗಳು, ಇದನ್ನು, ಈ ಭಾಷೆಯ ಮೂಲಕ ದೇಶಭಾಷಾ ನಿರ್ಮಾಣದ ಪ್ರಕ್ರಿಯೆಯನ್ನು ಪರಿಶೀಲಿಸಲು ಉತ್ತಮ ದೃಷ್ಟಾಂತವನ್ನಾಗಿ ಮಾಡಿವೆ. ವಾಯವ್ಯ ಕರ್ನಾಟಕದಲ್ಲಿ, ಅಂದರೆ ಮುಂದೆ ಪ್ರಸ್ತಾಪಿಸಲಿರುವ ಪ್ರತಿಷ್ಠಿತ ಸಾಹಿತ್ಯಕ ಉಪಭಾಷೆಯು ಚಾಲ್ತಿಗೆ ಬಂದ ನೆಲದಲ್ಲಿ, ನಮ್ಮ ಮಾಹಿತಿಗೆ ಬರುವ ಮೊತ್ತ ಮೊದಲಿನ ರಾಜವಂಶ – ಕದಂಬರದು (ಕ್ರಿ.ಶ. ೪ನೆಯ ಶತಮಾನದಿಂದ). ಇವರು ಸಾರ್ವಜನಿಕ ದಾಖಲೆಗಳಲ್ಲಿ ಕನ್ನಡವನ್ನು ಬಳಸಲಿಲ್ಲ. ಇನ್ನು, ನೈರುತ್ಯ ಕರ್ನಾಟಕದಲ್ಲಿ ಸಿಗುವ ಅತ್ಯಂತ ಹಳೆಯ ರಾಜವಂಶವು ಗಂಗರದು (೪ರಿಂದ ೯ನೆಯ ಶತಮಾನ); ಇವರೂ ೬ನೆಯ ಶತಮಾನದ ಅವಿನೀತನವರೆಗೂ ತಮ್ಮ ತಾಮ್ರಪತ್ರಗಳಲ್ಲಿ ಕನ್ನಡವನ್ನು ಉಪಯೋಗಿಸಲಿಲ್ಲ. ಅಲ್ಲಿಂದ ಮುಂದೆ, ಕನ್ನಡ ನಾಡಿನ ರಾಜವಂಶಗಳ ಸಾಂಸ್ಕೃತಿಕ ರಾಜಕಾರಣವನ್ನು ಪರಿಶೀಲಿಸಲು ಸಾಧ್ಯವಾಗುವುದು ಬಾದಾಮಿ ಚಾಲುಕ್ಯರಿಂದ, ಮತ್ತು ಅದಕ್ಕಿಂತ ಚೆನ್ನಾಗಿ, ಆಮೇಲೆ ಬಂದ ರಾಷ್ಟ್ರಕೂಟರಿಂದ. ಅಂಕಿ ಅಂಶಗಳಲ್ಲಿ ಹೇಳುವುದಾದರೆ, ರಾಷ್ಟ್ರಕೂಟರ ಕಾಲದಲ್ಲಿ, ೯ನೆಯ ಶತಮಾನದ ಆದಿಯಿಂದ ಕ್ರಮೇಣ, ಆದರೆ ಅಚ್ಚರಿಯಾಗುವಂತೆ, ಸಂಸ್ಕೃತ ಕಾವ್ಯವನ್ನು ಸಾರ್ವಜನಿಕ ಉದ್ದೇಶಕ್ಕೆ ಬಳಸುವ ರೂಢಿ ಇಳಿಮುಖವಾಗುವುದು ಕಾಣಿಸುತ್ತದೆ. ಕ್ರಿ.ಶ. ೭೫೦ರ ಸುಮಾರಿಗೆ ಮೊದಲುಗೊಳ್ಳುವ ಈ ರಾಜವಂಶವು ಶಾಸನಗಳನ್ನು ಬರೆಸಲು ತೊಡಗಿದಾಗ ಶೇಕಡಾ ೮೦ರಷ್ಟು ಶಾಸನಗಳು ಸಂಸ್ಕೃತದಲ್ಲೇ ಇದ್ದರೆ, ಅದಾಗಿ ೨೦೦ ವರ್ಷಗಳ ಬಳಿಕ ಈ ಪ್ರಮಾಣ ಶೇಕಡಾ ೫ಕ್ಕೆ ಇಳಿಯಿತು (ಗೋಪಾಲ್ ೧೯೯೪, ೪೨೯-೬೫).

ಭಾಷೆಯ ಆಯ್ಕೆಯಲ್ಲಾದ ಈ ಪಲ್ಲಟದ ಜತೆಜತೆಗೇ ಕಾಣುವ ಇನ್ನೊಂದು

ವಿದ್ಯಮಾನವೆಂದರೆ ಬಾದಾಮಿ ಚಾಲುಕ್ಯರ ಮತ್ತು ರಾಷ್ಟ್ರಕೂಟರ ಎಲ್ಲ ಆರಂಭದ ಕನ್ನಡ ಶಾಸನಗಳೂ ಕೇವಲ ದಾಖಲೆಯ ಸ್ವರೂಪದವು. ರಾಜವಂಶವೊಂದು 'ಕುಶಲ'ವಾದ ಕನ್ನಡ ಶಾಸನವೊಂದನ್ನು ಬರೆಯಿಸಿದ್ದು ಮೂರನೆಯ ಕೃಷ್ಣನ ಆಳ್ವಿಕೆಯ ಕಾಲದಲ್ಲಿ (೯೩೯, ಎ.ಇ ೧೯, ೨೮೯), ಅಂದರೆ, ಶಾಸನದಲ್ಲಿ ಕನ್ನಡವು ಪ್ರಥಮವಾಗಿ ಬಳಕೆಯಾದ (ಹಲ್ಮಿಡಿ, ಕ್ರಿ.ಶ. ೪೫೦) ಉದಾಹರಣೆಗಿಂತ ಸುಮಾರು ಅರ್ಧ ಸಹಸ್ರಮಾನದಷ್ಟು ತಡವಾಗಿ.

ಹಾಗೆಯೇ, ಕನ್ನಡದಲ್ಲಿ ಗ್ರಾಂಥಿಕರೂಪದ ಸಾಹಿತ್ಯ ಉತ್ಪಾದನೆಯಾದದ್ದು ಕಾಣುವುದು, ಈ ಮೂರನೆಯ ಕೃಷ್ಣನಿಗಿಂತ ಕೆಲವೇ ತಲೆಮಾರುಗಳ ಮುಂಚೆ, ರಾಷ್ಟ್ರಕೂಟ ರಾಜ ನೃಪತುಂಗ ಅಮೋಘವರ್ಷ(ಕ್ರಿ.ಶ. ೮೧೪-೮೦)ನ ಕಾಲದಲ್ಲಿ ಮಾತ್ರವೇ. ಸಾಹಿತ್ಯಸಂಸ್ಕೃತಿಯ ದೃಷ್ಟಿಯಿಂದ ಈ ಕಾಲ-ದೇಶಸಂಯುಕ್ತ ಬಿಂದುವು ಅಸಾಧಾರಣವಾದದ್ದು; ಭಾಷೆಭಾಷೆಗಳ ನಡುವಿನ ಹಲವು ಪ್ರಯೋಗಗಳು ಆಗ ಈ ಸ್ಥಳದಲ್ಲಿ ಜರುಗಿದವು. ಉದಾಹರಣೆಗೆ, ಈ ಕಾಲದಲ್ಲೇ ಜೈನರು ತಮ್ಮ ಧರ್ಮದ ಕಾವ್ಯಾತ್ಮಕ ಇತಿಹಾಸಗಳನ್ನು ಬರೆಯುವುದಕ್ಕಾಗಿ ಸ್ಪಷ್ಟವಾಗಿ ಸಂಸ್ಕೃತದತ್ತ ತಿರುಗಿದರು (ನೃಪತುಂಗನ ಆಧ್ಯಾತ್ಮಿಕ ಶಿಕ್ಷಕ ಎರಡನೆಯ ಜಿನಸೇನನ 'ಆದಿಪುರಾಣ' – ಕ್ರಿ.ಶ. ೮೩೭ – ಅಥವಾ ವರ್ಧಮಾನನ ಮೊದಲ ಸ್ವತಂತ್ರ ಜೀವನಚರಿತೆಯಾಗಿರುವ ಅಸಗನ 'ವರ್ಧಮಾನ ಪುರಾಣ' – ಕ್ರಿ.ಶ. ೮೫೩). ಇದೇ ಕಾಲದಲ್ಲೇ, ಕಳೆದ ಐದು ಶತಮಾನಗಳಿಂದೀಚೆಗೆ ಮೊದಲ ಬಾರಿಗೆ, ಜೈನರು ಸಂಸ್ಕೃತದ ವ್ಯಾಕರಣ ಗ್ರಂಥವೊಂದನ್ನು ರಚಿಸಿದರು; ಅದು – ಶಕಟಾಯನನ 'ಶಬ್ದಾನುಶಾಸನ'.[೧೧] ಇಲ್ಲಿ, ತುಸು ತಡವಾಗಿ ಕಾಣಿಸಿಕೊಂಡ ಅಪಭ್ರಂಶದಲ್ಲಿ – ಅಪಭ್ರಂಶವು ನಾವು ಗುರುತಿಸಿರುವ ಹಾಗೆ, ಸಂಸ್ಕೃತ ಮತ್ತು ಪ್ರಾಕೃತಗಳ ಜತೆಗೆ ವಿಶ್ವಾತ್ಮಕತೆಯನ್ನು ಸಾಧಿಸಿಕೊಂಡ ಮೂರನೆಯ ಭಾಷೆಯಾಗಿತ್ತು – ಪುಷ್ಪದಂತನೆಂಬ ಕವಿ ಕ್ರಿ.ಶ. ೯೫೦ರಲ್ಲಿ ಬರೆದ; ಆತ ಜೈನರ ಸಾರ್ವತ್ರಿಕ ಇತಿಹಾಸವನ್ನು ಕನ್ನಡದಲ್ಲಿ ಬರೆದ ಮೊದಲಿಗ.[೧೨] ಆದರೆ, ಈ ಘಟ್ಟದಲ್ಲಿ, ಐತಿಹಾಸಿಕವಾಗಿ ಅತ್ಯಂತ ಆಯಕಟ್ಟಿನ ಕೃತಿಯೊಂದು ಬಂದಿದ್ದು ಮಾತ್ರ ಕನ್ನಡದ ಸಾಹಿತ್ಯಸಂಸ್ಕೃತಿಯಲ್ಲಿಯೇ.

ಕನ್ನಡದಲ್ಲಿ ನೃಪತುಂಗನ ಕಾಲಕ್ಕಿಂತ ಮೊದಲೇ ಸಾಹಿತ್ಯ ಪಠ್ಯಗಳನ್ನು ಸೃಷ್ಟಿಸುವ ಪ್ರಯತ್ನಗಳು ನಡೆದಿದ್ದವೆಂಬುದರಲ್ಲಿ ಅನುಮಾನವಿಲ್ಲ. ಆದರೆ, ಮಧ್ಯಯುಗದಾದ್ಯಂತ ಚಾಲ್ತಿಯಲ್ಲಿದ್ದ ಕನ್ನಡ ಸಾಹಿತ್ಯ ಸಂಸ್ಕೃತಿಯ ಮೇರೆಗಳ ಪರಿಕಲ್ಪನೆಯಲ್ಲಿ, ಕನ್ನಡದ ''ಕೇಂದ್ರಸ್ಥಳ''ವಾಗಿದ್ದದ್ದು ಕಿಸುವೊಳಲ್ (ಪಟ್ಟದಕಲ್ಲು), ಪ್ರಸಿದ್ಧ ನಗರವಾಗಿದ್ದ ಕೊಪಣ (ಕೊಪ್ಪಳ), ಪುಲಿಗೆರೆ (ಲಕ್ಷ್ಮೇಶ್ವರ) ಮತ್ತು ಒಂಕುಂದ (ಬೆಳಗಾವಿ ಜಿಲ್ಲೆಯ ಒಕ್ಕುಂದ) – ಈ ಊರುಗಳ ನಡುವಿನ ಕನ್ನಡದ ತಿರುಳು ಭೂಮಿ (ಕವಿರಾಜಮಾರ್ಗ ೧.೩೮). ಅರ್ಥಾತ್ ರಾಜನೇ ಪ್ರತಿಷ್ಠಿತವೆಂದು ಸೂಚಿಸಿದ ಈ ಪ್ರಮುಖ ಉಪಭಾಷಾನಾಡು ಇದ್ದದ್ದು ಎರಡನೆಯ ಗೋವಿಂದ ಮತ್ತು ಅವನ ಮಗ ನೃಪತುಂಗರು ತಮ್ಮ ರಾಜಧಾನಿಯನ್ನು ಕಟ್ಟಿದ್ದ ಕರ್ನಾಟಕದ ವಾಯವ್ಯ ಭಾಗದಲ್ಲಲ್ಲ; ಬದಲು, ಅದಕ್ಕೆ ೨೫೦ ಕಿ.ಮಿ. ನೈರುತ್ಯಕ್ಕಿದ್ದ ಆ ಮೊದಲಿನ ಚಾಲುಕ್ಯರಾಜರ ಕೇಂದ್ರಪ್ರಾಂತ್ಯದಲ್ಲಿ.[೧೩] ಇದಕ್ಕೆ ಕಾರಣ, ಬಾದಾಮಿ ಮತ್ತು ಐಹೊಳೆಗಳಲ್ಲಿ ಆಗಲೇ ಹೊಸ ಕನ್ನಡ ಸಾಹಿತ್ಯವೊಂದು ಅಸ್ತಿತ್ವದಲ್ಲಿತ್ತು – ಎಂದಾದರೂ ಕೂಡಾ ಕನ್ನಡ ಸಾಹಿತ್ಯದ ಪ್ರಾಚೀನತೆ ಇನ್ನೂ ಕೆಲವು ಶತಮಾನಗಳಿಗಿಂತ ಹಿಂದೆ ಹೋಗುವುದಿಲ್ಲ. ನಿಜವಾಗಿ, ಕನ್ನಡ ಕವಿಗಳು ಸ್ವತಃ ತಮ್ಮ ಕವಿಪ್ರಶಂಸೆಯಲ್ಲಿ ಪ್ರಸ್ತಾಪಿಸುವ ಸಾಹಿತ್ಯ ಇತಿಹಾಸದ ಸ್ಮೃತಿ ಕೂಡಾ ಇದಕ್ಕಿಂತ ಹಿಂದೆ ಹೋಗುವುದಿಲ್ಲ. (ಹಾಗೆ ಪ್ರಸ್ತಾಪಿತವಾಗುವ ಅತ್ಯಂತ ಹಿಂದಿನ ಕವಿಗಳೆಂದರೆ ೯ನೆಯ ಶತಮಾನದ ಅಸಗ, ಗುಣನಂದಿಯರು). ಕನ್ನಡದಲ್ಲಿ ಲಭ್ಯವಿರುವ ಮೊದಲ ಪಠ್ಯವೂ ಕೂಡಾ ಹೀಗೇ ಅಭಿಪ್ರಾಯಪಡುತ್ತ, ಲೇಖಕನೊಬ್ಬನಿಗೆ ತನ್ನ ಪೂರ್ವದ ಸಾಹಿತ್ಯಮಾದರಿಗಳನ್ನು ಗುರುತಿಸಿಕೊಳ್ಳುವುದು ಎಷ್ಟು ಕಷ್ಟದ ಕೆಲಸವೆಂದು ಹೇಳುತ್ತದೆ; ತಾನು ಮಾಡಹೊರಟಿರುವ ಕಾರ್ಯಕ್ರಮಕ್ಕಾಗಿ ಅದು ಚಿಂದಿ ಆಯುವವರಂತೆ ಕನ್ನಡ ಸಾಹಿತ್ಯದ ತುಣುಕುಗಳ ಹುಡುಕಾಟಕ್ಕೆ ತೊಡಗುತ್ತದೆ:

> *ಸಂಸ್ಕೃತ ಮತ್ತು ಪ್ರಾಕೃತಗಳೆರಡರ ಪ್ರಯೋಗದ ಲಕ್ಷ್ಯಲಕ್ಷಣಗಳು ಹೇರಳವಾಗಿ ಮೊದಲೇ ಸಿಕ್ಕುವುದರಿಂದ ಅವು ಓರಣವಾದ ಸಾಹಿತ್ಯರಚನೆಗೆ ಇಷ್ಟಾನುಸಾರ ವಾಗಿ (ಬಗೆದಂತೆ) ಲಭ್ಯವಾಗುವವು. ಆದರೆ, ನಾನು ಪ್ರಸ್ತುತಪಡಿಸಲು ಹೊರಟಿರುವ ಪ್ರಸ್ಥಾನಕ್ಕೆ (ಕನ್ನಡ ಸಾಹಿತ್ಯದ) ತುಣುಕುಗಳನ್ನು (ಇರಿಕೊರೆ ಗೊಂಡು) ಬೇಡಿಹುಡುಕುವುದು ಅಗತ್ಯವಾಗಿದೆ. (ಸಂಸ್ಕೃತ ಮತ್ತು ಪ್ರಾಕೃತದ) ಪ್ರಾಚೀನ ಲಕ್ಷಣಕಾರರು ಮಾಡಿದ್ದನ್ನು ಕನ್ನಡಕ್ಕೆ ಸಂಬಂಧಿಸಿದಂತೆ ಮಾಡುವುದು ಕಷ್ಟಸಾಧ್ಯ. (ಕವಿರಾಜಮಾರ್ಗ, ೧.೪೧-೪೧)*

ಕನ್ನಡ ಸಾಹಿತ್ಯವೆಂಬುದೇ, ನಾನು ಆ ಶಬ್ದವನ್ನು ಉದ್ದಕ್ಕೂ ಬಳಸುತ್ತ ಬಂದಿರುವ ಅರ್ಥದಲ್ಲಿ, ಈ ಕಾಲಕ್ಕೆ ಒಂದು ಸಮೀಪಕಾಲದ, ಅಂದರೆ ಪ್ರಾಯಶಃ ೮ನೆಯ ಶತಮಾನದ, ಅನ್ವೇಷಣೆಯಾಗಿತ್ತು. ಕನ್ನಡದ ಇಂಥ ಹೊಸತನದ ಕಾರಣದಿಂದಲೇ, ಅಂದರೆ ಸಂಸ್ಕೃತಕ್ಕೆ ಹೋಲಿಸಿದರೆ ಈ ಸಾಹಿತ್ಯವು ಹೊಸದೆಂದು ಕಾಣಿಸುತ್ತಿದ್ದುದರಿಂದಲೇ, ಪ್ರಸ್ತುತ ಲೇಖಕ ಮಧ್ಯಯುಗದ ಈ ಸಾಹಿತ್ಯಸಂಸ್ಕೃತಿಯಲ್ಲಿ ನಡೆಯತೊಡಗಿದ್ದ ಇಂಥ ಸಂಕೀರ್ಣವಾದ ಸ್ಥಳೀಯ ಮತ್ತು ವಿಶ್ವಾತ್ಮಕ ಜಗ್ಗಾಟದಲ್ಲಿ ಹೆಣಗುತ್ತ ತನ್ನ ಹಾದಿಯನ್ನು ಹುಡುಕಿಕೊಳ್ಳಬೇಕಾಯಿತು. ಸಾಹಿತ್ಯದ ದೇಶಭಾಷಾ ನಿರ್ಮಾಣದ ಇತಿಹಾಸದಲ್ಲಿ ಕಾಣಸಿಗುವ ಇಂಥ ಒಂದು ಅನನ್ಯ ಕೃತಿ –

ಕವಿರಾಜಮಾರ್ಗ (ಕ್ರಿ.ಶ. ೮೭೫); ಈ ದೃಷ್ಟಿಯಿಂದ ಇದನ್ನು ಡಾಂಟೆಯ 'ಡೆ ವಲ್ಗಾರಿ ಇಲೋಕ್ವೆನ್ಷಿಯಾ' ಕೃತಿಯ ಜತೆಗೆ – ಯಾ ಅದಕ್ಕಿಂತ ಮೊದಲಿಗೆ – ಇಡಬಹುದಾದ್ದು. ಪ್ರಾಯಶಃ ಇದು, ಪ್ರಪಂಚದ ಸಂಸ್ಕೃತಿಯಲ್ಲೇ, ವಿಶ್ವಾತ್ಮಕ ಭಾಷೆಯೊಂದಕ್ಕೆ ಪ್ರತಿಯಾಗಿ ದೇಶಭಾಷಾ ಕಾವ್ಯಮೀಮಾಂಸೆಯೊಂದನ್ನು ಕಟ್ಟಿದ ಮೊತ್ತಮೊದಲ ಕೃತಿ.[೧೪] ಇದಕ್ಕೂ ಡಾಂಟೆಯ ಕೃತಿಗೂ ನಡುವೆ ಗಣನೀಯ ಸಾಂಸ್ಕೃತಿಕ ಮತ್ತು ಐತಿಹಾಸಿಕ ಸಾಮ್ಯಗಳಿದ್ದಾವೆ; ಕೆಲವು ವ್ಯತ್ಯಾಸಗಳೂ ಇದ್ದಾವೆ. ಸೂಕ್ಷ್ಮಸ್ತರದಲ್ಲಿ, '..ಇಲೋಕ್ವೆನ್ಷಿಯಾ'ಕ್ಕಿಂತ ಭಿನ್ನವಾಗಿ ಕವಿರಾಜಮಾರ್ಗವು ತನ್ನ ಕಾಲದಲ್ಲಿ ಪೈಪೋಟಿ ನಡೆಸುತ್ತಿರುವ ಹಲವು ಉಪಭಾಷೆಗಳ ನಡುವೆ ರಾಜ್ಯಕ್ಕೆ ಉಪಯುಕ್ತವಾಗುವಂತಹ ಒಂದು ಏಕೀಕೃತ ಭಾಷೆಯನ್ನು ನಿರ್ಮಿಸಲು ಪ್ರಯತ್ನಿಸುವುದಿಲ್ಲ. ಬದಲು, ಇದು ಸಾಹಿತ್ಯಕ್ಕೆ ಸಮರ್ಪಕವಾಗುವಂಥ ಭಾಷೆಯೊಂದನ್ನು ಹುಡುಕುತ್ತದೆ. ಇನ್ನು, ಸ್ಥೂಲಸ್ತರದಲ್ಲಿ, ರಾಜಕೀಯ ತತ್ವ-ಪ್ರಯೋಗಗಳಿಗೂ ಮತ್ತು ಡಾಂಟೆಯ ಕೃತಿಗೂ ಇರುವಂತಹ ಪಾರದರ್ಶಕ ಸಂಬಂಧ ಕವಿರಾಜಮಾರ್ಗದಲ್ಲಿ ಕಾಣಿಸುವುದಿಲ್ಲ; ಆದರೆ, ಈ ಕೃತಿಗೆ ತನ್ನ ಸಾಮಾಜಿಕ ಆವರಣ ಮತ್ತು ಲೇಖಕನ ಸಂದರ್ಭ ಮುಖ್ಯವಾಗಿರುವುದು ನಿಚ್ಚಳವಾಗಿದೆ. ಈ ಕೃತಿ ರಚನೆಯಾಗಿದ್ದು ನೃಪತುಂಗನ ಆಸ್ಥಾನದಲ್ಲಿ ಮತ್ತು ಅವನ ಮೇಲ್ವಿಚಾರಣೆಯಲ್ಲಿ, ಅಂದರೆ, ಈ 'ಕವಿರಾಜಮಾರ್ಗ'ವು ಸ್ವತಃ ನೃಪತುಂಗನ ಮಾರ್ಗವೇ ಸರಿ.[೧೫]

ಮಧ್ಯಕಾಲೀನ ಭಾರತದ ಸಾಂಸ್ಕೃತಿಕ-ರಾಜಕೀಯ ಇತಿಹಾಸಕ್ಕೆ 'ಕವಿರಾಜಮಾರ್ಗ'ವು ತುಂಬ ಪ್ರಮುಖ ದಾಖಲೆಯಾಗಿದ್ದರೂ ಕೂಡಾ ಕನ್ನಡದಲ್ಲಿ ಬಿಟ್ಟು ಬೇರಾವ ಭಾಷೆಯಲ್ಲೂ ಇದರ ವಿಮರ್ಶಾತ್ಮಕ ಚರ್ಚೆಯಿರಲಿ ಪರಿಚಯಾತ್ಮಕ ವೃತ್ತಾಂತವೂ ಬಂದಿಲ್ಲ. ಕನ್ನಡ ಭಾಷೆಯ ವಿದ್ವಾಂಸಚಿಂತನೆ ಕೂಡಾ ಇದರ ವಿಶಾಲವಾದ ಐತಿಹಾಸಿಕ ಪ್ರಾಮುಖ್ಯವನ್ನು ಗುರುತಿಸಿದ್ದು ಕಡಿಮೆಯೇ. ದಕ್ಷಿಣ ಏಶಿಯಾದ ಕುರಿತು ಎಲ್ಲೆಡೆ ನಡೆಯುತ್ತಿರುವ ಸಂಶೋಧನೆಗಳಲ್ಲಿ ಕನ್ನಡವೇ ಅನ್ಯಾಯದಿಂದ ನಿರ್ಲಕ್ಷಿತವಾಗಿದ್ದರೆ, ೧೨ನೆಯ ಶತಮಾನದ ವೀರಶೈವ ಸಾಂಸ್ಕೃತಿಕ ಕ್ರಾಂತಿಗೆ ಮುಂಚಿನ ಹಳಗನ್ನಡ ಭಾಷೆಯ ಈ ನಾಡಿನ ಸಾಹಿತ್ಯವೆಲ್ಲವೂ, ಕರ್ನಾಟಕದಲ್ಲೂ ಕೂಡಾ ಕಡಿಮೆ ಅಭ್ಯಾಸಗೊಳ್ಳುತ್ತಿದೆ. ಕಾರಣ, ಸಂಸ್ಕೃತದ ಜ್ಞಾನವಿಲ್ಲದೆ ಈ ಹಳಗನ್ನಡವನ್ನು ಹಿಡಿಯುವುದು ಕಷ್ಟ. ಪ್ರಸ್ತುತ ಪಠ್ಯವು ಸಂಸ್ಕೃತದ ಪರಂಪರೆಯ ಜತೆಗೆ, ಅದರಲ್ಲೂ ಮುಖ್ಯವಾಗಿ ದಂಡಿಯ 'ಕಾವ್ಯಾದರ್ಶ' ದೊಂದಿಗೆ, ಹೊಂದಿದ್ದ ಸಂಬಂಧವೇ ಒಗಟಿನದು. ಇವೆರಡೂ ಸಂಗತಿಗಳು ನಮಗೆ, ಆ ಕಾಲದ ಕನ್ನಡದಲ್ಲಿ ಬರೆಯುತ್ತಿದ್ದ ಧೀಮಂತರು ಏನನ್ನು ಸಾಧಿಸಹೊರಟಿದ್ದರು ಎಂಬುದರ



ಬಗ್ಗೆ ಸುಳಿವು ಕೊಡುತ್ತವೆ. ಈ ಮೊದಲೇ ನಾವು ನೋಡಿದಂತೆ, ದಕ್ಷಿಣ ಏಶಿಯಾದಲ್ಲಿ, ಸಂಸ್ಕೃತ ಕಾವ್ಯಮೀಮಾಂಸೆಯನ್ನು ಕುರಿತಂತೆ ಗ್ರಂಥಗಳು ಚಲಾವಣೆಯಲ್ಲಿ ಇದ್ದವು ಎನ್ನುವ ಸಂಗತಿಯೇ ಸಂಸ್ಕೃತವೆಂಬ ಮಹಾವಿಶ್ವದ ಸೃಷ್ಟಿಗೆ ಕಾರಣವೂ ಸಾಕ್ಷಿಯೂ ಆಗಿದ್ದವು. ಜತೆಗೆ, ಈ ಗ್ರಂಥಗಳು ಸ್ಥಳೀಯ ಕಾವ್ಯಗಳನ್ನು ತತ್ತ್ವೀಕರಿಸಲಿಕ್ಕೆ ಅಗತ್ಯವಾಗುವ ಚೌಕಟ್ಟನ್ನೂ ಒದಗಿಸುವಂಥವಾಗಿದ್ದವು (ಸಯಾಮ್‌ನಲ್ಲಿ, ಶ್ರೀಲಂಕಾದಲ್ಲಿ, ಟಿಬೆಟ್‌ನಲ್ಲಿ ಇತ್ಯಾದಿ). ಇಂಥದೇ ಪ್ರಕ್ರಿಯೆ ಭಾರತ ಉಪಖಂಡದಲ್ಲೂ ಸಂಭವಿಸಿತು; ಅದು ಮೊದಲಿಗೆ ಮತ್ತು ಇನ್ನೆಲ್ಲಿಗಿಂತ ಗಾಢವಾಗಿ ಸಂಭವಿಸಿದ್ದು ಕನ್ನಡ ನಾಡಿನಲ್ಲಿ.

## ಜಾಗತಿಕವನ್ನು ಸ್ಥಳೀಯಗೊಳಿಸುವಿಕೆ: ಕವಿರಾಜಮಾರ್ಗ ಮತ್ತು ಕಾವ್ಯದ ದಾರಿಗಳು

ಕವಿರಾಜಮಾರ್ಗ ಕೃತಿಯು ದಂಡಿಯ 'ಕಾವ್ಯಾದರ್ಶ'ದ ಸಂರಚನೆಯನ್ನು ಸಂಪೂರ್ಣವಾಗಿ ಪುನರ್‌ನಿರ್ಮಿಸುತ್ತದೆ ಮತ್ತು ಕೆಲವು ದೃಷ್ಟಿಗಳಿಂದ ಇದು ದಂಡಿಯ ಆ ಕೃತಿಯನ್ನು ಕುರಿತು ನಮಗೆ ಲಭ್ಯವಿರುವ ಅತ್ಯಂತ ಹಳೆಯ ವ್ಯಾಖ್ಯಾನವೂ ಹೌದು. ಮೊದಲಿಗೆ ಅದು ಕಾವ್ಯವನ್ನು ನಿರ್ವಚಿಸುತ್ತದೆ, ಕಾವ್ಯಕ್ಕೆ ತೊಂದರೆಯಾಗುವ ದೋಷಗಳನ್ನೂ ಅನುಕೂಲವಾಗುವ ಗುಣಗಳನ್ನೂ ಗುರುತಿಸುತ್ತದೆ (ಪರಿಚ್ಛೇದ ೧); ಆಮೇಲೆ ಶಬ್ದಾಲಂಕಾರಗಳನ್ನೂ (ಪರಿಚ್ಛೇದ ೨) ಅರ್ಥಾಲಂಕಾರಗಳನ್ನೂ (ಪರಿಚ್ಛೇದ ೩) ಪಟ್ಟಿಮಾಡುತ್ತದೆ. ಸಂರಚನೆಯಲ್ಲಿ ಕಾಣುವ ಸಾಮ್ಯದ ಜತೆಗೇ, ಇದರಲ್ಲಿ ಬರುವ ಸುಮಾರು ಇನ್ನೂರು ಉದಾಹರಣೆಯ ಪದ್ಯಗಳನ್ನು ಈ ಕೃತಿಯು ಪ್ರಾಯಶಃ ತನ್ನ ಸಂಸ್ಕೃತದ ಪೂರ್ವಕೃತಿಗಳಿಂದ ಅನುಸರಿಸುತ್ತದೆ. ಹಾಗಿದ್ದರೂ, ಹಲವೊಮ್ಮೆ ತಿಳಿಯಲಾಗುವಂತೆ, ಇದು ಸಂಸ್ಕೃತದ ಅನುವಾದವಲ್ಲ. ಯಾಕೆಂದರೆ, ಕನ್ನಡದ ಜ್ಞಾನವಿರಬೇಕಾದರೆ ಅದಕ್ಕೂ ಮೊದಲು ಸಂಸ್ಕೃತದ ಜ್ಞಾನವು ಅನಿವಾರ್ಯವೆಂದಾಗಿದ್ದ ಈ ಜಗತ್ತಿನಲ್ಲಿ, ''ಅನುವಾದ''ವೆಂದು ನಮಗೀಗ ಪರಿಚಿತವಾಗಿರುವ ಪರಿಕಲ್ಪನೆಗೆ ಅವಕಾಶವೇ ಇಲ್ಲ, ಮಾತ್ರವಲ್ಲ, ಈ ಕೃತಿಯು ತನ್ನ ಸಂಸ್ಕೃತ ಮಾದರಿಗಿಂತಲೂ ಭಿನ್ನವಾದ ಒಂದು ಕಾರ್ಯಸೂಚಿಯನ್ನು ಹೊಂದಿದೆ. ಕವಿರಾಜಮಾರ್ಗವು ಪ್ರಸ್ತುತಪಡಿಸುತ್ತಿರುವುದು ಸಾರ್ವತ್ರಿಕ ಸಂಸ್ಕೃತ ಕಾವ್ಯಮೀಮಾಂಸೆಯನ್ನು ಸ್ಥಳೀಯಗೊಳಿಸುವ ಒಂದು ಪ್ರಯೋಗವನ್ನು, ಮತ್ತು ಆ ಮೂಲಕ ಅದು ಕನ್ನಡಕಾವ್ಯದ ಸ್ವನಿರೂಪಣೆಯೊಂದನ್ನು ಮುಂದಿಡಲು ಹೊರಟಿದೆ. ಹಾಗಿದ್ದರೂ ಇನ್ನೊಂದು ದಿಕ್ಕಿನಿಂದ, ಇದು ಇಂಥ ಕಾವ್ಯಮೀಮಾಂಸೆಯ

ನಿರ್ಮಾಣವನ್ನು ಕುರಿತಂತೆಯೂ ಹಾಗೂ ಈ ಕಾಲದ ಜಾಗತಿಕ-ಸ್ಥಳೀಯ ಲೇವಾದೇವಿಯ ಚಲನಶೀಲತೆಯನ್ನು ಕುರಿತಂತೆಯೂ ಕೆಲವು ಒಳನೋಟಗಳನ್ನು ಕೊಡಬಲ್ಲುದಾಗಿದೆ. ನಾನಿಲ್ಲಿ ಈ ಕೃತಿಯ ಇಂಥ ಎರಡೂ ಸ್ವರೂಪಗಳನ್ನು ವಿವರಿಸಲು ಹೊರಟಿದ್ದೇನೆ – ಸಂಸ್ಕೃತದ ಮಾರ್ಗಕಾವ್ಯದ ಪ್ರಸ್ಥಾನವನ್ನು ಇದು ಹೇಗೆ ಸ್ವಾಧೀನಪಡಿಸಿಕೊಳ್ಳುತ್ತದೆ ಎಂಬ ಸಂಗತಿಯನ್ನು ವಿಶ್ಲೇಷಿಸುವ ಮೂಲಕ. ಬಹುಕಾಲದಿಂದ ಕವಿರಾಜಮಾರ್ಗದ ಅಭ್ಯಾಸಕಾರರಿಗೆ ತೊಡಕಾಗಿರುವ ಒಂದು ವಿಷಯ ಇದು.

ಮಾರ್ಗ – ಎಂಬ ವರ್ಗೀಕರಣವನ್ನು ಕವಿರಾಜಮಾರ್ಗವು, ಮೊದಲಿಗೆ ಅದರ ವಿಶಾಲಾರ್ಥದಲ್ಲಿ, ಒಂದು ಸಾಹಿತ್ಯಕ ಪದ್ಧತಿಯೆಂದು ಪರಿಚಯಿಸುತ್ತದೆ; 'ಕವಿರಾಜಮಾರ್ಗ'ವೆಂಬ ಹೆಸರಿನಲ್ಲಿಯೇ ಅಂತರ್ಗತವಾಗಿರುವ ಸೂಚನೆ ಇದು. ಇಲ್ಲಿ ಮಾರ್ಗವೆನ್ನುವುದು ''ಒಳ್ಳೆಯ ಕಾವ್ಯ''ವೆಲ್ಲವನ್ನೂ ಒಳಗೊಳ್ಳುವ ಒಂದು ಪದವಾಗುತ್ತದೆ (ದೂಷ್ಯಗುಣದ ಕಾವ್ಯಕ್ಕೆ ವಿರುದ್ಧವಾಗಿ, ೨.೭-೮, ಹಾಗೆಯೇ ನೋಡಿ – ಜಿನಸೇನ, ಆದಿಪುರಾಣ, ೧.೩೧; ೨೦೮-೯), ಮತ್ತು ಆದ್ದರಿಂದಲೇ, ಕಾವ್ಯಮಾರ್ಗವೆನ್ನುವುದು ಭಾಷೆಯನ್ನು ಅದರ ಎಲ್ಲ ರಾಚನಿಕ ಮತ್ತು ಆಲಂಕಾರಿಕ ಸಂಕೀರ್ಣತೆಯೊಂದಿಗೆ ಅತ್ಯುತ್ಕೃಷ್ಟವಾಗಿ ಬಳಸುವ ವಿಧಾನವಾಗುತ್ತದೆ:

> *ಭಾಷೆಯನ್ನು ಅರಿತಂಥವನು ಇನ್ನೊಬ್ಬರಿಗೆ ತನ್ನ ಯೋಚನೆಗಳು ತೆರೆದು ತಿಳಿಯುವಂತೆ ಅವರೊಂದಿಗೆ ಸಂವಹನ ನಡೆಸಬಲ್ಲ. ಕಿರಿದರಲ್ಲಿಯೇ ಹಿರಿದಾದ ಅರ್ಥವನ್ನಡಗಿಸಿ ತಿಳಿಸಬಲ್ಲಂಥವನು ಅವನಿಗಿಂತಲೂ ಚದುರ. ಇನ್ನು, ಛಂದೋಬಂಧದಲ್ಲಿ ನುಡಿಯನ್ನು ಅಳವಡಿಸಬಲ್ಲಾತ ಅವನಿಗಿಂತಲೂ ಜಾಣ. ಇನ್ನು, ಮಾರ್ಗಕಾವ್ಯಗಳನ್ನು (ಮಹಾಧ್ವ ಕೃತಿಗಳ್) ರಚಿಸ ಬಲ್ಲಂಥವನು ಎಲ್ಲರಿಗಿಂತಲೂ ಬಲ್ಲಿದನು. (ಕವಿರಾಜಮಾರ್ಗ, ೧.೧೫-೧೬)*

ಈ ವರ್ಣನೆ ಸ್ಪಷ್ಟವಾಗಿಯೇ ಅರ್ಥವಾಗುವಂಥದು. ಆದರೆ ಗೊಂದಲ ಹುಟ್ಟಿಸುತ್ತದೆಯೆಂದು ಗುರುತಿಸಲಾಗಿರುವುದು ಕವಿರಾಜಮಾರ್ಗದ ಮುಂದಿನ ನಡೆ. ಅಲ್ಲಿ ಈ ಕೃತಿಯು ಕನ್ನಡ ಕಾವ್ಯದ ವೈಶಿಷ್ಟ್ಯವನ್ನು ಗುರುತಿಸುವ ಸಾಧನವಾಗಿ, ಸಂಸ್ಕೃತವು ಯಾವುದನ್ನು ಪ್ರಸ್ತುತಪಡಿಸಿತ್ತೋ – ಮತ್ತು ಯಾವ ಪ್ರಸ್ತುತಿಯು ಸಂಸ್ಕೃತಕ್ಕೆ ಎಲ್ಲ ಸಾಹಿತ್ಯಾವರಣಗಳನ್ನು ವ್ಯಾಪಿಸಿಕೊಳ್ಳಲು ಸಹಾಯಕವಾಯಿತೋ – ಅದೇ ಪ್ರಾಂತೀಯಮಾರ್ಗಗಳ ತತ್ವವನ್ನು ಅಳವಡಿಸಿಕೊಳ್ಳುತ್ತದೆ:

> *ಅನೇಕ ಪ್ರಕಾರಗಳನ್ನೊಳಗೊಳ್ಳುವ ಕಾವ್ಯಮಾರ್ಗದ ಸೂಕ್ಷ್ಮಗತಿಗಳನ್ನು ಅರಿತು ತೀರ್ಮಾನಕೊಡುವುದು ಅಸಾಧ್ಯವಾದ ವಿಷಯ. ಪೂರ್ವದ ಶಾಸ್ತ್ರಗಳ ಸರಣಿಯಿಂದ ತಿಳಿಯುವ ನಿಯಮಗಳನ್ನು ಪರಿಶೀಲಿಸಿ, ಈ ವಿಷಯವು ಒಟ್ಟಿನಲ್ಲಿ ಸ್ಪಷ್ಟವಾಗುವಂತೆ, ಕನ್ನಡಕ್ಕೆ ಸಂಬಂಧಿಸಿದಂತೆ ಕೆಲವನ್ನು ಸ್ವಲ್ಪದರಲ್ಲೇ ಹೇಳುತ್ತೇನೆ..... ಲೋಕವು ಅನಾದಿಯಾಗಿರುವುದರಿಂದ ಇಲ್ಲಿ ಹುಟ್ಟುವ ಕವಿಗಳೂ ಅಸಂಖ್ಯರು, ಅವರ ವ್ಯಕ್ತಿಗತ ಅಭಿವ್ಯಕ್ತಿಯ ವಿಧಾನಗಳೂ ಅಸಂಖ್ಯ, ಆದ್ದರಿಂದಲೇ ಕಾವ್ಯಮಾರ್ಗದ ವೈವಿಧ್ಯಗಳೂ ಅಸಂಖ್ಯವೇ ಸರಿ.... ಆದರೆ ನನಗೆ ಸಾಧ್ಯವಿರುವಷ್ಟರಮಟ್ಟಿಗೆ, ಈ ವಿಷಯವನ್ನು ಕುರಿತು ಬರೆದ ಪೂರ್ವದ (ಸಂಸ್ಕೃತ) ಕವಿಗಳು ಈ ವ್ಯತ್ಯಾಸಗಳನ್ನು ಗುರುತಿಸಿರುವುದನ್ನು ಆಧರಿಸಿ, ದಕ್ಷಿಣ-ಉತ್ತರಗಳೆಂಬ ಮಾರ್ಗದ ಇಂಥ ಭೇದಗಳನ್ನು ಸಾಧ್ಯವಾದಷ್ಟು ನಾನು ಚರ್ಚಿಸುತ್ತೇನೆ.... ಇವೆರಡರಲ್ಲಿ ದಕ್ಷಿಣ ಮಾರ್ಗವು (ಹತ್ತು ಭಾಷಾ ಗುಣಗಳಿಂದಾಗಿ) ಹತ್ತು ಬಗೆಯದಾಗುತ್ತದೆ... ಉತ್ತರದ ಮಾರ್ಗವು ಈ ಗುಣಗಳ ವಿಪರ್ಯಯ ಸ್ವರೂಪವುಳ್ಳದ್ದಾಗಿದ್ದು ಆ ಮೂಲಕ ಭಿನ್ನವಾದದ್ದಾಗಿರುತ್ತದೆ. (ಕವಿರಾಜಮಾರ್ಗ, ೨.೪೬, ೪೯-೫೧, ೫೪-೫೫)*



ಆಬಳಿಕ, ಈ ಕೃತಿಯು ಸಂಸ್ಕೃತ ಸಂಪ್ರದಾಯದಿಂದ ಕನ್ನಡವು ಪಡೆದುಕೊಂಡ ಎಲ್ಲ ಭಾಷಾ ಲಕ್ಷಣಗಳ ದೃಷ್ಟಾಂತ, ತಪಶೀಲುಗಳನ್ನು ವಿವರವಾಗಿ ಮುಂದಿಡುತ್ತದೆ. ಅಂತಿಮವಾಗಿ, ಈ ಲಕ್ಷಣಗಳು ಕನ್ನಡ ಮೀಮಾಂಸೆಗೂ ಆಧಾರರೂಪಿಯೆಂದು ಕರ್ತೃ ಹೇಳುತ್ತಾನೆ – ''ಕಾವ್ಯದಲ್ಲಿ ಯಾವುದೇ ಶಬ್ದವನ್ನು ಬಳಸಿಕೊಂಡಿರಲಿ, ಅವು ಪೂರ್ವೋಕ್ತವಾದ ಮಾರ್ಗಗಳ ಲಕ್ಷಣಗಳಿಗನುಸಾರವಾಗಿ ಪ್ರಯುಕ್ತಗೊಂಡಿದ್ದರೆ, ಕನ್ನಡದ ಗುಣವನ್ನು ವರ್ಧಿಸಲಿಕ್ಕೂ ಸಹಾಯಕವಾಗುತ್ತವೆ'' (ಕವಿರಾಜಮಾರ್ಗ, ೨.೧೦೧). ಒಟ್ಟಿನಲ್ಲಿ ಕವಿರಾಜಮಾರ್ಗವು ಮಾಡಿರುವ ಕೆಲಸ – ಸಂಸ್ಕೃತ ವಿಶ್ವಾತ್ಮಕತೆಗೆ ಆಧಾರವಾಗಿರುವ ಸಾರ್ವತ್ರಿಕ ಶೈಲಿಗಳನ್ನೊಳಗೊಂಡ ಪ್ರಸ್ಥಾನವನ್ನು ಕನ್ನಡದ ಸ್ಥಳೀಯ ಜಗತ್ತಿಗೆ ಪೂರ್ಣವಾಗಿ ಕಸಿಮಾಡುವಂಥದು.

ಕವಿರಾಜಮಾರ್ಗದಿಂದ ಮೊದಲುಗೊಂಡು, ಮುಂದೆ 'ಕಾವ್ಯಾವಲೋಕನ' (ಕ್ರಿ.ಶ. ೧೦೪೦ರಲ್ಲಿ ನಾಗವರ್ಮನಿಂದ ರಚಿತ, ಈತ ಕಲ್ಯಾಣಿ ಚಾಲುಕ್ಯರ ವಂಶಸ್ಥ ಎರಡನೆಯ ಜಯಸಿಂಹನ ಆಸ್ಥಾನದಲ್ಲಿದ್ದ) ಎಂಬ ಮಧ್ಯಯುಗೀನ ಕನ್ನಡದ ಎರಡನೆಯ ಪ್ರಮುಖ ಕಾವ್ಯಮೀಮಾಂಸೆಯ ಗ್ರಂಥದಲ್ಲಿಯೂ ಪುನಃ ಚರ್ಚಿತವಾಗುವ ಈ ಒಟ್ಟೂ ಜಿಜ್ಞಾಸೆಯನ್ನು ಕನ್ನಡದ ಆಧುನಿಕ ಪಂಡಿತರು ಕನ್ನಡ ಕಾವ್ಯಕ್ಕೆ ಅಪ್ರಸ್ತುತವೆಂದೂ ಅಸ್ಪಷ್ಟವೆಂದೂ ಹೇಳಿ ತಳ್ಳಿಹಾಕಿದ್ದಾರೆ. ಆರ್. ನರಸಿಂಹಾಚಾರ್ ಅವರು ತಾಳ್ಮೆಯಿಲ್ಲದೆ ಇದನ್ನು ತಳ್ಳಿಹಾಕಿದ ಬಳಿಕ ಈ ಚರ್ಚೆ ಇಲ್ಲಿ ಮುಂದುವರೆಯಲೇ ಇಲ್ಲ. ನರಸಿಂಹಾಚಾರ್ ಅವರ ಪ್ರಕಾರ, ಕನ್ನಡ ಕಾವ್ಯಮೀಮಾಂಸೆಯ ಈ 'ಉತ್ತರ' ಮತ್ತು 'ದಕ್ಷಿಣ'ಗಳೆಂಬ ಪ್ರಸ್ತಾಪವು ''ಸಂಸ್ಕೃತದ ಶೈಲಿ ಯಾ ಶಾಖೆಗಳಿಗೆ'' ಅನ್ವಯವಾಗಬಹುದೆ ಹೊರತು ವಾಸ್ತವವಾಗಿ ಕನ್ನಡದಲ್ಲಿ ಬಿಂಬಿತವಾಗಿದ್ದಕ್ಕೆ ಯಾವುದೇ ಪುರಾವೆ ಇಲ್ಲ (೧೯೩೪, ೧೨೧-೨೨). ಇಂಥ ಒಂದು ತೀರ್ಮಾನವನ್ನು ತೆಗೆದುಕೊಂಡುಬಿಟ್ಟರೆ, ಆಗ ನಾವು, ಕವಿರಾಜಮಾರ್ಗವು ಸಂಸ್ಕೃತದ ಮಾರ್ಗ

ಪ್ರಸ್ಥಾನವನ್ನು ಬಳಸಿ ಕನ್ನಡ ಕಾವ್ಯದ ವಿಶ್ಲೇಷಣೆಗೆ ಯಾಕೆ ತೊಡಗಿತು — ಎಂಬುದನ್ನು ವಿವರಿಸಲು ಅಸಾಧ್ಯವಾಗಿಬಿಡುತ್ತದೆ. ಅಷ್ಟೇ ಅಲ್ಲ, ಕವಿರಾಜಮಾರ್ಗವು ಮಾರ್ಗ ಪ್ರಸ್ಥಾನವನ್ನು ಬಳಸಿಕೊಳ್ಳುವ ಜತೆಗೇ ಅಂಥ ಬಳಕೆಯು ಸ್ಥಳೀಯ ಕಾವ್ಯಸಂಸ್ಕೃತಿಯೊಂದಕ್ಕೆ ಅನ್ಯವೂ ಅರ್ಥಹೀನವೂ ಆಗಿ ಕಾಣುತ್ತಿರುವ ದ್ವಂದ್ವವನ್ನು ವ್ಯಾಖ್ಯಾನಿಸಲಿಕ್ಕೆ ನಮಗೆ ಅವಕಾಶ ಒದಗಿಸುತ್ತದೆ. ಮಾರ್ಗಪ್ರಸ್ಥಾನವು ರೂಪಿತವಾಗಿರುವುದು ಮೂಲತಃ ಸಂಸ್ಕೃತ ಕಾವ್ಯದ ಪ್ರಾಂತ್ಯಾಂತರವ್ಯಾಪ್ತಿಯ ಸ್ವರೂಪದ ಮೇಲೆ ಅವಧಾರಣೆ ಕೊಡಲಿಕ್ಕಾಗಿ; ಅದು ಅರೆ ಪ್ರಾಂತೀಯ ವೈವಿಧ್ಯಗಳನ್ನು ಗುರುತಿಸುವುದೂ ಅದಕ್ಕಾಗಿಯೇ. ಆದರೆ ಇಲ್ಲಿ, ಮಾರ್ಗಪ್ರಸ್ಥಾನವು ಕನ್ನಡಕಾವ್ಯದ ಯಾವುದೇ ಸ್ಥಳೀಯ ಲಕ್ಷಣವನ್ನು ಗ್ರಹಿಸಲು ಸೋಲುವುದರಿಂದ ಕೇವಲ ಸಂಸ್ಕೃತ ಸಾಹಿತ್ಯವನ್ನು ಅನುಕರಿಸಿರುವ ಕನ್ನಡದ ಭಾಗಕ್ಕಷ್ಟೇ ಸೀಮಿತವಾಗಿ ಅನ್ವಯಗೊಳ್ಳುತ್ತದೆ; ಹಾಗೂ ಆ ಕಾರಣದಿಂದ ಅಂತಿಮವಾಗಿ,ಇಲ್ಲಿ ಅದು, ಕನ್ನಡವೆಂಬ ನಿಜಪ್ರಾಂತ್ಯದ ಜಗತ್ತಿಗೆ ಅನುಚಿತವೂ ಅಸಂಬದ್ಧವೂ ಆಗಿ ಗೋಚರಿಸುತ್ತದೆ.

ಕವಿರಾಜಮಾರ್ಗ ಪಠ್ಯವು ಹೊರಬಂದಿರುವುದು ಮಧ್ಯಕಾಲೀನ ಭಾರತದ ಅತ್ಯಂತ ಪ್ರಬಲವಾದ ಒಂದು ರಾಜಕೀಯ ಕೇಂದ್ರದಿಂದ (ನೋಡಿ — ಇಂಡೆನ್ ೧೯೯೦, ೨೨೮ ಎಫ್ಎಫ್). ಆದಕಾರಣ, ಕವಿರಾಜಮಾರ್ಗವನ್ನು ಕೇವಲ ಮೂಲಾರ್ಥವಿಶ್ಲೇಷಣೆಯ ಔದಾರ್ಯದಿಂದಷ್ಟೇ ನಾವು ವಿಶ್ಲೇಷಿಸಬಾರದು ಎನ್ನುವುದಾದರೆ, ಕಡೆಯಪಕ್ಷ ಈ ರಾಜಕೀಯ ಸಂದರ್ಭದ ಸಂಗತಿಯಾದರೂ ನಮ್ಮನ್ನು ಈ ಕೃತಿಯ ಚರ್ಚೆಗೆ ಒತ್ತಾಯಿಸಬೇಕು; ದೇಶಭಾಷಾಮೀಮಾಂಸೆಯ ಚರ್ಚೆಗೆ ಯಾಕೆ ಇಲ್ಲಿ ವಿಶ್ವಾತ್ಮಕ ಸಂಸ್ಕೃತದ ಪ್ರಸ್ತಾವನೆಗಳು ಬಂದಿವೆಯೆಂಬುದರ ಬಗ್ಗೆ ನಾವು ಗಂಭೀರವಾಗಿ ಚಿಂತಿಸುವಂತಾಗಬೇಕು. ಹಾಗೆ ವಿಶಾಲವಾದ ಒಂದು ವ್ಯಾಪ್ತಿಯಲ್ಲಿಟ್ಟು ಈ ಪ್ರಶ್ನೆಯನ್ನು ಚರ್ಚಿಸುವುದಾದರೆ, ಈ ಸಂದರ್ಭದಲ್ಲಿ ಕನ್ನಡವು ಸಂಸ್ಕೃತದ ಪ್ರಾಂತ್ಯಾಂತರವ್ಯಾಪ್ತಿಯ ವಲಯದಿಂದ ಹೊರದೂಡಲ್ಪಟ್ಟಿದೆ ಮತ್ತು ಜತೆಗೇ, ಸ್ಥಳೀಯವೆಂಬ ಸೀಮಿತತೆಯಲ್ಲಿ ಸಿಲುಕಿಕೊಳ್ಳಲು ಬಯಸದೇ ಇರುವ ಸ್ಥಿತಿಯಲ್ಲಿದೆ. ಇಂಥ ಸಂದರ್ಭದಲ್ಲಿ ಸ್ಥಾಪಿತವಾದ ಕವಿರಾಜಮಾರ್ಗವು ಕರ್ನಾಟಕದ ಸ್ಥಳೀಯ ಜಗತ್ತಿಗೆ ಮಾರ್ಗ ಪ್ರಸ್ಥಾನವನ್ನು ಅನ್ವಯಿಸುವ ಮೂಲಕ ಅದಕ್ಕೆ ಹೊಸದೊಂದು ಪರಿಪ್ರೇಕ್ಷ್ಯವನ್ನು ಸೃಷ್ಟಿಸಿಕೊಡುತ್ತಿದೆ — ಆ ಪ್ರಕಾರ, ಕನ್ನಡದಲ್ಲಿ ಉತ್ತರ-ದಕ್ಷಿಣಗಳೆಂಬ ಕಾವ್ಯದ ಎರಡು ಭೇದಗಳು ಇರಲೇಬೇಕು; ಕನ್ನಡನಾಡು ಒಂದು ಪ್ರಾಂತೀಯ ಜಗತ್ತು ಎನ್ನುವುದು ಸ್ಥಾಪಿತಗೊಳ್ಳಲು ಅದಕ್ಕೆ ಉತ್ತರ-ದಕ್ಷಿಣವೆಂಬ ಬೇಧ ಸೃಷ್ಟಿಯಾಗಲೇಬೇಕು; ಅಂಥ ವಿಭಜನೆಯು ಇಲ್ಲಿ ಇರುವ ಕಾವ್ಯಕ್ಕೆ



ಅನ್ವಯವಾಗುತ್ತದೆಯೋ ಇಲ್ಲವೋ ಎಂಬುದು ಈ ಸಂದರ್ಭದಲ್ಲಿ ಅಪ್ರಸ್ತುತ.[೧೬] ಅಂದರೆ, ಸಂಸ್ಕೃತದಿಂದ ವ್ಯಾಖ್ಯಾನಿತವಾದ ಕಾವ್ಯ ಎಂಬ ಜಗತ್ತಿನಲ್ಲಿ ಕನ್ನಡವು ಕಾಲಿಡಬೇಕಿದ್ದರೆ ಕನ್ನಡವೂ ಆ ಜಗತ್ತಿನ ಲಕ್ಷಣಗಳನ್ನು ಕಾಣಿಸುವುದು ಅನಿವಾರ್ಯ. ಅರ್ಥಾತ್, ಸ್ಥಳೀಯತೆಯು ತನ್ನ ಸ್ಥಳೀಯೇತರ ಸ್ವರೂಪವನ್ನು ಪ್ರದರ್ಶಿಸುವುದು ಇಲ್ಲಿ ಅತ್ಯಗತ್ಯ.

ಇಂಥ ಒಂದು ವಿವರಣೆಯು ಮಾತ್ರವೇ ಕವಿರಾಜಮಾರ್ಗದ ಹಿನ್ನೆಲೆಯಲ್ಲಿರುವ ರಾಜಕೀಯ-ಸಾಂಸ್ಕೃತಿಕ ಒತ್ತಾಸೆಗಳನ್ನು ಗ್ರಹಿಸಲು ಸಾಧ್ಯ; ಮುಂದೆ ನಾನು ಕೊಡುವ ಸಾಕ್ಷ್ಯಗಳೂ ಇದಕ್ಕೆ ಪೂರಕವಾಗಿವೆ. ಆದರೆ ಇದೆಲ್ಲದಕ್ಕಿಂತ ಪ್ರಾಥಮಿಕವೂ ಅತಿಮುಖ್ಯವೂ ಆದ ಇನ್ನೂ ಒಂದು ಪ್ರೇರಣೆ — ಅರ್ಥೈಸಲಿಕ್ಕೆ ತುಸು ಕ್ಲಿಷ್ಟವೆನ್ನಿಸುವಂಥದ್ದು — ಇಲ್ಲಿ ಕೆಲಸ ಮಾಡಿದೆ. ಕವಿರಾಜಮಾರ್ಗವು ಹೇಗೆ ತನ್ನ ಮೂಲಸಂಸ್ಕೃತ ಮಾದರಿಗಳಿಗಿಂತ ಭಿನ್ನವಾದ ಹೊಸ ಜೋಡಣೆಗಳನ್ನು ಮಾಡುತ್ತದೆಯೆಂಬ ಸಂಗತಿಯನ್ನು ಪರಿಶೀಲಿಸತೊಡಗಿದರೆ ನಮಗೆ ಈ ಕಾರಣವು ಕಾಣಲಾರಂಭಿಸುತ್ತದೆ. ಮೊದಲನೆಯದಾಗಿ, ಇದು ‘ಮಾರ್ಗ’ಗಳನ್ನು ‘ಉತ್ತರ’ ಮತ್ತು ‘ದಕ್ಷಿಣ’ಗಳೆಂದು ಹೆಸರಿಸುತ್ತದೆ (ಕನ್ನಡದ ಸನ್ನಿವೇಶದಲ್ಲಿ ಗೌಡ, ವೈದರ್ಭ ಎಂಬ ವರ್ಗೀಕರಣ ಅಸಹಜವೂ ಹೌದು). ಆದರೆ ಹಾಗೆ ಮಾಡುವ ಮೂಲಕ ಇದು ಸಂಸ್ಕೃತದ ವರ್ಗೀಕರಣಕ್ಕಿರುವ ಸ್ಥಳನಿರ್ದಿಷ್ಟತೆಯನ್ನು ತೆಳುವಾಗಿಸುತ್ತದೆ.[೧೭] ಅದಕ್ಕಿಂತ ಮುಖ್ಯವಾದ ಎರಡನೆಯ ವ್ಯತ್ಯಾಸ ಇದು — ಮಾರ್ಗಗಳ ನಡುವಿನ ಭಿನ್ನತೆಯನ್ನು ವಿವರಿಸುವಾಗ ಕವಿರಾಜಮಾರ್ಗವು ಸಂಸ್ಕೃತ ಅಲಂಕಾರ ಪ್ರಸ್ಥಾನದ ಸ್ವಭಾವೋಕ್ತಿ ಮತ್ತು ವಕ್ರೋಕ್ತಿಗಳೆಂಬ ಪರಿಕಲ್ಪನೆಗಳನ್ನು ಉಪಯೋಗಿಸಿಕೊಳ್ಳುತ್ತದೆ; ಪ್ರಮಾಣಿತ ಸಂಸ್ಕೃತ ಕಾವ್ಯಮೀಮಾಂಸೆಯ ದೃಷ್ಟಿಯಿಂದ ಇದು ಪರಿಭಾಷೆಯ ದೋಷವೆಂದೇ ಕಾಣುವಂಥದು:

> *ಈರೀತಿ, ಎರಡು ಮಾರ್ಗಗಳು ಇಲ್ಲಿ ಪ್ರಾಮುಖ್ಯತೆಯನ್ನು ಪಡೆದವು, ಅವುಗಳೊಂದಿಗೇ ವಕ್ರೋಕ್ತಿ ಮತ್ತು ಸ್ವಭಾವೋಕ್ತಿಗಳೆಂಬ ಎರಡು ವಿಭಿನ್ನ ಅಭಿವ್ಯಕ್ತಿವಿಧಾನಗಳೂ ಕೂಡಾ. ಅವುಗಳಲ್ಲಿ ಸ್ವಭಾವೋಕ್ತಿಯೆಂಬುದು ದಕ್ಷಿಣದ ಮಾರ್ಗದ ವಿಶಿಷ್ಟ ಧರ್ಮವಾಗಿದ್ದರೆ, ವಕ್ರೋಕ್ತಿಯ ಹಲವಾರು ವಿಕಲ್ಪಗಳು ಉತ್ತರಮಾರ್ಗದಲ್ಲಿ ಅಂತರ್ಗತವಾಗಿರುತ್ತವೆ. (ಕವಿರಾಜ ಮಾರ್ಗ, ೨.೫೨-೫೩)*

ಸಂಸ್ಕೃತ ಸಂಪ್ರದಾಯದ ಪ್ರಕಾರ, ನಾವು ಈಗಾಗಲೇ ಗಮನಿಸಿರುವಂತೆ, ಮಾರ್ಗವಾರ್ಗಗಳನ್ನು ಪ್ರತ್ಯೇಕಿಸುವ ಲಕ್ಷಣಗಳೆಂದರೆ -- ಧ್ವನಿ, ವಾಕ್ಯ, ಶಬ್ದಕೋಶಗಳಿಗೆ ಸಂಬಂಧಿಸಿದ ನಿರ್ದಿಷ್ಟ ಭಾಷಾ ಗುಣಗಳ ಅಸ್ತಿತ್ವ ಅಥವಾ ಅದರ

ಅನುಪಸ್ಥಿತಿ ಯಾ ವಿಪರ್ಯಯ. ಆದರೆ ಕವಿರಾಜಮಾರ್ಗದಲ್ಲಿ ಇನ್ನೂ ಒಂದು ಭಿನ್ನತೆಯನ್ನು ಕೂಡಿಸಲಾಗುತ್ತಿದೆ – ಈ ಭಿನ್ನತೆಯ ಬಗ್ಗೆ ಮೂಲಸಂಪ್ರದಾಯದಲ್ಲಿ ಪ್ರಸ್ತಾಪವಿಲ್ಲ, ಆದರೆ ಅದು ಮೂಲಕ್ಕೆ ಪೂರಕವೇ ಆಗುವಂಥದು – ದಕ್ಷಿಣ ಮಾರ್ಗದ ಕಾವ್ಯದಲ್ಲಿ ರೂಪಕಾದಿ ಅಲಂಕಾರಗಳಿಲ್ಲ, ಆದ್ದರಿಂದ ಅದು ಸಾಹಿತ್ಯಾಭಿವ್ಯಕ್ತಿಗೆ ಭಾಷೆಯನ್ನೇ ಪ್ರಧಾನವನ್ನಾಗಿಸುವಂಥದು. ಅದೇ, ಉತ್ತರದ ಕಾವ್ಯವು ಅಲಂಕಾರಾವಲಂಬಿ, ಮೇಲೆ ಉಲ್ಲೇಖಿಸಿದ ಅಲಂಕಾರದ ಹಲವು ವೈವಿಧ್ಯಗಳು ಅಲ್ಲಿವೆ. ಕವಿರಾಜಮಾರ್ಗಕ್ಕಿಂತ ಮೊದಲೂ ತುಂಬ ಮಸುಕಾಗಿ ಇಂಥ ಭಿನ್ನತೆಯೊಂದರ ಪ್ರಸ್ತಾಪ ಇತ್ತು. ಆದರೆ ಅದು ಸ್ಪಷ್ಟವಾಗಿ ಪ್ರತಿಪಾದಿತವಾಗುವುದು ಮಾತ್ರ ಕೆಲವು ಕಾಲಾನಂತರ ಬಂದ ಭೋಜರಾಜನ 'ಶೃಂಗಾರಪ್ರಕಾಶ'ದಲ್ಲಿ (೧೧ನೆಯ ಶತಮಾನದ ಮೊದಲ ಭಾಗ): ''ಕಾವ್ಯದಲ್ಲಿ ಸೌಂದರ್ಯದ ಮೂರು ಆಕರಗಳಿವೆ – ಪರೋಕ್ಷ ಅಭಿವ್ಯಕ್ತಿ (ವಕ್ರೋಕ್ತಿ), ನೇರ ಅಭಿವ್ಯಕ್ತಿ (ಸ್ವಭಾವೋಕ್ತಿ) ಮತ್ತು ಭಾವಾಭಿವ್ಯಕ್ತಿ (ರಸೋಕ್ತಿ). ಅಲಂಕಾರಗಳಿಗೆ ಪ್ರಾಮುಖ್ಯವನ್ನು ಕೊಟ್ಟಾಗ ಅದು ವಕ್ರೋಕ್ತಿಯಾಗುತ್ತದೆ; ಭಾಷಾಗುಣಗಳಿಗೆ ಪ್ರಾಮುಖ್ಯವನ್ನು ಕೊಟ್ಟಾಗ ಸ್ವಭಾವೋಕ್ತಿಯಾಗುತ್ತದೆ (೬೭೮).''[೧೮] ಹೀಗೆ, ಸ್ವಭಾವೋಕ್ತಿಯನ್ನು ವೈದರ್ಭಮಾರ್ಗಕ್ಕೆ ಮತ್ತು ವಕ್ರೋಕ್ತಿಯನ್ನು ಗೌಡಮಾರ್ಗಕ್ಕೆ ಸಮೀಕರಿಸುವ ಈ ಪ್ರಸ್ತಾಪವು ಸಂಸ್ಕೃತ ಪರಂಪರೆಯಿಂದ ಎಷ್ಟು ಪ್ರತ್ಯೇಕಿತವಾಗಿ ಕಾಣುತ್ತದೆಯೆಂದರೆ ಸ್ವತಃ ಭೋಜನ ಕೃತಿಯನ್ನು ಸಂಪಾದಿಸಿದ ಸಂಪಾದಕರಿಗೇ ಅದು ಅರ್ಥಹೀನವೆಂದು ಗೋಚರಿಸಿದೆ (ರಾಘವನ್ ೧೯೬೩, ೧೩೬-೩೭; ಇದು ಇಂಡಾಲಜಿ ವಿದ್ವಾಂಸರಿಗೂ ಅಪರಿಚಿತ). ಕವಿರಾಜಮಾರ್ಗದ ಬೆಳಕಿನಲ್ಲಿ ನೋಡಿದಾಗ ನಮಗೆ ಈ ಸಂಗತಿ ಸ್ಪಷ್ಟಗೊಳ್ಳುವಂತಿದೆ.

ಕವಿರಾಜಮಾರ್ಗವು ನಿರೂಪಿಸುವ ವಾದ ಮತ್ತು ಮುಂದಿಡುವ ಉದಾಹರಣೆಗಳ ಮೂಲಕ[೧೯] ಅನಾವರಣಗೊಳ್ಳುವ ಕನ್ನಡ ಶೈಲಿಗಳ ಒಂದು ಭೂಪಟದಲ್ಲಿ, ವಿವರಗಳನ್ನೆಲ್ಲ ಕಳಚಿ ಮುಖ್ಯವಾದದ್ದನ್ನು ಮಾತ್ರ ಗಮನಿಸುವುದಾದರೆ, ಅಲ್ಲಿ ದೇಶಭಾಷಾ ಲೇಖಕರ ಪ್ರಯೋಗಗಳಲ್ಲಿ ಅಂತರ್ಗತವಾಗಿದ್ದ ಒಂದು ವಿಭಜನೆ ವೇದ್ಯವಾಗುವಂತಿದೆ – ೧. 'ದಕ್ಷಿಣ'ದ ಕನ್ನಡಕಾವ್ಯವು ಭಾಷಾಕೇಂದ್ರಿತ; ಅಲ್ಲಿ ಸಾಹಿತ್ಯವು ''ಮಾತಿನಿಂದ ನಿರ್ದೇಶಿತವಾದ ಮಾತು''. ಅದಕ್ಕಾಗಿಯೇ ಇದು ಆಲಂಕಾರಿಕವಲ್ಲದ ವಿವರಣೆಯನ್ನು ಬಳಸುತ್ತದೆ (ಸ್ವಭಾವೋಕ್ತಿಯೆಂಬುದರ ಅರ್ಥ ಇದೇ). ಮತ್ತು ಅದಕ್ಕೆ ಪ್ರತಿಯಾಗಿ ''ಉತ್ತರ''ದ ಕನ್ನಡಕಾವ್ಯವು ಅಲಂಕಾರಕೇಂದ್ರಿತ (ವಕ್ರೋಕ್ತಿ). ೨. ಭಾಷಾಭಿನ್ನತೆಗಳಲ್ಲಿ ಪ್ರಮುಖ ಗುಣಗಳೆಂದು ಹೆಸರಿಸಲ್ಪಟ್ಟಿರುವುದು ನಾಮವಾಚಕನಿರ್ಮಾಣದಲ್ಲಿ ಕಾಣುವ ವ್ಯತ್ಯಾಸ. ''ದಕ್ಷಿಣ''ದ ಕನ್ನಡಕಾವ್ಯ



ಸಂಧಿಸಮಾಸರಹಿತವಾದದ್ದು, ''ಉತ್ತರ''ದ್ದು ಅದಕ್ಕೆ ವಿರುದ್ಧ.[೨೦] ೩. ''ದಕ್ಷಿಣ''ದ ಕನ್ನಡಕಾವ್ಯವು ದೇಶೀ ಶಬ್ದಗಳಿಂದ ಕೂಡಿದ್ದರೆ ''ಉತ್ತರ''ದ ಕಾವ್ಯವು ಸಂಸ್ಕೃತದ ಶಬ್ದಗಳನ್ನು ಬದಲಾಯಿಸದೆ ಬಳಸುತ್ತದೆ (ಸಮಸಂಸ್ಕೃತ ಯಾ ಆಮೇಲಿನ ಬಳಕೆಗಳಲ್ಲಿ ತತ್ಸಮ).

ಈರೀತಿ, ಇಲ್ಲಿ ದಾಕ್ಷಿಣಾತ್ಯ ಮತ್ತು ಔತ್ತರೇಯವೆಂದು ವಿಭಜಿತವಾದ ಕನ್ನಡಕಾವ್ಯದ ವ್ಯತ್ಯಾಸಗಳೇ ಮುಂದೆ ಮಾರ್ಗಿ-ದೇಶಿ ಎಂಬ ನಾಮಕರಣದ ವಿಂಗಡಣೆಗೆ ಒಳಗಾದವು. ಆದ್ದರಿಂದ ಕವಿರಾಜಮಾರ್ಗವು ಕನ್ನಡಕ್ಕೆ ಅಪ್ರಸ್ತುತವಾದ ಒಂದು ವರ್ಗೀಕರಣವನ್ನು ಮಾಡಲಿಲ್ಲ; ಅದು ಕನ್ನಡ ಭಾಷೆಗೆ – ಅಷ್ಟೇಕೆ, ದಕ್ಷಿಣ ಏಶಿಯಾದ ಎಲ್ಲ ಭಾಷೆಗಳಿಗೂ – ಅನ್ವಯಿಸಬಹುದಾದ ಪ್ರಾಥಮಿಕ ಸ್ವನಿರೂಪಣೆಯೊಂದನ್ನು ಮಾಡಿದೆ, ಅದಕ್ಕಾಗಿಯೇ ಈ ಎರಡು ಕಾವ್ಯಮಾದರಿಗಳನ್ನು ಪ್ರಾತಿನಿಧಿಕವೆಂದು ಕರೆದಿದೆ. ಆದರೆ, ವಿಶ್ವಾತ್ಮಕತೆ ಮತ್ತು ದೇಶೀಯತೆಯ ಈ ದ್ವಂದ್ವದಲ್ಲಿ, ಇನ್ನೂ ಒಂದು ಗಹನವ್ಯಂಗ್ಯವೂ ಮಿಳಿತವಾಗಿದೆ – ಸಂಸ್ಕೃತ ಕಾವ್ಯದ ಇಂಥ ವರ್ಗೀಕರಣಕ್ಕೆ ಮೂಲವಾಗಿ ಒದಗಿಬರುವ ಆಕರಗಳೇನಿವೆ, ಅವು, ಸಂಸ್ಕೃತ ಕಾವ್ಯದ ಮೂಲರೂಪಕ್ಕೇ ನೇರವಾಗಿ ಸಂಬಂಧಿಸಿದವಲ್ಲ. ಇವು – ನೃಪತುಂಗನ ಆಸ್ಥಾನದಲ್ಲಿದ್ದ ಕನ್ನಡ ಕವಿಗಳು ಅಥವಾ ತಮಿಳು ಮೂಲದ ದಂಡಿಯಂತಹ ಕವಿಗಳು – ಇಂಥ ದಾಕ್ಷಿಣಾತ್ಯ ಕವಿಗಳ ಒಲವಿನ ಮೇಲೆ ಆಧರಿಸಿವೆ. ಇವರು ಸಂಸ್ಕೃತವನ್ನು ದಾಕ್ಷಿಣಾತ್ಯ ಭಾಷೆಗಳ ಪ್ರಜ್ಞೆಯೊಂದಿಗೆ ಬಳಸಿ ಮುಂದೆ ಬಂದ ದೇಶಭಾಷಾ ಕಾವ್ಯ ಮತ್ತು ಕಾವ್ಯಮೀಮಾಂಸೆಗಳಿಗೆ ಮುನ್ಸೂಚನೆಯಾದರು.[೨೧] ಒಂಬತ್ತು ಮತ್ತು ಹತ್ತನೆಯ ಶತಮಾನಗಳ ಕರ್ನಾಟಕದಲ್ಲಿ, ಪೂರ್ಣ ಪ್ರಮಾಣದಲ್ಲಿ ಕಾಣಿಸಿಕೊಂಡ ಈ ದೇಶಭಾಷಾನಿರ್ಮಾಣದ ಪ್ರಕ್ರಿಯೆಯ ಸಂದರ್ಭದಲ್ಲಿ, ಅಷ್ಟರಲ್ಲಾಗಲೇ ದಾಕ್ಷಿಣಾತ್ಯ ಲೇಖಕರು ಸಂಸ್ಕೃತದಲ್ಲಿ ರೂಪಿಸಿದ್ದ ಶೈಲಿಯ ವೈಶಿಷ್ಟ್ಯಗಳೇ ಕನ್ನಡಕ್ಕೂ ಪ್ರಧಾನವಾದ ವೈಶಿಷ್ಟ್ಯಗಳೆಂದು ಸೂಚಿತವಾದವು – ಸಮಾಸವಿಹೀನತೆ, ಆದಿಪ್ರಾಸ, ನೇರವಾದ ವರ್ಣನೆ ಮೊದಲಾದ ಈ ಅಂಶಗಳು ಆಗ ಕನ್ನಡದಲ್ಲಿ ರೂಢವಾದವೆಂಬುದಕ್ಕೆ ಹಳಗನ್ನಡದ ಯಾವುದೇ ಕಾವ್ಯಭಾಗವೂ ಪುರಾವೆ ಒದಗಿಸುತ್ತದೆ.

ಸೀಮಿತ ಸ್ವರೂಪದ ಇಂಥ ದೃಷ್ಟಾಂತವೊಂದರ ಚರ್ಚೆಯ ಮೂಲಕ, ನಾವು ಸಂಗ್ರಹಿಸಬಹುದಾದ ವಿಶಾಲ ತತ್ವ ಇದು – ಸ್ಥಳೀಯ ಮತ್ತು ಜಾಗತಿಕ ಇವೆರಡೂ ಒಂದಕ್ಕೊಂದು ಕ್ರಿಯೆ-ಪ್ರತಿಕ್ರಿಯೆಗಳಲ್ಲಿ ಕೂಡಿಕೊಂಡಿರುವಂಥವು; ಒಂದು ಇನ್ನೊಂದನ್ನು ಒಳಗೊಂಡಿರುವಂಥದು. ವಿಶ್ವಾತ್ಮಕತೆಯು ದೇಶಭಾಷೆಯಿಂದ ಹರಿದು ಬರುವ ಪ್ರವಾಹಗಳಿಂದ ರೂಪುಗೊಳ್ಳುತ್ತದೆ, ಹಾಗೇ, ವಿಶ್ವಾತ್ಮಕವಾದದ್ದನ್ನು

ಸ್ವಾಧೀನಪಡಿಸಿಕೊಳ್ಳುವ ಮೂಲಕ ದೇಶಭಾಷೆಯು ತನ್ನನ್ನು ತಾನೇ ಕಟ್ಟಿಕೊಳ್ಳುತ್ತದೆ. ಕೆಲವೊಮ್ಮೆ ಈ ಪ್ರಕ್ರಿಯೆ – ಇಲ್ಲಿ ಕಾಣಿಸಿದ ಹಾಗೆ – ಅಪ್ರಜ್ಞಾಪೂರ್ವಕವಾದ ಮರುಸ್ವಾಧೀನದ ಕ್ರಿಯೆಯೂ ಆಗುವುದು ಸಾಧ್ಯವಿದೆ.[೨೨]

## ಭಾಷಾ ಪರಿಶೋಧನೆ ಮತ್ತು ವ್ಯತ್ಯಾಸಗಳ ಸೃಷ್ಟಿ

ಒಂದು ಕಡೆಗೆ, ವಿಶ್ವಾತ್ಮಕ ನುಡಿಗಟ್ಟೊಂದನ್ನು ರೂಪಿಸುವ ಮತ್ತು ಇನ್ನೊಂದು ಕಡೆಗೆ, ಕನ್ನಡದ ವೈದೃಶ್ಯವನ್ನು ಸ್ಪಷ್ಟಗೊಳಿಸುವ ಕಾರ್ಯಯೋಜನೆಯೊಂದಿಗೆ ಹೊರಟ ಕವಿರಾಜಮಾರ್ಗಕ್ಕೆ ಬೇರೆ ಕೆಲವು ಸಾಂಸ್ಕೃತಿಕ-ರಾಜಕೀಯ ಗುರಿಗಳೂ ಇದ್ದಾವೆ. ಕನ್ನಡಕ್ಕೆ ಸಂಸ್ಕೃತದ ಜ್ಞಾನಶಾಸ್ತ್ರೀಯ ಮನ್ನಣೆ ದೊರಕದೇ ಹೋಗಿದ್ದರೆ ಮತ್ತು ಭಾಷಾಪರಿಶೀಲನೆಯ ಉಪಕರಣಗಳು (ಅಂದರೆ, ಲಕ್ಷಣಗ್ರಂಥಗಳು) ಲಭ್ಯವಾಗದೇ ಹೋಗಿದ್ದರೆ ಅದಕ್ಕೆ ಈಗ ದೊರಕಿದ ಪ್ರತಿಷ್ಠೆಯನ್ನು ಸಾಧಿಸಲಾಗುತ್ತಿರಲಿಲ್ಲ. ಆ ಮೊದಲನೆಯ ಕೆಲಸವನ್ನು ಕವಿರಾಜಮಾರ್ಗವು ಸಾಧಿಸುವುದು ಕನ್ನಡವೆಂಬ ವಿಷಯವನ್ನು ಕುರಿತ ತಾತ್ವಿಕ ಚರ್ಚೆಯನ್ನು ಆರಂಭಿಸುವ ಮೂಲಕವೇ. ಎರಡನೆಯದನ್ನು ಅದು ತನ್ನ ಪಠ್ಯದ ಬಹುಭಾಗದಾದ್ಯಂತ, ಸಾಹಿತ್ಯ-ಭಾಷೆಯ ನಿಯಮಗಳನ್ನು ವಿಶ್ಲೇಷಿಸುವ ಮೂಲಕ, ಸಾಧಿಸುತ್ತದೆ. ಇದೆಲ್ಲದರ ಜತೆಗೆ ಕವಿರಾಜಮಾರ್ಗ ಪಠ್ಯವೇ ಒಂದು ರೀತಿಯಿಂದ ತನ್ನ ವಾದದ ಪ್ರದರ್ಶನವೂ ಹೌದು. ಯಾಕೆಂದರೆ ಅದು ಕನ್ನಡವನ್ನು ಸಾಹಿತ್ಯಯೋಗ್ಯ ಭಾಷೆಯನ್ನಾಗಿ ರೂಢಿಸುವ ಪ್ರಯತ್ನದ ಮೂಲಕವೇ ತಾನು ಒಂದು ವೈಜ್ಞಾನಿಕ ಭಾಷಾಪರಿಶೀಲನೆಯ ಕೃತಿಯೂ ಆಗಿ ಕಾಣಿಸಿಕೊಳ್ಳುತ್ತದೆ. (ಇದಕ್ಕೆ ಭಿನ್ನವಾಗಿ, '..ಇಲೋಕ್ವೆನ್ಷಿಯಾ'ವು ಲ್ಯಾಟಿನ್ ಭಾಷೆಯ ಸಾಹಿತ್ಯದ ಪರವಾಗಿ ಶಾಸ್ತ್ರೀಯ ವಾದವನ್ನು ಮಂಡಿಸುತ್ತದೆ, ಅಷ್ಟೇ).

ಕವಿರಾಜಮಾರ್ಗದಲ್ಲಿ ಕಾಣುವ, ತನ್ನ ಕಾಲಕ್ಕಿಂತ ಮುಂದಿರುವ ಇಂಥ ಭಾಷಾಪರಿಶೀಲನೆಯ ಪ್ರಯತ್ನವು ಕನ್ನಡದಲ್ಲಿ ಇನ್ನೂ ನಾಲ್ಕು ಶತಮಾನಗಳ ಕಾಲ ತಡೆಯಿಲ್ಲದೆ ಮುಂದುವರೆಯಿತು. ಹತ್ತನೆಯ ಶತಮಾನದ ತುದಿಯಿಂದಲೇ ಇಲ್ಲಿ ಶಬ್ದಕೋಶಗಳು ಕಾಣಿಸಿಕೊಳ್ಳತೊಡಗಿದವು. ಇವುಗಳಲ್ಲಿ ಹಲವು, ಉದಾಹರಣೆಗೆ ಕವಿ ರನ್ನನು ರಚಿಸಿದ ಮೊದಲ ಶಬ್ದಕೋಶವು (ಕ್ರಿ.ಶ. ೯೯೦, ಇದರ ತುಣುಕುಗಳು ಮಾತ್ರ ಲಭ್ಯ), ಕನ್ನಡಕ್ಕೆ ಸಂಸ್ಕೃತ ಸಮಾನಾರ್ಥಕಗಳನ್ನು ಕೊಡುವಂಥವಾಗಿದ್ದು ಸರಳವಾದ ಕನ್ನಡ ಶಬ್ದಗಳಿಗೂ ಸಂಸ್ಕೃತ ಅರ್ಥವನ್ನು ಕೊಡುವುದು ನೋಡಿದರೆ ಇದು ಸಂವಹನೆಗೆ ಉಪಯೋಗವಾಗುವುದಕ್ಕೆ ಬದಲಾಗಿ ಎರಡು ಭಾಷೆಗಳ ನಡುವಿನ



ಸಮಾನಸ್ಕಂಧತೆಯನ್ನು ಸಾಧಿಸುವುದೇ ಇದರ ಗುರಿಯಾಗಿದ್ದಂತೆ ಕಾಣುತ್ತದೆ (ನೋಡಿ – ನಾಗರಾಜ್ ೧೯೯೬, ೨೨೩ ಎಫ್‌ಎಫ್). ಇದೇ ಕಾಲದಿಂದಲೇ ಮೊದಲುಗೊಂಡು ಕನ್ನಡ ಛಂದಸ್ಸನ್ನು ಸಮರ್ಥವಾಗಿ ವಿಶ್ಲೇಷಿಸುವ ಗ್ರಂಥಗಳ ಸರಣಿಯೇ ಆರಂಭವಾಗಿದ್ದು ಕಾಣುತ್ತದೆ; ಅದರಲ್ಲಿ ಮೊದಲನೆಯದು ಮೊದಲನೆಯ ನಾಗವರ್ಮನ 'ಛಂದೋಂಬುಧಿ'. ಈ ಕೃತಿಯು ಸಂಸ್ಕೃತದ ಅಕ್ಷರಗಣಗಳನ್ನಾಧರಿಸಿದ ಕ್ಲಿಷ್ಟ ಛಂದಸ್ಸುಗಳನ್ನು ಕನ್ನಡಕ್ಕೆ ವಿವರವಾಗಿ ಅಳವಡಿಸುವುದರ ಜತೆಗೆ, 'ಕರ್ನಾಟವಿಷಯಭಾಷಾಜಾತಿ'ಯೆಂಬ ಭಾಗದಲ್ಲಿ ಹತ್ತು ''ಸ್ಥಳೀಯ'' ಛಂದೋರೂಪಗಳನ್ನೂ ಪರಿಚಯಿಸುತ್ತದೆ. ಇನ್ನು ಇಲ್ಲಿ ವ್ಯಾಕರಣದ ಪರಂಪರೆಯು ಆರಂಭವಾಗುವುದು ಎರಡನೆಯ ನಾಗವರ್ಮನು (ಈಶಾನ್ಯ ಕರ್ನಾಟಕದ ಚಾಲುಕ್ಯ ಆಸ್ಥಾನದಲ್ಲಿ ಸುಮಾರು ಕ್ರಿ.ಶ. ೧೦೪೦ರಲ್ಲಿ ಇದ್ದವನು) ಸಂಸ್ಕೃತ ಸೂತ್ರಗಳ ಮೂಲಕ ಬರೆದ 'ಕರ್ನಾಟಕಭಾಷಾಭೂಷಣ'ದಿಂದ. ಮುಂದೆ ಈ ಪರಂಪರೆಯಲ್ಲಿ ವಸಾಹತುಪೂರ್ವ ಭಾರತದ ಅತ್ಯಂತ ಪ್ರಮುಖ ವ್ಯಾಕರಣಗ್ರಂಥವೊಂದು ಬಂತು – ಅದು, ಕ್ರಿ.ಶ. ೧೨೬೦ರಲ್ಲಿ ಹೊಯ್ಸಳ ಆಸ್ಥಾನದಲ್ಲಿದ್ದ ಕೇಶೀರಾಜನ 'ಶಬ್ದಮಣಿದರ್ಪಣ'. ಕವಿರಾಜಮಾರ್ಗದ ಹಾಗೆಯೇ ಕರ್ನಾಟಕದ ಹೊರಗೆ ಪರಿಚಯವೇ ಆಗದ ಈ ಅದ್ಭುತ ಕೃತಿಯು ಆಧುನಿಕಪೂರ್ವಯುಗದಲ್ಲಿ ಸಂಭವಿಸಿದ ದೇಶಭಾಷಾ ಏಕೀಕರಣ ಮತ್ತು ಪ್ರಮಾಣೀಕರಣಗಳ ಪ್ರಕ್ರಿಯೆಯನ್ನು ವಿವರಿಸುವ ಗಂಭೀರ ಪ್ರಯತ್ನಗಳಲ್ಲಿ ಕೇಂದ್ರಸ್ಥಾನವನ್ನು ಪಡೆಯಬೇಕಾದದ್ದು. ಸದ್ಯ ಅದರ ವಿವರಗಳಿಗೆ ಹೋಗದೆ ಇಷ್ಟನ್ನು ಮಾತ್ರ ಹೇಳಬಹುದು -- ಕವಿರಾಜಮಾರ್ಗದಂತೆಯೇ ಶಬ್ದಮಣಿದರ್ಪಣವೂ ಕೂಡಾ ತನ್ನ ಮೊದಲ ಪದ್ಯದಿಂದ ಕಡೆಯವರೆಗೂ ಸಂಸ್ಕೃತದ ಜ್ಞಾನಶಾಸ್ತ್ರೀಯ ಚೌಕಟ್ಟಿನಲ್ಲಿ ಕನ್ನಡದ ಭಿನ್ನತೆಯನ್ನು ಪ್ರಸ್ತುತಪಡಿಸುತ್ತದೆ. ಭಾಷೆಯೆನ್ನುವುದು, ಅದರಲ್ಲೂ ಸಾಹಿತ್ಯಭಾಷೆಯೆನ್ನುವುದು, ಹೇಗಿರಬೇಕು – ಎಂಬ ಸಂಸ್ಕೃತದ ವ್ಯಾಖ್ಯಾನವನ್ನು ಆಧಾರವಾಗಿಟ್ಟುಕೊಂಡು ಈ ಕೃತಿಯು ಕನ್ನಡವನ್ನು ಒಂದು ಅಭ್ಯಾಸದ ಶಿಸ್ತಿಗೆ ಒಳಪಡಿಸುತ್ತದೆ.[೨೩]

ಹೀಗೆ, ಕವಿರಾಜಮಾರ್ಗದಲ್ಲಿ ಕಾಣುವ ವಿಶ್ವಾತ್ಮಕತೆ-ದೇಶೀಯತೆಗಳ ಜಗ್ಗಾಟದ ಪ್ರಶ್ನೆ ಮತ್ತು ಸ್ಥಳೀಯ ಭಿನ್ನತೆಗಳ ವ್ಯವಹಾರದ ಚರ್ಚೆಯೇನಿದೆ ಅದು, ಆಮೇಲಿನ ಅರ್ಧ ಸಹಸ್ರಮಾನದವರೆಗೂ ನಿರಂತರವಾಗಿ ಕನ್ನಡಸಾಹಿತ್ಯದ ಒಂದು ವೈಶಿಷ್ಟ್ಯವೇ ಆಗಿ ಮುಂದುವರೆದಿರುವುದನ್ನು ನಾವು ಕಾಣುತ್ತೇವೆ. ಕವಿರಾಜಮಾರ್ಗವು ಯಾವೆಲ್ಲ ವಿಷಯಗಳ ಸರಣಿಯನ್ನು ನಿರೂಪಿಸಿತೋ ಅವೆಲ್ಲವೂ ಮುಂದಿನ ಐನೂರು ವರ್ಷಗಳಲ್ಲಿ ಪದೆಪದೆ ಚರ್ಚಿತಗೊಳ್ಳುತ್ತ ಹೋಗಿವೆ – ಅದು ಸಾಹಿತ್ಯಪ್ರಕಾರಗಳಿಗೆ

ಸಂಬಂಧಿಸಿದ ವಿಶಾಲಪ್ರಶ್ನೆಗಳಿರಬಹುದು (ಕವಿರಾಜಮಾರ್ಗ, ೧.೩೩ ಎಫ್‌ಎಫ್) ಸಂಸ್ಕೃತಕ್ಕೆ ಪೂರಕವಾಗಿ ಮತ್ತು ಅನುಬಂಧವಾಗಿ ಕಟ್ಟಿದ, ಅಗತ್ಯಕ್ಕಿಂತಲೂ ಮೊದಲೇ ಉದ್ಭವಿಸಿತು ಎನ್ನಬಹುದಾದ, ಕನ್ನಡದ ಗದ್ಯಪದ್ಯಗಳ ಮೀಮಾಂಸೆಯ (ಕವಿರಾಜಮಾರ್ಗ, ೧.೨೮-೩೨) ತಾತ್ವಿಕಸಮೂಹವೇ ಆಗಿರಬಹುದು, ಅಥವಾ ಸಂಧಿಗಳ ಸ್ವರೂಪವನ್ನು ಕುರಿತಂತೆ ಮತ್ತು ಸಂಧಿಗಳಲ್ಲಿ ಹೇಗೆ ಕನ್ನಡ ಮತ್ತು ಸಂಸ್ಕೃತವನ್ನು ಕೂಡಿಸಬಹುದು ಯಾ ಕೂಡಿಸಬಾರದು (ಕವಿರಾಜಮಾರ್ಗ, ೧.೫ ಎಫ್‌ಎಫ್) ಎಂಬುದನ್ನು ಕುರಿತ ಚರ್ಚೆಯಿರಬಹುದು. ಈ ಎಲ್ಲ ಜಿಜ್ಞಾಸೆಗಳೂ ಕೇವಲ ತಾತ್ವಿಕ ಸ್ವರೂಪದವೂ ಅಲ್ಲ. ಈ ತಾತ್ವಿಕ ಜಿಜ್ಞಾಸೆಯು ಉದ್ದಕ್ಕೂ ಇಲ್ಲಿನ ಕವಿಗಳು ತಮ್ಮ ಕಾವ್ಯರಚನೆಯಲ್ಲಿ ನಡೆಸಿದ ಪ್ರಯೋಗಗಳಿಗೆ ಸಮಸಮನಾಗಿ ನಡೆದಂಥದು. ಇಂಥ ಕಾವ್ಯಗಳ ಸರಣಿಯಲ್ಲಿ, ಅವುಗಳ ಹೆಸರುಗಳನ್ನು ಗಮನಿಸಿದರೂ ಸಾಕು – ಉದಾಹರಣೆಗೆ ಆರಂಭದ ಒಂದು ಕೃತಿ 'ಕರ್ನಾಟ ಕುಮಾರಸಂಭವ' (ಕ್ರಿ.ಶ. ೮೫೩ರಲ್ಲಿ ಅಸಗ ಬರೆದದ್ದೆಂದು ಹೇಳಲಾದದ್ದು) – ಆಯಾ ಕೃತಿಗಳು ಹೇಗೆ ಸಂಸ್ಕೃತದ ವಿಶ್ವಾತ್ಮಕತೆಯನ್ನು ಸ್ಥಳೀಯಗೊಳಿಸುವ ಪ್ರಯತ್ನದಲ್ಲಿ ತೊಡಗಿದ್ದವೆಂಬುದು ವೇದ್ಯವಾಗುತ್ತದೆ. ನಿಜವಾಗಿ, ಆರಂಭದ ಕನ್ನಡಸಾಹಿತ್ಯದ ಬಹುಪಾಲು ಕೃತಿಗಳ ಕಾಳಜಿ ಇದೇ – ಕನ್ನಡದಲ್ಲಿ ಕಾವ್ಯವೆಂಬುದನ್ನು ರಚಿಸುವ ಸಾಧ್ಯತೆಗಳ ನಿರ್ಮಾಣ.

### ದೇಶಭಾಷೆಯ ರಾಜಕೀಯ ಆವರಣ

ಈ ಎಲ್ಲ ಜಿಜ್ಞಾಸೆಯನ್ನು ಇನ್ನಾವುದೇ ಕೃತಿಗಿಂತ ಹೆಚ್ಚು ಸ್ಪಷ್ಟವಾಗಿ ತೋರಿಸುವಂಥದು – ಕನ್ನಡದಲ್ಲಿ ಲಭ್ಯವಾಗಿರುವ ಮೊದಲ ಸಾಹಿತ್ಯ ಕೃತಿ, ಪಂಪನ 'ವಿಕ್ರಮಾರ್ಜುನ ವಿಜಯ' (ಕ್ರಿ.ಶ. ೯೫೦). ಪಂಪನು ಎರಡನೆಯ ಅರಿಕೇಸರಿಯ ಆಸ್ಥಾನಕವಿಯಾಗಿದ್ದ; ಈ ಅರಿಕೇಸರಿ ಇವತ್ತು ಪಶ್ಚಿಮ ಆಂಧ್ರದಲ್ಲಿರುವ ವೇಮುಲವಾಡದಲ್ಲಿ ಸಾಮಂತನಾಗಿದ್ದು ರಾಷ್ಟ್ರಕೂಟರ ಆಳ್ವಿಕೆಯ ಕಡೆಯ ದಶಕಗಳಲ್ಲಿ ಅಧಿಕಾರ ನಡೆಸಿದವನು. 'ವಿಕ್ರಮಾರ್ಜುನವಿಜಯ'ವನ್ನು ಸಂಸ್ಕೃತ 'ಮಹಾಭಾರತ'ದ ಮೊದಲ 'ಸಮಗ್ರ' ದೇಶಭಾಷಾ ಆವೃತ್ತಿಯೆಂದು ಯೋಜಿಸಲಾಗಿತ್ತು; ಆಸ್ಥಾನ ಪಂಡಿತರ ಅಪೇಕ್ಷೆಯ ಮೇರೆಗೆ, ರಾಜನ ಪೋಷಣೆಯೊಂದಿಗೆ ನಿರ್ಮಿತವಾದ ಕೃತಿ ಇದು. ಆ ಕೃತಿ ಹೇಳುವಂತೆ ''ಪಂಡಿತರ ಅಭಿಪ್ರಾಯದ ಪ್ರಕಾರ, ಪೂರ್ವಕಾಲದ ಯಾವ ಮಹಾಕವಿಯೂ ಸಮಗ್ರಭಾರತವನ್ನು, ಆ ಕಥೆಯ ಅಗಾಧ ಹರಹನ್ನು ನಷ್ಟಗೊಳಿಸದೆಯೇ, ಸಮರ್ಪಕವಾಗಿ ಪುನರ್ರಚಿಸಿದ್ದಿಲ್ಲವಾದ್ದರಿಂದ ಇದೊಂದು ಅಭೂತಪೂರ್ವ



ಪ್ರಯತ್ನ.... ಇಂಥ ಪ್ರಯತ್ನವನ್ನು ಪಂಪನೊಬ್ಬನೆ ಮಾಡಬಲ್ಲನೆಂದು ಅವರು ಭಾವಿಸಿದ್ದರಿಂದ ಅವರೆಲ್ಲ ಕೂಡಿ ನನಗೆ ಇದನ್ನು ವಹಿಸಿದರು; ನಾನು ಈ ರಚನೆಯನ್ನು ಕೈಗೊಂಡೆ.... ಸ್ವತಃ ಅರಿಕೇಸರಿಯೇ ನನ್ನ ಬಳಿ ದೂತರನ್ನು ಕಳಿಸಿ ನನಗೆ ಸಂಪತ್ತನ್ನು ಕೊಟ್ಟು ತನ್ನ ಕೀರ್ತಿ ಜಗತ್ತಿನಾದ್ಯಂತ ಹರಡುವುದಕ್ಕೆ ಸಹಾಯಕವಾಗುವ ಇಂಥ ಇತಿಹಾಸಕಥೆಯನ್ನು ನಿರೂಪಿಸಬೇಕೆಂದು ಒತ್ತಾಯಿಸಿದ.''[೨೪] ಜತೆಗೆ, ಮೊದಲು ಹೇಳಿದ ಸಾಂಸ್ಕೃತಿಕ ವ್ಯತ್ಯಾಸಗಳ ವ್ಯವಹಾರವೇನಿದೆ ಅದು ಈ ಕೃತಿಯ ಮುಖ್ಯ ಆಶಯಗಳಲ್ಲೊಂದಾಗಿದ್ದು ಅದನ್ನು ಕೃತಿ ಆರಂಭದಲ್ಲಿಯೇ ಪ್ರಸ್ತಾಪಿಸುತ್ತದೆ – ''ಒಂದು ಕಾವ್ಯಕೃತಿಯು ಸುಂದರವಾಗುವುದು ಅದರಲ್ಲಿ ನವಪ್ರತಿಭೆಯಿದ್ದಾಗ... ಮತ್ತು ಅದು ದೇಸಿಯೊಳಗೆ ಹೊಕ್ಕು, ಆಮೇಲೆ, ಮಾರ್ಗದ ಒಳಕ್ಕೂ ಪ್ರವೇಶ ಮಾಡಿದಾಗ (ವಿಕ್ರಮಾರ್ಜುನವಿಜಯ ೧.೮).'' ಆದರೆ ಪಂಪನಿಗೆ ಇದಲ್ಲದೇ ಇನ್ನೂ ಹಲವು ಉದ್ದೇಶಗಳಿವೆ; ಇವು ಸ್ಪಷ್ಟವಾಗುವುದು ಆತ ಯಾವ ಮಾದರಿಯನ್ನು ಗೆಲ್ಲಲಿಕ್ಕೆ ಪ್ರಯತ್ನಿಸುತ್ತಿದ್ದ ಎಂಬುದನ್ನು ನೋಡಲು ಹೊರಟಾಗ.

ಈ ಲೇಖನದಲ್ಲಿ, ಹಿಂದೆ, ನನ್ನ ಹ್ರಸ್ವ ವಿವರಣೆಗಳು ಸೂಚಿಸಲು ಪ್ರಯತ್ನ ಮಾಡಿದಂತೆ, ಸಂಸ್ಕೃತದ ಮಹಾಭಾರತದ ಹಲವು ಉದ್ದಿಶ್ಯಗಳಲ್ಲಿ ಒಂದು – ಸ್ಥಳಾವರಣವೊಂದರ ಮತ್ತು ಆ ಸ್ಥಳವನ್ನೂ ಒಳಗೊಳ್ಳುವ ರಾಜಕೀಯ ಆವರಣವೊಂದರ ಸೃಷ್ಟಿ ಅಥವಾ ಪುನರ್‌ಜೋಡಣೆ. ಮೊದಲು ಗಮನಿಸಿದಂತೆ, ದೇಶತ್ಯಾಗದ ಸಂದರ್ಭದಲ್ಲಿ ಕಥಾನಾಯಕರು ಈ ಪುರಾಣಾವರಣದಲ್ಲಿ ಮಾಡುವ ಯಾತ್ರೆಗಳ ವಿವರಗಳನ್ನೇ ನೋಡಿ – ಸಾರ್ವತ್ರಿಕ ಚಕ್ರಾಧಿಪತ್ಯವನ್ನು ಘೋಷಿಸುವುದಕ್ಕೆ ಮೊದಲು ಅವರು ದಂಡಯಾತ್ರೆಗೆ ಹೋಗುತ್ತಾರೆ; ಚಕ್ರಾಧಿಪತ್ಯಕ್ಕೆ ಆತಂಕ ಬಂದಾಗ ಅವರು ಸೇನೆಯನ್ನು ಕಳಿಸಲು ವ್ಯವಸ್ಥೆ ಮಾಡುತ್ತಾರೆ; ಅಶ್ವಮೇಧಯಾಗದ ಸಂದರ್ಭದಲ್ಲಿ ತಮ್ಮ ಸಾಮ್ರಾಜ್ಯದ ಹತೋಟಿಯನ್ನು ಬಿಂಬಿಸುವಂತೆ ಎಲ್ಲ ದಿಕ್ಕಿಗೆ ಕುದುರೆಯನ್ನು ಕಳಿಸುತ್ತಾರೆ ಮತ್ತು ಅಂತಿಮವಾಗಿ ಕುದುರೆಯ ಬಲಿಯೊಂದಿಗೆ ಅವರ ಚಕ್ರಾಧಿಪತ್ಯವು ಮರುಸ್ಥಾಪನೆಗೊಳ್ಳುತ್ತದೆ. ಆದರೆ ಯಾವ ರಾಜಕೀಯ ಅಧಿಕಾರದ ಮರುಮನ್ನಣೆಗೋಸ್ಕರ ಅವರು ಈ ಯಜ್ಞವನ್ನು ನಡೆಸಿದ್ದರೋ ಅದೇ ಯಜ್ಞದ ಸಂದರ್ಭದಲ್ಲಿ, ಬಲಿಯ ಘಟನೆಯಿಂದ ಮನಸ್ಸು ಬದಲಾಗಿ, ಅವರು ಪ್ರಪಂಚವನ್ನು ನಿರಾಕರಿಸಿ ಕಟ್ಟಕಡೆಗೆ, ತಮ್ಮ ಸಾವಿಗೆ ಮೊದಲು, ಇನ್ನೊಂದು ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಹೀಗೆ, ಈ ಇಡೀ ಯಾತ್ರೆಯ ಮೂಲಕ, ವಿಶಾಲವಾದ ಆದರೆ ಬಿಗಿಯಾಗಿ ಬಂಧಿಸಲ್ಪಟ್ಟ ಸಾಂಸ್ಕೃತಿಕ ರಾಜಕೀಯ ಆವರಣವನ್ನೊಳಗೊಂಡ ಜಗತ್ತೊಂದರ ಪ್ರತಿಮೆ ಗಟ್ಟಿಯಾಗಿ ನಿರ್ಮಿತವಾಗುತ್ತದೆ; ಈ ಜಗತ್ತು (ಇವತ್ತು ಹಾಗೆ

ಕರೆಯಲ್ಪಡುತ್ತಿರುವ) ನೇಪಾಳದಿಂದ ಅಸ್ಸಾಮಿನವರೆಗೆ, ಅಲ್ಲಿಂದ ಒಂದು ದಿಕ್ಕಿಗೆ ದಕ್ಷಿಣದ ಪ್ರಸ್ಥಭೂಮಿಗೆ ಮತ್ತು ಇನ್ನೊಂದೆಡೆ ಸಿಂಧ್, ಕಂದಹಾರ್, ಕಾಶ್ಮೀರದತನಕ ವ್ಯಾಪಿಸಿಕೊಳ್ಳುತ್ತದೆ. ಇಂಥ ಒಂದು ಪುರಾಣ ಆವರಣದಲ್ಲಿ, ಆ ಆವರಣವನ್ನು ವ್ಯಾಪಿಸಿರುವ ರಾಜಕಾರಣವನ್ನೂ ಒಳಗೊಂಡು, ಅದಕ್ಕೆ ಸಂವಾದಿಯಾಗಿ ಪಂಪ ತನ್ನ ದೇಶಭಾಷಾ ಆವರಣದ ಮರುವ್ಯಾಖ್ಯಾನವನ್ನು ಮಾಡಲಿಕ್ಕೆ ಹೊರಟಿದ್ದಾನೆ.

ತನ್ನ ಕೃತಿಯನ್ನು ಪಂಪ ಹಲವು ಬಾರಿ 'ಸಮಸ್ತ ಭಾರತ'ವೆಂದು ಕರೆದುಕೊಂಡಿದ್ದಾನೆ. 'ಸಮಸ್ತ'ವೆಂಬ ಪದಕ್ಕೆ ಇಲ್ಲಿ ಎರಡು ಅರ್ಥಗಳು – ಮೊದಲೇ ಹೇಳಿದಂತೆ ಕವಿ ಇಲ್ಲಿ ಸಂಸ್ಕೃತ ಕಾವ್ಯದ ಮುಖ್ಯ ಕಥಾನಕದ 'ಸಮಗ್ರತೆ'ಯನ್ನು ಪುನರ್ನಿರ್ಮಿಸಲು ಹೊರಟಿದ್ದಾನೆ. ಜತೆಗೆ, ಆತ ತನ್ನ ಮಹಾಕಾವ್ಯವನ್ನು ಒಂದು ''ಸಂಯುಕ್ತ'' ಕಥನವನ್ನಾಗಿಯೂ ಮಾಡಲು ಹವಣಿಸಿದ್ದಾನೆ. ಸಂಸ್ಕೃತ ಮಹಾಕಾವ್ಯದ ಕಥಾನಾಯಕರು, ಮಿತ್ರಪಕ್ಷಗಳು, ವಿರೋಧಿಗಳು – ಇವರನ್ನೆಲ್ಲ ಪಂಪ ತನ್ನ ಪೋಷಕಪ್ರಭು, ಅವನ ಕುಟುಂಬ, ಆ ರಾಜ್ಯ, ಅದರ ಶತ್ರುಗಳು ಮತ್ತು ಒಟ್ಟಿನಲ್ಲಿ ತನ್ನ ಪ್ರಾಂತ್ಯವನ್ನೇ – ಇದರ ಜತೆಗೆ ತಳುಕು ಹಾಕಿದ್ದಾನೆ. ಕವಿಯ ಈ ಕೆಲಸ ಇಲ್ಲಿ ಎಷ್ಟು ಸೂಕ್ಷ್ಮವಾಗಿದೆಯೆಂದರೆ ಇದೊಂದು ಸರಳ ಅನ್ಯೋಕ್ತಿಕಥನವೆಂದು ಕಾಣಿಸುವುದಿಲ್ಲ. ಆದರೆ, ಓದುಗರಿಗೆ ಆತ ಕೊಡುವ ಸೂಚನೆಗಳು ಮಾತ್ರ ಸ್ಪಷ್ಟವಾಗಿವೆಯೇ ಇವೆ. (೧.೫೧ರಲ್ಲಿ ಇಂಥ ಗುರುತಿನ ಸೂಚನೆಗಳನ್ನು ಆತ ಸ್ಪಷ್ಟವಾಗಿಯೇ ನಮೂದಿಸಿದ್ದಾನೆ). ಅದಕ್ಕಾಗಿಯೇ ಈ ಪುರಾಣ-ಮಹಾಕಾವ್ಯದ ಕಥನದ ಆಯಕಟ್ಟಿನ ಬಿಂದುಗಳಲ್ಲಿ ಕವಿಯು ಚಾಳುಕ್ಯರ ರಾಜಕೀಯ ಸ್ಥಿತಿಗತಿಗಳನ್ನೂ ರಾಷ್ಟ್ರಕೂಟರೊಡನೆ ಅವರು ನಡೆಸುವ ಮಾರಾಮಾರಿಯನ್ನೂ ಮತ್ತು ಅರಿಕೇಸರಿಯು ಸಾಮಂತನಾಗುವ ಘಟನೆಯನ್ನೂ ತೂರಿಸುತ್ತಹೋಗುತ್ತಾನೆ. ಇಂಥ ದ್ವಿಮುಖಿ ಕಥನಕ್ಕೆ ಕಾವ್ಯದ ನಟ್ಟನಡುವಿನಲ್ಲಿ ಒಂದು ಒಳ್ಳೆಯ ಉದಾಹರಣೆ ಬರುತ್ತದೆ – ಧೃತರಾಷ್ಟ್ರನ ಮಕ್ಕಳು ಯುದ್ಧಕ್ಕೆ ಪೂರ್ವಭಾವಿಯಾಗಿ ತಮ್ಮ ಶತ್ರುವೂ ಕಥಾನಾಯಕನೂ ಆದ ಅರ್ಜುನನ ಶೌರ್ಯವನ್ನು ವರ್ಣಿಸತೊಡಗುತ್ತಾರೆ – ಶಿವನೊಂದಿಗೆ ಆತ ಸೆಣಸಾಡಿ ಹೆಮ್ಮೆಯಿಂದ ಮಾಯಾಸ್ತ್ರಗಳಿಸುವುದು, ವೀರನಾಗಿ ರಾಕ್ಷಸರನ್ನು ಮಣಿಸುವುದು, ದೇವರಾಜ ಇಂದ್ರನ ಸಿಂಹಾಸನವನ್ನೇ ಆತ ಹಂಚಿಕೊಳ್ಳುವುದು – ಹೀಗೆ ಕಥಾನಕವು 'ಇಂದ್ರ'ನ ಪ್ರಸ್ತಾಪ ಮಾಡುತ್ತಿದ್ದಂತೆಯೇ, ಈತ ಅರಿಕೇಸರಿಯ ಮಾವ ರಾಷ್ಟ್ರಕೂಟರಾಜ ಮೂರನೆಯ ಇಂದ್ರನೂ ಆಗಿ ಕಾಣತೊಡಗಿ, ಈಗ ಇಡಿಯ ಕಥಾನಕವು ಸಲೀಸಾಗಿ ಕವಿಯ ಆಶ್ರಯದಾತನ ವರ್ಣನೆಗೆ ತಿರುಗಿಕೊಳ್ಳುತ್ತದೆ:



*ಚಾಳುಕ್ಯ ಕುಲತಿಲಕನಾದ ವಿಜಯಾದಿತ್ಯನಿಗೆ (ರಾಷ್ಟ್ರಕೂಟರ ನಾಲ್ಕನೆಯ) ಗೋವಿಂದರಾಜನು ಪ್ರತಿಭಟಿಸಲು ಅವನನ್ನು ಸಾವಕಾಶಮಾಡದೆ ಹಿಂದಕ್ಕೆ ನೂಕಿ ರಕ್ಷಿಸಿದ ಶರಣಾಗತಸಮುದ್ರನ ಮಹಿಮೆಯನ್ನು ಗೊಜ್ಜಿಗ (ಗೋವಿಂದರಾಜ)ನೆಂಬ ಸಕಲಚಕ್ರವರ್ತಿಯು ಆಜ್ಞೆಮಾಡಲು ದಂಡೆತ್ತಿ ಬಂದ ಮಹಾಸಾಮಂತರನ್ನೆಲ್ಲ ಹಿಮ್ಮೆಟ್ಟುವಂತೆ ಹೊಡೆದು ಗೆದ್ದ ಸಾಮಂತಚೂಡಾಮಣಿಯ ವೀರ್ಯವನ್ನೂ, ಎಲ್ಲೆಮೀರಿ ಪ್ರತಿಭಟಿಸುವ ಚಕ್ರವರ್ತಿಯನ್ನು ಹಾಳುಮಾಡಿ ತನ್ನನ್ನೇ ನಂಬಿಬಂದ ಬದ್ದೆಗದೇವ(=ಮೂರನೆಯ ಅಮೋಘ ವರ್ಷ)ನಿಗೆ ಸಕಲಸಾಮ್ರಾಜ್ಯವನ್ನು ಏಕಪ್ರಕಾರವಾಗಿ ಮಾಡಿ ಸ್ಥಾಪಿಸಿದ ಅರಿಕೇಸರಿಯ ತೋಳಬಲವನ್ನು.... (ವಿಕ್ರಮಾರ್ಜುನ ವಿಜಯ ೯.೫೧)*

ಹೀಗೆ ಇಲ್ಲಿ ಬಂಡಾಯವೆದ್ದ ಗೋವಿಂದರಾಜನನ್ನು ಸೋಲಿಸಿದ ಅರಿಕೇಸರಿ ನ್ಯಾಯಯುತವಾದ ರಾಜನಿಗೆ ಅಧಿಕಾರವನ್ನು ದೊರಕಿಸುತ್ತಾನೆ, ಮತ್ತು ಆ ಮೂಲಕವೇ ತಾನು ೧೦ನೆಯ ಶತಮಾನದ ನಡುವಿನ ಈ ದಕ್ಷಿಣದಲ್ಲಿ ಪ್ರಮುಖ ಸಾಮಂತನೆಂಬುದನ್ನು ಸಾಬೀತುಪಡಿಸುತ್ತಾನೆ.

ಇದರ ಐತಿಹಾಸಿಕ ವಿವರಗಳ ಬಗ್ಗೆ ನಾವು ಗಮನಿಸಬೇಕಿಲ್ಲ, ಇದನ್ನು ಪ್ರಸ್ತುತಪಡಿಸಲು ಪಂಪನು ಆವಿಷ್ಕರಿಸಿಕೊಂಡ ಸಾಂಸ್ಕೃತಿಕ ಸಂವಹನ ಮಾಧ್ಯಮದ ಬಗ್ಗೆ ನಾವು ಗಮನಹರಿಸಬೇಕು. ಸಂಸ್ಕೃತ ಮಹಾಕಾವ್ಯವು ಮಾಡುವ ರಾಜಕೀಯ ಕಥನವನ್ನು ಇಲ್ಲಿ ಪಂಪ ದೇಶಭಾಷೆಯ ಕಥನವಾಗಿ ಮಾರ್ಪಡಿಸಿದ್ದಾನೆ. ಮತ್ತು ಆಮೂಲಕ ಸಂಸ್ಕೃತದ ಪ್ರಾಂತ್ಯಾಂತರವ್ಯಾಪ್ತಿಯ ರಾಜಕೀಯ ವ್ಯವಸ್ಥೆಯನ್ನು ಅದಕ್ಕೆ ಭಿನ್ನವಾಗಿದ್ದ ಒಂದು ಜಗತ್ತಿಗೆ ಅನ್ವಯಿಸುತ್ತಾನೆ. ಹಾಗೇ, ಈ ಕಾವ್ಯದ ಭೌಗೋಲಿಕ ವರ್ಣನೆಯನ್ನೂ ಪ್ರಸ್ತುತ ಜಗತ್ತಿಗೆ ಕೂರಿಸುತ್ತಾನೆ. ಸಂಸ್ಕೃತ ಮಹಾಕಾವ್ಯದಲ್ಲಿ ಭರತವಂಶಕ್ಕೆ ನೆಲೆವೀಡಾದ ಹಸ್ತಿನಾಪುರವು ಇಲ್ಲಿ ಚಾಲುಕ್ಯ ರಾಜಧಾನಿ ವೇಮಲವಾಡವಾಗುತ್ತದೆ. ಅಲ್ಲಿ ಬರುವ ಮಹಾನ್ ಭೂಪ್ರದಕ್ಷಿಣೆಯ ವಿವರಗಳು ಇಲ್ಲಿ ಕೇಂದ್ರ ದಖ್ಖನ್ನಿನ ಸುತ್ತ ಹಬ್ಬಿಕೊಳ್ಳುತ್ತವೆ. ತುದಿಯಲ್ಲಿ ಬರುವ ಕಥಾನಾಯಕನ ಪಟ್ಟಾಭಿಷೇಕದ ಸಮಯದಲ್ಲಿ, ಬೇರೆಬೇರೆ ನದಿಗಳ ನೀರನ್ನು ಸಂಗ್ರಹಿಸುವ ವಿವರದಲ್ಲಿಯೂ ಕೂಡಾ ಕೇಂದ್ರಕನ್ನಡಭೂಮಿಯ ಬನವಾಸಿಯ ಒಂದು ಹೊಳೆ ಸೇರಿಕೊಳ್ಳುತ್ತದೆ (ವಿಕ್ರಮಾರ್ಜುನವಿಜಯ ೧.೫೧ ಎಫ್‌ಎಫ್ ಮತ್ತು ನರಸಿಂಹಾಚಾರ್ ಅವರ ಟಿಪ್ಪಣಿ; ೪.೨೬ ಎಫ್‌ಎಫ್; ೧೪.೩೧). ಒಂದೇ ಮಾತಿನಲ್ಲಿ ಹೇಳುವುದಾದರೆ, ಪಂಪನು ಇಲ್ಲಿ ಇಡೀ ಭರತವರ್ಷವನ್ನು ಕಿರಿದುಗೊಳಿಸಿ ಅದನ್ನು ಕನ್ನಡನೆಲಕ್ಕೆ ಸಮೀಕರಿಸಿದ್ದಾನೆ; ಆ ಮಹಾವರಣದ ರಾಜಕೀಯ ದರ್ಶನವನ್ನು ಈ ನಿಜ ಆವರಣದಲ್ಲಿ ತಂದು ಕೂರಿಸಿದ್ದಾನೆ. ಇದರ ಮೇಲೆ ಅಲ್ಲಲ್ಲಿ ನೇರಸೂಚನೆಗಳ ಮೂಲಕ, ಕಥನದ ಮೂಲಕ, ಸಾಹಿತ್ಯಕ ಗುಣಗಳ ಮೂಲಕ ಇವೆಲ್ಲವನ್ನೂ ಆತ

ಹೆಣೆಯುತ್ತಾನೆ. ಆಗ ಇದು ಕವಿರಾಜಮಾರ್ಗವು ಹೇಳುವ ಕನ್ನಡನಾಡಾಗಿ ಕಾಣಿಸಿಕೊಳ್ಳುತ್ತದೆ – ''ಕಾವೇರಿಯಿಂದ ಗೋದಾವರಿಯವರೆಗಿನ ಈ ಕನ್ನಡ ನಾಡು (ಇದಕ್ಕೆ ಕರ್ನಾಟಕವೆಂಬ ಹೆಸರೂ ಇತ್ತು) ಪ್ರಸಿದ್ಧವಾದ ಜನಪದವನ್ನೊಳಗೊಂಡು ಭೂವಲಯದ ನಡುವೆ ಸ್ಥಾಪಿತವಾಗಿರುವ ವಿಶೇಷ ಸ್ಥಳ (ಕವಿರಾಜಮಾರ್ಗ ೧.೩೬) ಆಗುತ್ತದೆ. ಅಷ್ಟೇ ಅಲ್ಲ, ಈ ನಾಡು ಇಲ್ಲೀಗ ಈ ಇಡೀ ಕಥನದ ರಾಜಕೀಯ ಮತ್ತು ಕಲಾತ್ಮಕ ಚೌಕಟ್ಟೂ ಆಗಿ ನಿಲ್ಲುತ್ತದೆ. ಪಂಪ ತನ್ನ ಭಾರತವನ್ನು ಬರೆದದ್ದು ಈ ನಾಡಿನ ಸಮುದಾಯದ ನೈತಿಕ-ರಾಜಕೀಯ ಶಿಕ್ಷಣಕ್ಕಾಗಿಯೇ – ''ವ್ಯಾಸಮಹರ್ಷಿಗಳಿಂದ ಹೊಗಳಲ್ಪಟ್ಟ ಕೃತಿಯಾದ ಭಾರತವನ್ನು ಚೆನ್ನಾಗಿ ಹೇಳಿಯೂ... ಪಂಪನು ವಾಕ್ಸಂಪತ್ತಿನ ಸೌಂದರ್ಯವುಳ್ಳವನೂ ಪುರಾಣರಚನೆ ಮಾಡಿದ ಕವಿಯೂ ಆಗಿ, ಹಾಗೆಯೇ ದೇಸಿಗುಣಗಳು ಉನ್ನತವಾಗಿ ಅಭಿವೃದ್ಧಿಗೊಳ್ಳುತ್ತಿರಲು, ಕವಿತಾಗುಣಾರ್ಣವನು ನಾಡೋಜನಾದನು'' (ವಿಕ್ರಮಾರ್ಜುನವಿಜಯ ೧೪.೬೨).

ಇಂಥ ಪಠ್ಯ ಮತ್ತು ಪ್ರಯೋಗಗಳ ಸಂಪ್ರದಾಯವನ್ನು ರೂಪಿಸುವ ಮುಖಾಂತರವೇ ಕವಿರಾಜಮಾರ್ಗವು ಏಕಕಾಲಕ್ಕೆ ಕನ್ನಡ ಪ್ರಾಂತೀಯತೆಯನ್ನೂ ಪ್ರಾಂತ್ಯಾತೀತತೆಯನ್ನೂ ಸಮರ್ಥಿಸುವ ಕೃತಿಯಾಗುತ್ತದೆ; ಸಂಸ್ಕೃತ ವರ್ಗೀಕರಣ ವಿಧಾನಗಳನ್ನು ಅಳವಡಿಸಿ ಕನ್ನಡದ ಸಾಹಿತ್ಯರೂಢಿಗಳನ್ನು ನಿರ್ಮಿಸುತ್ತದೆ. ಹೀಗೆ ಪಂಪ ಮಾಡಿರುವ ಪುರಾಣಸ್ಥಳ ಮತ್ತು ರಾಜಕೀಯ ದರ್ಶನಗಳ ಸ್ಥಳೀಕರಣ ಮತ್ತು ಈಗಾಗಲೇ ಉಲ್ಲೇಖಿಸಿರುವ ಇನ್ನಿತರ ಉದಾಹರಣೆಗಳು – ಇವೆಲ್ಲ ಸೇರಿ ವಿಶ್ವಾತ್ಮಕ ದೇಶಭಾಷೆಯ ಉತ್ಪಾದನೆಯೆಂದು ನಾನು ಕರೆಯುವ ವಿದ್ಯಮಾನ ರೂಪುಗೊಳ್ಳುವುದು. ಹಾಗಿದ್ದೂ, ಕವಿರಾಜಮಾರ್ಗ, ಪಂಪಭಾರತ ಮತ್ತಿತರ ಪಠ್ಯಗಳು ಇಂಥ ಸುಸಂಸ್ಕೃತ ದೇಶಭಾಷೆಯನ್ನು ರೂಪಿಸುವ ಸಾಹಿತ್ಯಕ-ವೈಧಾನಿಕ ದೃಷ್ಟಾಂತಗಳನ್ನೇನೋ ಕೊಡುತ್ತವೆ, ಆದರೆ, ಇಂಥ ಪಲ್ಲಟವು ಸಂಭವಿಸುತ್ತಿರುವ ಕಾಲ-ದೇಶ ಸಂದರ್ಭಸಂಬಂಧಿ ಕಾರಣವನ್ನು ನಾವು ಅರಿಯುವುದು ಹೇಗೆ? ಯಾಕೆ ಒಂಬತ್ತು-ಹತ್ತನೆಯ ಶತಮಾನಗಳ ದೇಶಭಾಷಾ ಧೀಮಂತರು ರಾಜಕೀಯ ಅಧಿಕಾರದ ಕೇಂದ್ರಗಳಿಂದ (ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ) ರಾಜಕೀಯ ಸಂವಹನೆಗಾಗಿ ತಮ್ಮ ಗಮನವನ್ನು ಕನ್ನಡದತ್ತ ಹರಿಸುತ್ತಾರೆ? ತಮ್ಮ ಭಾಷೆಯನ್ನು ಅವರು ಹೊಸದೊಂದು ಜ್ಞಾನಶಾಸ್ತ್ರೀಯ ಸಂದರ್ಭದಲ್ಲಿ, ಹೊಸ ತಾತ್ವಿಕ ಪ್ರಸ್ಥಾನದಲ್ಲಿ, ಆಸ್ಥಾನಸಂವಹನೆಗೆ ಬಳಸತೊಡಗಿದರಲ್ಲ, ಅದರ ಹಿಂದಿರುವ ತಕ್ಷಣದ ಕಾಲ-ದೇಶಾದಿ ಪ್ರೇರಣೆಗಳು ಯಾವುವು? ಅದುವರೆಗೂ ಪ್ರಾಂತ್ಯಾಂತರ ವ್ಯಾಪ್ತಿಯ ಸಾಧ್ಯತೆಯೂ ವಾಸ್ತವವೂ ಆಗಿ, ಹೆಚ್ಚೂಕಮ್ಮಿ ಜಾಗತಿಕ ಸ್ವರೂಪವುಳ್ಳದ್ದಾಗಿ, ಕಂಡಿದ್ದ



ಸಂಸ್ಕೃತವು ಈಗೇಕೆ ಅವರಿಗೆ ತ್ಯಾಜ್ಯವಾಯಿತು? ಯಾಕವರು ಮೊದಲಬಾರಿಗೆ ಸ್ಥಳೀಯ ನೆಲೆಗಳಿಂದ ಮಾತಾಡಲು ತೊಡಗಿದರು?

## ದೇಶಭಾಷಾನಿರ್ಮಾಣಪ್ರಕ್ರಿಯೆಗೆ ವಿವರಣೆಗಳು

ಕನ್ನಡ ಸಾಹಿತ್ಯಸಂಸ್ಕೃತಿಯ ನಿರ್ಮಾಣದಲ್ಲಿ ನಾವು ಗುರುತಿಸಿದ ಈ ಪ್ರಕ್ರಿಯೆಗೆ ಹೋಲುವ ಸಮಾನಾಂತರ ವಿದ್ಯಮಾನಗಳು ಎರಡನೆಯ ಸಹಸ್ರಮಾನದ ಆರಂಭದಿಂದಲೇ ಸಂಸ್ಕೃತ ಮಹಾವಿಶ್ವದಾದ್ಯಂತ – ಅಂದರೆ, ಅಸ್ಸಾಂ, ಆಂಧ್ರ, ಒರಿಸ್ಸಾಗಳಿಂದ ಶ್ರೀಲಂಕಾ, ಜಾವಾದವರೆಗೆ; ಕೇರಳ, ಮಹಾರಾಷ್ಟ್ರ, ಗುಜರಾತ್‌ಗಳಿಂದ ಟಿಬೆಟ್ಟಿನವರೆಗೆ – ಸಂಭವಿಸಿರುವುದನ್ನು ಕೂಡಾ ನಾವು ಗಮನಿಸಬಹುದು. ಈ ಘಟ್ಟದಲ್ಲಿ ದೇಶಭಾಷಾ ಲೇಖಕರು ತಮ್ಮ ನಾಡಿನ ಶಾಸನ ದಾಖಲೆಗಳೂ ರಾಜಕೀಯ ನಿರೂಪಗಳೂ ಇನ್ನುಮುಂದೆ ದೇಶಭಾಷೆಯಲ್ಲೇ ಹೊರಡುವಂತೆ ಏರ್ಪಡಿಸಿದರು; ತಮಿಳಿನ ಚೋಳಸಾಮ್ರಾಜ್ಯದಲ್ಲಿ ಇದು ಗಟ್ಟಿಯಾಗಿ ಕಾಣಿಸಿಕೊಂಡರೆ ಮರಾಠಿ, ಒರಿಯಾ, ತೆಲುಗುಗಳಲ್ಲಿ ಇದು ಇನ್ನೂ ಆರಂಭಿಕರೂಪದಲ್ಲಿ ತೋರಿಸಿಕೊಳ್ಳುತ್ತದೆ. ಹಾಗೆಯೇ ಇವರು ಸಂಸ್ಕೃತದ ಸಾಹಿತ್ಯ ಮೀಮಾಂಸೆ ಮತ್ತು ಮಾದರಿಗಳನ್ನು ತಮ್ಮ ಭಾಷೆಗೆ ಅಳವಡಿಸಿಕೊಂಡು ಅದರ ಮೂಲಕ ರಾಜಕೀಯ ಮತ್ತು ಸೃಜನಾತ್ಮಕ ಸಂವಹನೆಯನ್ನು ನಡೆಸಿದರು; ಉದಾಹರಣೆಗೆ, ದಂಡಿಯನ್ನು ಸಿಂಹಳಿಯು ೧೦ನೆಯ ಶತಮಾನದಲ್ಲೂ ತಮಿಳು ೧೨ನೆಯ ಶತಮಾನದಲ್ಲೂ ಟಿಬೆಟನ್ ೧೪ನೆಯ ಶತಮಾನದಲ್ಲೂ ಅಳವಡಿಸಿಕೊಂಡಿತು. ಜತೆಗೆ, ಇವರೆಲ್ಲ ತಮ್ಮ ಸಾಹಿತ್ಯಪ್ರಸ್ತುತಿಗೆ ಹೊಸ ಭೌಗೋಲಿಕ ಚೌಕಟ್ಟನ್ನೂ ರೂಪಿಸಿಕೊಂಡರು; ಆಯಾ ಕೃತಿಗಳು ಚಲಾವಣೆಯಾಗುವ ಸ್ಥಳಗಳೇ ಆ ಹೊಸ ಭೌಗೋಲಿಕ ಚೌಕಟ್ಟಿನ ಮೇರೆಯೂ ಆಯಿತು. ಹಾಗೇ, ಸಂಸ್ಕೃತ ಮಹಾಕಾವ್ಯಗಳನ್ನು – ಹಲವೊಮ್ಮೆ ಪಂಪನಂತೆ ದ್ವಿಮುಖಿ ನಿರೂಪಣೆಯ ಮೂಲಕವೇ – ಸ್ಥಳೀಕರಿಸುವ ಮೂಲಕ ಈ ಎಲ್ಲ ಗುರಿಗಳನ್ನು ಅವರು ಒಂದೇ ಏಟಿಗೆ ಸಾಧಿಸಿಕೊಂಡರು. ಮತ್ತು ಇವೆಲ್ಲದರ ಫಲವಾಗಿ ದೇಶಭಾಷಾನಿರ್ಮಾಣ ಪ್ರಕ್ರಿಯೆಯ ಮಹಾನ್ ಉಬ್ಬರಕ್ಕೆ ಕಾರಣವಾದರು. ಇಂಥ ಪ್ರಕ್ರಿಯೆಗೆ ಸಾಕ್ಷಿಯಾಗಿ ಒದಗಿಬರಬಹುದಾದ ಕೃತಿಗಳ ಪಟ್ಟಿ ಇದು – ೧೦ನೆಯ ಶತಮಾನದ ಜಾವಾದಲ್ಲಿ ರಚಿತವಾದ 'ರಾಮಾಯಣ' ಪಠ್ಯ (ಇಲ್ಲೂ ದ್ವಿಮುಖಿ ಕಥನವೇ ಕೇಂದ್ರ; ನೋಡಿ – ರಾಬ್ಸನ್ ೧೯೮೩) ಮತ್ತು ಜಾವಾದ ಗದ್ಯ 'ಮಹಾಭಾರತ'; ೧೧ನೆಯ ಶತಮಾನದ ನಡುವಿಗೆ ವೆಂಗಿ ಚಾಲುಕ್ಯರ ಆಸ್ಥಾನದಲ್ಲಿದ್ದ

ನನ್ನಯ್ಯನ ತೆಲುಗು ‘ಮಹಾಭಾರತ’; ೧೪ನೆಯ ಶತಮಾನದ ನಡುವಿಗೆ ಬರಾಹಿ ರಾಜ ಮಹಾಮಾಣಿಕ್ಯನ ಕೇಳಿಕೆಯಿಂದ ರಚಿತವಾದ ಮಾಧವ ಕಂಡಲೀಯ ಅಸ್ಸಾಮಿ ‘ರಾಮಾಯಣ’; ೧೫ನೆಯ ಶತಮಾನದ ನಡುವಿಗೆ ಗ್ವಾಲಿಯರ್ ತೋಮಾರ್‌ನ ಆಸ್ಥಾನದಲ್ಲಿ ರಚಿತವಾದ ವಿಷ್ಣುದಾಸ ಬ್ರಜನ ‘ಮಹಾಭಾರತ’ (ಪಾಂಡವಚರಿತ) ಮತ್ತು ‘ರಾಮಾಯಣಕಥಾ’; ೧೫ನೆಯ ಶತಮಾನದ ತುದಿಗೆ ಗಜಪತಿ ಆಸ್ಥಾನದಿಂದ ಹೊರಬಂದ ಒರಿಯಾ ಭಾಷೆಯ ಇವೇ ಮಹಾಕಾವ್ಯಗಳು ಮತ್ತು ‘ಭಾಗವತ’. ಹೀಗೆ, ಈ ಎಲ್ಲ ಕೃತಿಗಳ ಮೂಲಕ ಕಾಣಿಸುವ ಒಂದು ಸಂಪ್ರದಾಯವು ಜನರ ಪ್ರತಿಭಾವ್ಯಾಪಾರದಲ್ಲಿ ಮತ್ತು ಅವರ ಸ್ಥಳೀಯಜಗತ್ತಿನ ಕಲ್ಪನೆಯಲ್ಲಿ ಆಗಿರುವ ರೂಪಾಂತರದ ದ್ಯೋತಕ, ನಿಜ. ಆದರೆ, ಇದನ್ನು ಐತಿಹಾಸಿಕವಾಗಿ ವಿಶ್ಲೇಷಿಸಿ ಸಾಂಸ್ಕೃತಿಕ ಸಿದ್ಧಾಂತವಾಗಿ ನಿರೂಪಿಸುವ ದಾರಿಯಲ್ಲಿ ಹಲವಾರು ತೊಡಕುಗಳು ಎದುರಾಗುತ್ತವೆ; ಇವನ್ನು ಇಡಿಯಾಗಿ ನಿವಾರಿಸಿಕೊಳ್ಳುವುದು ಇನ್ನೂ ಆಗಿಲ್ಲ. ಆದ್ದರಿಂದ, ಈ ಎಲ್ಲವನ್ನೂ ಸೇರಿಸಿ ದೇಶಭಾಷಾನಿರ್ಮಾಣವನ್ನು ಕುರಿತ ಏಕೀಕೃತಸಿದ್ಧಾಂತವೊಂದನ್ನು ಮಂಡಿಸುವ ಮಾತು ಹಾಗಿರಲಿ, ನಿರ್ದಿಷ್ಟ ಪ್ರಾಂತ್ಯಗಳ ವ್ಯಾಪ್ತಿಯಲ್ಲಿ ತತ್ವೀಕರಿಸುವುದೂ ನಮಗಿನ್ನೂ ಸಾಧ್ಯವಾಗದೆ ಹೋಗಿದೆ. ಸದ್ಯ ನಾವು ಮಾಡಬಹುದಾದದ್ದು ಇಷ್ಟೇ – ಇಂಥ ತತ್ವೀಕರಣವು ಇನ್ನು ಮುನ್ನಡೆಯಲು ಸಾಧ್ಯವಿಲ್ಲದೇ ಇರುವ ದಿಕ್ಕುಗಳನ್ನು ಗುರುತಿಸುವುದು ಮತ್ತು ಅಂಥ ಮುನ್ನಡೆಯು ಒದಗಬಹುದಾದ ಹೊಸ ದಿಕ್ಕುಗಳನ್ನು ಹುಡುಕುವುದು. ಆಮೂಲಕ ನಾವು ದಕ್ಷಿಣ ಏಶಿಯಾದಾದ್ಯಂತ ನಡೆದ ಈ ಪ್ರಕ್ರಿಯೆಯ ಕೆಲವು ಸ್ಥೂಲರೂಪಗಳನ್ನಾದರೂ ಗ್ರಹಿಸಲಿಕ್ಕೆ ಸಾಧ್ಯವಾದೀತು.

ದಕ್ಷಿಣ ಏಶಿಯಾದ ಪ್ರಮುಖ ಸಾಂಸ್ಕೃತಿಕ ಮತ್ತು ರಾಜಕೀಯ ತತ್ವಜ್ಞ ಸುದೀಪ್ತ ಕವಿರಾಜ್, ತಮ್ಮ ಈಚಿನ ಎರಡು ಲೇಖನಗಳಲ್ಲಿ, ಬ್ರಿಟಿಷ್ ವಸಾಹತುಶಾಹಿ ಆಡಳಿತದ ಮುಂಚೆ ಬದುಕುವ ಮತ್ತು ಬರೆಯುವ ಅನುಭವಕ್ಕೆ ಸಂಬಂಧಿಸಿದಂತೆ ಕೆಲವು ಮುಖ್ಯ ಪ್ರಸ್ತಾಪಗಳನ್ನು ಚರ್ಚಿಸಿದ್ದಾರೆ (ಕವಿರಾಜ್ ೧೯೯೨ಎ, ೧೯೯೨ಬಿ). ಅವರ ಚಿಂತನೆಗಳು ಬಹಳ ಮೌಲ್ಯವುಳ್ಳದ್ದು, ಕಾರಣ, ಅವು ಐತಿಹಾಸಿಕತೆಗೆ ಒತ್ತುಕೊಡುತ್ತವೆ; ಆದ್ದರಿಂದ ಸಮುದಾಯ, ಕುಲಸ್ವರೂಪ, ಸ್ವನಿರೂಪಣೆ ಮತ್ತು ಅವು ನಿರ್ದಿಷ್ಟ ಸೀಮೆಯಲ್ಲಿ ಸ್ಥಳೀಕರಣಗೊಳ್ಳುವ ರೀತಿ – ಇವು ವ್ಯಕ್ತವಾಗುವ ಮತ್ತು ಬದಲಾಗುವ ವಿಧಾನಗಳನ್ನು ಗ್ರಹಿಸುತ್ತವೆ. ಇದಕ್ಕಿಂತಲೂ ಮುಖ್ಯವೆಂದರೆ ಆ ಚಿಂತನೆಯು ದಕ್ಷಿಣ ಏಶಿಯಾದಲ್ಲಿ ಗುರುತಿಸಲಾಗುವ ‘‘ಸಂವಹನಾಹೀನತೆ’’ಯನ್ನು, ಅಂದರೆ, ಈ ಭಾಗದ ಬರಹಗಾರರ ಬಹುಭಾಷಾಸಾಮರ್ಥ್ಯ ಮತ್ತು ಉತ್ಸಾಹಗಳು



ಆಧುನಿಕತೆಯಿಂದುಂಟಾದ ಏಕಭಾಷೀಕರಣದಿಂದ ನಷ್ಟವಾಗಿರುವ ಸನ್ನಿವೇಶವನ್ನು, ಸಮರ್ಥವಾಗಿ ಗುರುತಿಸಿ ಆ ದಿಕ್ಕಿನ ಬೆಳವಣಿಗೆಯ ನಕ್ಷೆಯನ್ನು ಹುಡುಕುತ್ತದೆ. ಆದರೆ, ಅದೇ ಹೊತ್ತಿಗೆ ಅವರು, ಈ ಭಾಗದ ಜಗತ್ತಿನ ದೇಶಭಾಷಾನಿರ್ಮಾಣದ ಪ್ರಕ್ರಿಯೆಯನ್ನು ವಿವರಿಸಲು ಮಾತ್ರ, ಈಗಾಗಲೇ ಸಿದ್ಧವಾಗಿ ಲಭ್ಯವಿರುವ ಮತ್ತು ಬಹುಕಾಲದಿಂದ ಪ್ರಶ್ನಿತವೇ ಆಗದೆ ಉಳಿದಿರುವ ಕೆಲವು ದೃಷ್ಟಿಕೋನಗಳನ್ನು ಎತ್ತಿಕೊಳ್ಳುತ್ತಾರೆ. ಈ ವಿಷಯದ ಬಗ್ಗೆ ಬರೆದಿರುವ ಎಲ್ಲ ಪಂಡಿತರಂತೆಯೇ ಕವಿರಾಜ್ ಅವರೂ ‘‘ಆಗಷ್ಟೇ ಉದ್ಭವಿಸುತ್ತಿದ್ದ ದೇಶಭಾಷೆಗಳು ಉನ್ನತವಾದ ಸಂಸ್ಕೃತ ಪರಂಪರೆಯಿಂದ ಕ್ರಮೇಣ ಪ್ರತ್ಯೇಕಗೊಳ್ಳುತ್ತ ಬಂದ ಪ್ರಕ್ರಿಯೆಯನ್ನು’’ ನೇರವಾಗಿ ‘‘ಧಾರ್ಮಿಕ ಬೆಳವಣಿಗೆಗಳಿಗೆ’’ ಗಂಟು ಹಾಕುತ್ತಾರೆ; ಈ ಧಾರ್ಮಿಕ ಚಳುವಳಿಗಳು ಸಂಸ್ಕೃತ ಸಂಪ್ರದಾಯಕ್ಕೆ ವಿರುದ್ಧವಾಗಿದ್ದು ದೇಶಭಾಷಾ ಸಾಹಿತ್ಯಗಳೂ ಆ ಸಂಪ್ರದಾಯದ ವಿರುದ್ಧ ‘‘ಅಘೋಷಿತ ಕ್ರಾಂತಿ’’ಯನ್ನೇ ನಡೆಸಿದವೆಂದು ಹೇಳುತ್ತಾರೆ. ಮತ್ತು ‘‘ದೇಶಭಾಷೆಗಳ ಹುಟ್ಟಿನ ಪ್ರಕ್ರಿಯೆಯು, ಬ್ರಾಹ್ಮಣರೂಪದ ಶಾಸ್ತ್ರೀಯ ಹಿಂದುವಾದದ ಒಳಗೇ ನಡೆದ ಒಂದು ಸೈದ್ಧಾಂತಿಕ ದಂಗೆಯೊಂದಿಗೆ ತಳುಕು ಹಾಕಿಕೊಂಡಂತೆ ಕಾಣುತ್ತದೆ’’ ಎಂದು ಅಭಿಪ್ರಾಯಪಡುತ್ತಾರೆ.[೨೫]

ನಿಜವಾಗಿ, ಇಂಥ ಸಾಧಾರಣೀಕೃತ ತೀರ್ಮಾನಕ್ಕೆ ಬೆಂಬಲವಾಗಿ ಸಿಗುವ ಸಾಕ್ಷ್ಯ ಮಾತ್ರ ತುಂಬ ಕಡಿಮೆಯೇ; ಹಾಗಿದ್ದರೂ ಇದು ಸಾರ್ವತ್ರಿಕವಾಗಿ ಒಪ್ಪಿತವಾಗಿಬಿಟ್ಟಿದೆ. ದಕ್ಷಿಣ ಏಶಿಯಾದ ಇತಿಹಾಸದಲ್ಲಿ ಧಾರ್ಮಿಕ ರೂಢಿಗೂ ಮತ್ತು ಭಾಷೆಯ ಆಯ್ಕೆಗೂ ನಡುವೆ ಕೆಲವು ಸಂಬಂಧಗಳನ್ನು ಕಾಣಬಹುದು – ಎನ್ನುವುದನ್ನು ನಿರಾಕರಿಸಲಾಗದು. ಬುದ್ಧನ ಮಾತುಗಳನ್ನು ಸಂಸ್ಕೃತ ಭಾಷೆಯಲ್ಲಿ ಗ್ರಂಥಸ್ಥಗೊಳಿಸುವುದಕ್ಕೆ ಎದ್ದ ಪ್ರತಿರೋಧ ಅಥವಾ ಜೈನರು ತಮ್ಮ ಧರ್ಮಗ್ರಂಥಗಳನ್ನು ಬರೆಯಲು ಪೂರ್ವದ ಪ್ರಾಕೃತವನ್ನೇ ಹೆಚ್ಚು ಅಪೇಕ್ಷಿಸಿದ್ದು – ಇವು ಆದಿಕಾಲದಲ್ಲೇ ದೊರೆಯುವ ಇಂಥ ಸಂಬಂಧದ ಪರಿಚಿತ ದೃಷ್ಟಾಂತಗಳು. ಆದರೆ, ಎರಡನೆಯ ಸಹಸ್ರಮಾನದ ಆರಂಭದ ಸಮಯಕ್ಕಾಗಲೇ ಇಂಥ ಸಂಬಂಧವು ಸಾಕಷ್ಟು ಅಳಿಸಿಹೋಗಿತ್ತು. ಅಷ್ಟರಲ್ಲಿ ಸಂಸ್ಕೃತವು ಕೇವಲ ಬ್ರಾಹ್ಮಣವರ್ಗದ ಆಸ್ತಿಯೆನ್ನುವ ಕಲ್ಪನೆ ಬದಲಾಗಿ ಬಹುಕಾಲ ಕಳೆದಿತ್ತು; ಆಗ ಬ್ರಾಹ್ಮಣರು ತಮ್ಮ ಸಾಹಿತ್ಯವನ್ನು ಸಂಸ್ಕೃತೇತರ ಭಾಷೆಗಳಲ್ಲಿ, ಅಪಭ್ರಂಶ ಮತ್ತು ಕನ್ನಡದಲ್ಲಿಯೂ ಕೂಡಾ, ಅಭಿವ್ಯಕ್ತಿಸಲು ಆರಂಭಿಸಿದ್ದರು. ಒಟ್ಟಿನಲ್ಲಿ, ಆಧುನಿಕಪೂರ್ವ ದಕ್ಷಿಣ ಏಶಿಯಾದ ಸನ್ನಿವೇಶದಲ್ಲಿ, ಈ ಭಾಷಾ ಆಯ್ಕೆಯ ಧಾರ್ಮಿಕ ಹಿನ್ನೆಲೆಯ ಸಂಬಂಧವನ್ನು ತುಸು ಅತಿಯಾಗಿಯೇ ಉತ್ಪ್ರೇಕ್ಷಿಸಲಾಗಿದೆ. ಅದರಲ್ಲೂ ‘ಭಕ್ತಿ’ ಚಳುವಳಿಯೆಂದು ಹೆಸರಾದ, ಧಾರ್ಮಿಕ ಚಿಂತನವಿಧಾನದಲ್ಲಿಯೇ

ನಡೆದ ಕ್ರಾಂತಿಯೆಂದು ಕರೆಯಲಾಗುವ ನಿರ್ದಿಷ್ಟ ಸಂದರ್ಭದಲ್ಲಿ ಇಂಥ ಉತ್ಪ್ರೇಕ್ಷೆ ಇನ್ನೂ ಹೆಚ್ಚಾಗಿದೆ. ನಮಗೆ ಸಿಗುವ ಪುರಾವೆಗಳ ಪ್ರಕಾರ ಈ ಭಕ್ತಿಚಳುವಳಿಯು ದಕ್ಷಿಣ ಏಶಿಯಾದ ದೇಶಭಾಷಾನಿರ್ಮಿತಿಗೆ ಮುಖ್ಯವಾದ ಪ್ರೇರಣೆ ಅಥವಾ ಅದೇ ಪ್ರಾಥಮಿಕವಾದ ಕಾರಣ ಎನ್ನಲು ಅಸಾಧ್ಯ. ಉತ್ತರಭಾರತದ ಕೆಲವು ದೇಶಭಾಷೆಗಳು ಮೊದಲ ಬಾರಿಗೆ ಲಿಖಿತ ಸಾಹಿತ್ಯಕ್ಕೆ ಬಳಕೆಯಾಗಲು ತೊಡಗಿದ್ದು ಸಂಪೂರ್ಣವಾಗಿ ಇಂಥ ಬ್ರಾಹ್ಮಣ ಪರಂಪರೆಗಿಂತ ಬೇರೆಯೇ ಆಗಿ: ಉದಾಹರಣೆಗೆ, ಪಶ್ಚಿಮದಲ್ಲಿ ಹಿಂದುಯಿ ಭಾಷೆಯು ಕ್ರಿ.ಶ. ೧೧೦೦ರಲ್ಲಿ ಲಾಹೋರಿನ ಮಸೂದ್ ಸೈದ್ ಸಲ್ಮಾನ್‌ನಿಂದ ಬಳಸಲ್ಪಟ್ಟಿತು; ಅವಧಿ ಭಾಷೆಯು ೧೪ನೆಯ ಶತಮಾನದ ತುದಿಗೆ ಪೂರ್ವದ ಜೌನ್‌ಪುರದಲ್ಲಿ ಮೌಲಾನಾ ದೌಡ್‌ನಿಂದ ಬಳಕೆಯಾಯಿತು. ಇನ್ನೂ ಹಲವು ದೇಶಭಾಷೆಯ ಆರಂಭಗಳು ಯಾವುದೇ ಧಾರ್ಮಿಕ ಭಕ್ತಿಪಂಥಗಳಿಗೆ ಏನೂ ಸಂಬಂಧ ಕಾಣಿಸುವುದಿಲ್ಲ – ಆರಂಭದ ಬ್ರಜಭಾಷೆಯು ವಿಷ್ಣುದಾಸನ ಬರಹಗಳಲ್ಲಿ ಸಾಹಿತ್ಯಕ ನುಡಿಗಟ್ಟಾಗಿ ಹರಳುಗಟ್ಟಿದ್ದು ಗ್ವಾಲಿಯರ್‌ನ ತೋಮಾರ್‌ರ ಆಶ್ರಯದಲ್ಲಿ ಮತ್ತು ಸ್ಟುವರ್ಟ್ ಮೆಕ್‌ಗ್ರೆಗೋರ್ ಎಚ್ಚರಿಕೆಯಿಂದ ಗುರುತಿಸಿ ತೋರಿಸಿರುವಂತೆ, ಈತನ ದೇಶಭಾಷಾ ಮಹಾಕಾವ್ಯಗಳಿಗೂ ಭಕ್ತಿಗೂ ಏನೂ ಸಂಬಂಧವಿಲ್ಲ (ಮೆಕ್‌ಗ್ರೆಗೋರ್, ಎನ್.ಡಿ). ಸಂಸ್ಕೃತ ಮಹಾವಿಶ್ವದ ಪಶ್ಚಿಮ ತುದಿಯ ಬಗ್ಗೆಯೂ ಇದೇ ಮಾತು ಅನ್ವಯಿಸುತ್ತದೆ – ೧೪-೧೫ನೆಯ ಶತಮಾನದ ಗುಜರಾತಿಯ ಆರಂಭದ ಪಠ್ಯಗಳಲ್ಲಿ ಭಾಲನ್‌ನ ಆಸ್ಥಾನಕಾವ್ಯ 'ಕಾದಂಬರಿ'ಯೂ 'ಫಗು', 'ವಸಂತವಿಲಾಸ' ಎಂಬ ಶೃಂಗಾರಪೂರಿತ ಅನಾಮಿಕ ಲೇಖಕನ ಕೃತಿಗಳೂ ಸೇರುತ್ತವೆ. ಪೂರ್ವದ ತುದಿಯಲ್ಲಿ ಜಾವಾದ 'ಕಕವಿನ್ಸ್'ನಂತಹ ರಾಜಕೀಯ ಅನ್ಯೋಕ್ತಿಯ ಬರವಣಿಗೆಗಳು ಕಾಣಸಿಗುತ್ತವೆ.

ಕನ್ನಡದ ಸಂದರ್ಭದಲ್ಲಿಯೂ ಕೂಡಾ ದೇಶಭಾಷಾನಿರ್ಮಾಣಕ್ಕೆ ಧಾರ್ಮಿಕ ಕಾರಣಗಳನ್ನು ಸೂಚಿಸುವ ರೂಢಿ ಪಂಡಿತವಲಯಗಳಲ್ಲಿ ಅವ್ಯಾಹತವಾಗಿ ನಡೆದಿದೆ. ಆದರೆ ಇಲ್ಲಿ ಅಂಥ ಕಾರಣವೆಂದು ಸೂಚಿತವಾಗಿರುವುದು ಭಕ್ತಿಯಲ್ಲ; ಈಗೊಂದು ತಲೆಮಾರಿನ ಹಿಂದೆ ಪಂಡಿತರೊಬ್ಬರು ಜೈನರ ಧಾರ್ಮಿಕ ನಂಬಿಕೆ ಇದಕ್ಕೆ ಕಾರಣವೆಂದೂ "ಆ ಧರ್ಮದ ಸ್ಥಾಪಕ ಜನವರ್ಗದ ಬೋಧನೆಗೆ ದೇಶಭಾಷೆಗಳನ್ನು ಬಳಸುವುದೇ ಯುಕ್ತ ಎಂದು ಹೇಳಿರುವುದು" ಅದಕ್ಕೆ ಪ್ರೇರಣೆಯಾಯಿತೆಂದೂ ಸೂಚಿಸಿದ್ದಾರೆ (ಅಲ್ಟೇಕರ್ ೧೯೬೦ಬಿ, ೩೧೪). ಆದರೆ, ಕ್ರಿ.ಪೂ. ೩೦೦ರಿಂದಲೂ ಜೈನರು ಕರ್ನಾಟಕದಲ್ಲಿ ವಾಸಿಸುತ್ತಿದ್ದು ಅವರ ಇಂಥ ಧೋರಣೆಯು ಸಾಹಿತ್ಯಕ್ಕೆ ಸಂಬಂಧಿಸಿದಂತೆ ರೂಢಿಗೊಳ್ಳಲಿಕ್ಕೆ ಯಾಕೆ ಒಂದು ಸಹಸ್ರ ವರ್ಷ ಹಿಡಿಯಿತು – ಎಂಬುದು ಇಲ್ಲಿ ಒಗಟಾಗಿಯೇ ಉಳಿಯುತ್ತದೆ.



ಇನ್ನೂ ಒಗಟಿನ ಇನ್ನೊಂದು ಸಂಗತಿಯೆಂದರೆ, ಕನ್ನಡ ಸಾಹಿತ್ಯವು ಕಡೆಗೊಮ್ಮೆ ಇತಿಹಾಸವನ್ನು ನಿರ್ಮಿಸಿ ಮೇಲೆದ್ದು ಬಂದ ಕ್ಷಣದಲ್ಲೇ, ಜೈನರ ಮಹತ್ವದ ಧಾರ್ಮಿಕ ಕವಿಗಳಾದ – ಅವರ ಧಾರ್ಮಿಕ ನಂಬಿಕೆಯ ಬಗ್ಗೆ ಯಾವುದೇ ಅನುಮಾನಕ್ಕೆ ಆಸ್ಪದ ಇಲ್ಲದಂಥ – ಜಿನಸೇನ ಮತ್ತು ಗುಣಭದ್ರರು (ಕ್ರಿ.ಶ. ೮೫೦-೯೦೦) ತಮ್ಮ 'ಮಹಾಪುರಾಣ'ಕ್ಕೆ ಯಾಕೆ ಸಂಸ್ಕೃತವನ್ನು ಆಯ್ದುಕೊಂಡರು ಎಂಬುದು. ಅಷ್ಟೇ ಅಲ್ಲ, ವೇಮುಲವಾಡ ಆಸ್ಥಾನದಲ್ಲಿ ಪಂಪನ ಸಮಕಾಲೀನನಾಗಿದ್ದ ಜೈನ ಆಚಾರ್ಯ ಸೋಮದೇವಸೂರಿ ('ಯಶಸ್ತಿಲಕಚಂಪೂ'ವಿನ ಲೇಖಕ) ತನ್ನ ಲೌಕಿಕ ಕಾವ್ಯಕ್ಕೂ ಸಂಸ್ಕೃತವನ್ನೇ ಆಯ್ದುಕೊಂಡ.

ಕನ್ನಡದ ಆರಂಭದ ಕವಿಗಳಲ್ಲಿ ಹಲವರು ಜೈನರು, ಆದರೆ ಕೆಲವರು ನಿಶ್ಚಯವಾಗಿಯೂ ಜೈನರಲ್ಲ. ಅಂಥ ಒಬ್ಬ ಲೇಖಕ – ಪಶ್ಚಿಮ ಚಾಲುಕ್ಯರ (೧೧ನೆಯ ಶತಮಾನದ ತುದಿ) ಆರನೆಯ ವಿಕ್ರಮಾದಿತ್ಯನಿಗೆ ಧಾರ್ಮಿಕ ಕಾರ್ಯಗಳಿಗಾಗಿ ನಿಯುಕ್ತನಾದ ಒಬ್ಬ ಬ್ರಾಹ್ಮಣ ಸಚಿವ – ಒಂದು ಮೀಮಾಂಸೆಯ ಶಿಕ್ಷಣಸಂಸ್ಥೆಗೆ (ಒಬ್ಬ 'ಪ್ರಾಭಾಕರಸ್ಯ ವ್ಯಾಖ್ಯಾನಶಾಲಾ' – ಅಂದರೆ, ಅತ್ಯಂತ ಆಸ್ತಿಕ ಸ್ವರೂಪದ ಸಂಸ್ಥೆ ಇದು) ಭೂದತ್ತಿಯನ್ನು ಕೊಟ್ಟಾಗ ಆ ಪ್ರಶಸ್ತಿಪತ್ರವನ್ನು ಆತ ಅರ್ಧ ಕನ್ನಡದಲ್ಲೂ ಅರ್ಧ ಸಂಸ್ಕೃತದಲ್ಲೂ ಬರೆದ (ಎಇ ೧೫, ೩೪೮ ಎಫ್‌ಎಫ್) ಎನ್ನುವುದು ಕೇವಲ ಕಾಕತಾಳೀಯವಲ್ಲ. ಜೈನ ಲೇಖಕರಲ್ಲೂ ಕೂಡಾ ಕೆಲವರು ಜೈನಬ್ರಾಹ್ಮಣರಾಗಿದ್ದರು (ಇದು ದಕ್ಷಿಣದ ದಿಗಂಬರ ಶಾಖೆಗೆ ಅತ್ಯಂತ ವಿಶಿಷ್ಟವಾದ ಒಂದು ಸಂಗತಿ), ಅವರಲ್ಲಿ ಪಂಪ (ನೋಡಿ – ವಿಕ್ರಮಾರ್ಜುನವಿಜಯ ೧೪.೪೯) ಮತ್ತು ಒಂದನೆಯ ನಾಗವರ್ಮ(ಕಾವ್ಯಾವಲೋಕನಮ್ ೯೬೦)ರೂ ಸೇರಿದ್ದರು. ಇವರ ಬಹುಪಾಲು ಬರಹಗಳು ಜೈನಧರ್ಮಕ್ಕೆ ಸಂಬಂಧಿಸಿದ್ದೇನೂ ಅಲ್ಲ. ಇವರಲ್ಲಿ ಕೆಲವರು ಜೈನ ತಾತ್ವಿಕ ಇತಿಹಾಸಗಳನ್ನು ಬರೆದರು, ನಿಜ. ಆದರೆ ಜತೆಗೇ ಅವರು, ಈ ಸಾಹಿತ್ಯ ಸಂಪ್ರದಾಯದ ಮೊದಲ ೩೦೦ ವರ್ಷಗಳಾದ್ಯಂತ ಜೈನವಲ್ಲದ ಆಸ್ಥಾನಚಂಪೂ ಕಾವ್ಯಗಳನ್ನು ಬರೆದರು; ಅದನ್ನು ಜೈನರಲ್ಲದ ತಮ್ಮ ಆಶ್ರಯದಾತರಿಗಾಗಿಯೂ ಬರೆದರು (ಕ್ರಿ.ಶ. ೧೦೦೦ದಲ್ಲಿ ರನ್ನ ತನ್ನ 'ಗದಾಯುದ್ಧ'ವನ್ನು ಬರೆದದ್ದು ಶೈವ ರಾಜಕುಮಾರನಿಗಾಗಿ, ನೋಡಿ – ೧.೨೧). ತನ್ನ ಜಿನಾಗಮ ಕಾವ್ಯ 'ಆದಿಪುರಾಣ'ಕ್ಕಿಂತ ಭಿನ್ನವಾಗಿ ಪಂಪ 'ವಿಕ್ರಮಾರ್ಜುನವಿಜಯ'ವನ್ನು ಲೌಕಿಕಕಾವ್ಯವೆಂದು ಕರೆದುಕೊಂಡಿದ್ದಾನೆ (ವಿಕ್ರಮಾರ್ಜುನವಿಜಯ ೧೪.೬೦). ಇದು ನೇರವಾಗಿ ರಾಜಕೀಯ ದರ್ಶನದಿಂದ ಪ್ರೇರಿತವಾಗಿರುವ ಕೃತಿ ಎಂಬುದನ್ನು ನಾವು ಈ ಹಿಂದೆಯೇ ಗುರುತಿಸಿದ್ದೇವೆ. ಇನ್ನು, 'ಕವಿರಾಜಮಾರ್ಗ' ಅಥವಾ ಮೇಲುವರ್ಗದ ಕೃತಿಯಾದ

'ಕರ್ನಾಟ ಕಾದಂಬರಿ'(ಕ್ರಿ.ಶ. ೧೦೩೦) ಗಳಲ್ಲಿಯಂತೂ ಈ ಅಂಶ ಸ್ಪಷ್ಟವಾಗಿಯೇ ಇದೆ. ಈ ಎಲ್ಲ ಕೃತಿಸಾಕ್ಷ್ಯಗಳು, ಈ ಕಾಲದ ಸಾಹಿತ್ಯಸಂಸ್ಕೃತಿಯಾಗಲೀ ಪ್ರೇಕ್ಷಕವರ್ಗವಾಗಲಿ ಧಾರ್ಮಿಕ ಮೌಲ್ಯಗಳನ್ನೇ ಪ್ರಧಾನವಾಗಿ ಇಟ್ಟುಕೊಂಡದ್ದೇನೂ ಆಗಿರಲಿಲ್ಲ ಎಂಬುದನ್ನು ಒತ್ತಿಹೇಳುವಂತಿವೆ. ಸಾಹಿತ್ಯಕ ಸಂಸ್ಕೃತಿಯುಳ್ಳ ಆಸ್ಥಾನವು ಮುಖ್ಯವಾಗಿ ಹೊಂದಿರಬೇಕಾದ ಒಂದು ಮೌಲ್ಯ ಏನೆಂಬುದನ್ನು ಕವಿರಾಜಮಾರ್ಗವು ಹೀಗೆ ವರ್ಣಿಸುತ್ತದೆ:

> *ನೃಪತುಂಗನ ಬಳಿ ಆತನ ಸಾಹಿತ್ಯ ಸಭೆಯ ಸದಸ್ಯನಾಗಲು ಬಯಸಿ ಹೋಗುವ ಯಾರಿಗೇ ಆದರೂ ಈ ಇಹ ಜಗತ್ತಿನ ಎಲ್ಲ ಸಂಗತಿಗಳ ತಾರತಮ್ಯವಿವೇಕ ವಿರುವುದು ಅಗತ್ಯ. ಜತೆಗೆ, ಜೈನ ಗ್ರಂಥಗಳು, ಪ್ರಮುಖ ವೈದಿಕ ಪ್ರಶ್ನೆಗಳು (ಲೌಕಿಕಸಾಮಯಿಕೂರುವೈದಿಕವಿಶೇಷ) ಕೂಡಾ ಆತನಿಗೆ ತಿಳಿದಿರಬೇಕು. ಪ್ರಮುಖ ಉಕ್ತಿಗಳನ್ನೂ ವಿಶ್ಲೇಷಣೆಗಳನ್ನೂ ಸಾಹಿತ್ಯಜ್ಞಾನಕ್ಕೆ ಸಂಬಂಧಿಸಿದ ಕಲೆಗಳನ್ನೂ ಆತ ಬಲ್ಲವನಾಗಿರಬೇಕು; ಆತನಿಗೆ ಅಸಾಧಾರಣ ಒಳನೋಟ ವಿರಬೇಕು, ಕುಶಲ ನಡಾವಳಿಯಿರಬೇಕು, ಸ್ಪಷ್ಟಚಿಂತನೆಯಿರಬೇಕು, (ಸಾಹಿತ್ಯದ) ಪ್ರತಿಯೊಂದು ವ್ಯಾಖ್ಯೆ ದೃಷ್ಟಾಂತಗಳನ್ನೂ ಆತ ಸಂಪೂರ್ಣವಾಗಿ ವಿಶ್ಲೇಷಿಸಲು ಶಕ್ತನಿರಬೇಕು. (ಕವಿರಾಜಮಾರ್ಗ ೩.೨೯-೨೦)*

ಹೀಗೆ, ಕನ್ನಡ ದೇಶಭಾಷಾನಿರ್ಮಿತಿಯು ಧಾರ್ಮಿಕ ಪ್ರೇರಣೆಗಳಿಂದ ಉದ್ಯುಕ್ತವಾಗಿರಲಿಲ್ಲ ಮಾತ್ರವಲ್ಲ, ಅದು ಯಾವುದೇ ಉಪಯುಕ್ತ ಅರ್ಥದಲ್ಲೂ ಜನಪ್ರಿಯವಾದದ್ದೂ ಆಗಿರಲಿಲ್ಲ. ಸಂಸ್ಕೃತ ಕೋಶ, ವಾಕ್ಯ, ಅಲಂಕಾರಗಳಲ್ಲಿ ವಿವರವಾದ ತರಬೇತಿಯಿರುವುದು ಪೂರ್ವ ಷರತ್ತಾಗಿರುವ ಈ ಸಾಹಿತ್ಯದಲ್ಲಿ ಯಾವುದೇ ಜನಪ್ರಿಯ ಸಂವಹನೆ ನಡೆಯುವುದು ಸಾಧ್ಯವೂ ಇರಲಿಲ್ಲ. ಪಂಪನ ಉದಾಹರಣೆಯಲ್ಲೇ ಕಂಡ ಹಾಗೆ, ಕೆಲವು ಕೃತಿಗಳಂತೂ ತಾವು ರಚಿತವಾಗಿರುವುದೇ ಪಂಡಿತಮಂಡಳಿಗಾಗಿ ಎಂದು ಹೇಳಿಕೊಳ್ಳುತ್ತವೆ.

ಆದ್ದರಿಂದ, ಧಾರ್ಮಿಕ ಅಭ್ಯಾಸ ಶಾಖೆಗಳ ಪೂರ್ವಾಗ್ರಹದಿಂದ ಪ್ರೇರಿತವಾದ ಈ ಪ್ರಚಲಿತ ಅಭಿಪ್ರಾಯಗಳು, ಎರಡನೆಯ ಸಹಸ್ರಮಾನದ ಆರಂಭದ ದಕ್ಷಿಣ ಏಶಿಯಾದ ದೇಶಭಾಷಾನಿರ್ಮಿತಿಯನ್ನು ಅರಿಯಲಿಕ್ಕೆ ಸಹಾಯಕವಲ್ಲ, ಮಾತ್ರವಲ್ಲ, ವಸಾಹತುಪೂರ್ವ ಭಾರತದ ಚಿಂತನೆಗಳನ್ನು ತಿಳಿಯುವಲ್ಲಿ ಕಂಡುಬರುವ ವಿರೂಪವೂ ಹೌದು.[೨೬] ಈ ಪ್ರಕ್ರಿಯೆಗೆ ಸಂಬಂಧಿಸಿ ಒಂದಂತೂ ತುಂಬ ಸ್ಪಷ್ಟ – ಇಲ್ಲಿ ಆಸ್ಥಾನಗಳ ಪಾತ್ರವು ಬಹಳ ಪ್ರಮುಖವಾದದ್ದು. ಐತಿಹಾಸಿಕವಾಗಿ ಪರಿಶೀಲಿಸಲು ನಮಗೆ ಸಾಧ್ಯವಿರುವ ಇಂಥ ಯಾವುದೇ ಉದಾಹರಣೆಯಲ್ಲಾದರೂ ಈ ಮಾತು ಸತ್ಯ, ಕನ್ನಡವಂತೂ ಇದಕ್ಕೆ ಒಂದು ಪ್ರಾತಿನಿಧಿಕ ದೃಷ್ಟಾಂತವೆನ್ನುವಂತಿದೆ. ವಿಶ್ವಾತ್ಮಕತೆಯನ್ನು ರೂಢಿಸಿಕೊಂಡ ಇಂಥ ದೇಶಭಾಷೆಯ ಉಚ್ಚವರ್ಗದ ವ್ಯಕ್ತಿಗಳೇ –



ಉದಾಹರಣೆಗೆ ಪಂಪನಂಥವರು, ಸಂಸ್ಕೃತದ ಸಂಪೂರ್ಣ ಸಿದ್ಧಿಯನ್ನು ಪಡೆದುಕೊಂಡು, ಪದವಿಪ್ರತಿಷ್ಠೆಗಳನ್ನು ಪಡೆದು, ರಾಜರಿಂದ ತಮ್ಮ ಕೆಲಸಕ್ಕಾಗಿ ಸಂಭಾವನೆ ಗಳಿಸಿ, ಎಲ್ಲ ಅಧಿಕಾರ ಮತ್ತು ವೈಭವಗಳನ್ನು ಅನುಭವಿಸುತ್ತ (ವಿಕ್ರಮಾರ್ಜುನವಿಜಯ ೧೩.೪೯ ಎಫ್‌ಎಫ್), ತಮ್ಮ ಸಮಾನಸ್ಕಂಧರ ನಡುವೆ, ಅವರಿಗಾಗಿ ಕಾವ್ಯವನ್ನು ಬರೆಯುತ್ತಿದ್ದ ಇಂಥ ವ್ಯಕ್ತಿಗಳೇ – ಕನ್ನಡದಂಥ ಭಾಷೆಗಳನ್ನು (ತೆಲುಗು, ಮಲೆಯಾಳಿ, ಬ್ರಜ, ಅಸ್ಸಾಮಿ ಮೊದಲಾಗಿ) ರಾಜಕೀಯ ಮತ್ತು ಸಾಹಿತ್ಯಕ ಅಭಿವ್ಯಕ್ತಿಗೆ ತಕ್ಕುದಾಗಿ ರೂಪಾಂತರಿಸಿದರು; ಅಂಥವರೇ ಈ ಮುಂದಿನ ಅರ್ಧ ಸಹಸ್ರಮಾನದ ಕಾಲ ಆಯಾ ಭಾಷೆಯ ಸಾಹಿತ್ಯಕ ಮತ್ತು ಭಾಷಾಶಾಸ್ತ್ರೀಯ ಗ್ರಂಥಗಳನ್ನು ರಚಿಸುವವರೂ ಆಗಿ ಮುಂದುವರೆದರು. ಹಾಗಿದ್ದರೂ, ಇನ್ನೂ ನಾವು ಅರಿಯಬೇಕಿರುವಂಥ ಸಂಗತಿಯೆಂದರೆ, ರಾಜತ್ವದ ಸ್ವಪ್ರಜ್ಞೆಗೆ ಈ ಆಸ್ಥಾನಸಾಹಿತ್ಯವು ಹೇಗೆ ಸಹಾಯಕವಾಯಿತು ಎಂಬುದು ಮತ್ತು ಇವೆಲ್ಲವೂ ಅದೇ ಕಾಲದಲ್ಲಿ ಯಾಕೆ ಚಾಲ್ತಿಗೆ ಬಂದವು ಎನ್ನುವುದು.

ಸಮಕಾಲೀನ ಸಮಾಜಶಾಸ್ತ್ರೀಯ ಸಿದ್ಧಾಂತಗಳಿಂದ ಲಭ್ಯವಾಗುವ ಸಾಮಾನ್ಯ ಜ್ಞಾನ ನಮಗೇನು ಹೇಳುತ್ತದೆಯೆಂದರೆ – ನಾವಿಲ್ಲಿ ಕಾವ್ಯ ಮತ್ತು ರಾಜ್ಯಗಳ ನಡುವಿನ ಸಂಬಂಧದಲ್ಲಿರುವ ತಾಂತ್ರಿಕ ಕಾರಣಗಳನ್ನು ಹುಡುಕಿಕೊಳ್ಳಬೇಕು ಎಂದು. ಅಂಥ ಸಿದ್ಧಾಂತಗಳ ಪ್ರಕಾರ ನಾವು ಮುನ್ನಡೆಯುವುದಾದರೆ, ಭಾಷೆಯನ್ನು ವ್ಯಾಕರಣದ ಮೂಲಕ ಮತ್ತು ಸಾಹಿತ್ಯರಚನಾರೂಢಿಗಳ ಮೂಲಕ ಏಕೀಕರಣಗೊಳಿಸಬೇಕೆನ್ನುವ ಆಶಯವು, ರಾಜಕೀಯ ಏಕೀಕರಣದ ಆಶಯಕ್ಕೆ ಆಪ್ತವಾಗಿ ಕೂಡಿಕೊಂಡಿದೆ – ಎಂದು ತಿಳಿಯಬೇಕು. ಕಾರಣ, ಭಾಷೆಯ ಮೇಲಿನ ಹತೋಟಿಯು ಆ ಭಾಷೆಯನ್ನು ಬಳಸುವವರ ಮೇಲಿನ ನಿಯಂತ್ರಣವೂ ಹೌದು. ಸರಳವಾಗಿ ಹೇಳುವುದಾದರೆ, ರಾಜಕಾರಣಿಗಳು ಮತ್ತು ವೈಯಾಕರಣಿಗಳು ಕಾಣುವ ದರ್ಶನ ಒಂದೇ (ಬೋರ್ದೋ ೧೯೯೧, ೪೩-೬೫; ಫೇಬಿಯನ್ ೧೯೮೬, ೮). ಈ ಪ್ರಮೇಯವನ್ನಿಟ್ಟುಕೊಂಡು ಹೊರಟರೆ, ನಾವು ಕನ್ನಡ ದೇಶಭಾಷಾ ನಿರ್ಮಿತಿಯು ಸಂಭವಿಸುತ್ತಿರುವ ಈ ರಾಷ್ಟ್ರಕೂಟ ಮತ್ತು ಪಶ್ಚಿಮ ಚಾಲುಕ್ಯ ಜಗತ್ತಿನಲ್ಲಿ, ಹೊಸ ರಾಜಕೀಯ ವಿದ್ಯಮಾನವೊಂದು ಜರುಗುತ್ತಿದೆ ಎಂದು ಭಾವಿಸಿಕೊಂಡು ಗಮನಿಸಬೇಕಾಗುತ್ತದೆ. ನಿಜ, ಮೊದಲ ಸಹಸ್ರಮಾನದ ತುದಿಗೆ ದಕ್ಷಿಣ ಏಶಿಯಾದಲ್ಲಿ ಹೊಸ ರಾಜಕೀಯ ಪ್ರಸ್ಥಾನವೊಂದು ಉದ್ಭವಿಸಿದೆ. ಹಳೆಯ, ಅಂದರೆ ಈ ಮೊದಲಿನ ಸಹಸ್ರ ವರ್ಷಗಳ ಲಕ್ಷಣವಾಗಿದ್ದ, ಪ್ರಾಂತ್ಯಾಂತರವ್ಯಾಪ್ತಿಯ ಜನಾಂಗಾತೀತ ಸ್ವರೂಪದ ಆಡಳಿತವೂ ಸಾಮ್ರಾಜ್ಯತತ್ವವನ್ನಾಧರಿಸಿದ ರಾಜ್ಯವೂ ಈಗ ಪಲ್ಲಟಗೊಳ್ಳುತ್ತಿದೆ; ಅದಕ್ಕಿಂತ

ಪ್ರಾಯಶಃ ಭಿನ್ನವಾಗಿರುವ, ದೇಶಿರಾಜ್ಯಗಳೆಂದು ಕರೆಯಬಹುದಾದ ಲಕ್ಷಣಗಳು ಈಗ ಕಾಣಿಸಿಕೊಳ್ಳುತ್ತಿವೆ.[೨೭] ಈ ವ್ಯವಸ್ಥೆಯು ಕೇಂದ್ರವಲಯದಿಂದ ಆಚೆಗಿನ ವಿಶಾಲವ್ಯಾಪ್ತಿಯ ಸತತ ನಿಯಂತ್ರಣವನ್ನು ಬಯಸುತ್ತಿಲ್ಲ, ಅದರ ಕೇಂದ್ರವಲಯವು ಈಗ ಕ್ರಮೇಣ ಆಯಾ ಭಾಷೆಯ ಮತ್ತು ಸಂಸ್ಕೃತಿಯ ವಲಯದೊಂದಿಗೆ ಕೂಡಿಕೊಳ್ಳಲಾರಂಭಿಸಿದೆ. ಆಯಾ ರಾಜ್ಯವು ತನ್ನ ಸಾಂಸ್ಕೃತಿಕ ರಾಜಕಾರಣದ ರೂಢಿಗಳಿಂದ ನಿರ್ಮಿಸಿಕೊಂಡಂಥ ಹೊಸ ವಲಯ ಇದು ಮತ್ತು ಈ ಸಾಂಸ್ಕೃತಿಕ ವಲಯವೇ ಆಗಲಿ, ರಾಜಕೀಯ ವಲಯವೇ ಆಗಲಿ ಕಲ್ಪನೆಯಲ್ಲೂ ಇನ್ನೂ ಅಸ್ಪಷ್ಟವಾಗಿರುವಂಥದು; ನಿಜವಾಸ್ತವದ ನೆಲದ ಮೇಲಂತೂ ಹೇಗೂ ಇದು ಅಸ್ಪಷ್ಟವೇ.

ಮಧ್ಯಕಾಲೀನ ಭಾರತದಲ್ಲಿ ಕಡೆಕಡೆಗೆ, ನಾವು ಕಲ್ಪಿಸಿಕೊಳ್ಳಬಹುದಾದಂತೆ, ಕಿರುರಾಜ್ಯಗಳು ಪ್ರಾಂತ್ಯಾತೀತ ಸಾಮ್ರಾಜ್ಯಗಳನ್ನು – ಯಾ ಅಂಥ ಪ್ರಾಂತ್ಯಾತೀತತೆಯ ಕನಸುಗಳಿದ್ದ ಸಾಮ್ರಾಜ್ಯಗಳನ್ನು – ಪಲ್ಲಟಗೊಳಿಸಿ ಪ್ರಾದೇಶಿಕ ಆಡಳಿತದ ವಾಸ್ತವವನ್ನು ರೂಢಿಗೊಳಿಸಲು ತೊಡಗಿದವು. ಒಂಬತ್ತನೆಯ ಶತಮಾನದ ಕನ್ನಡನಾಡಿನ ಅರಸ ನೃಪತುಂಗನಿಂದ ಆರಂಭಿಸಿ ಹನ್ನೊಂದನೆಯ ಶತಮಾನದ ಜಾವಾದ ದೊರೆ ಐರ್ಲಂಗನತನಕ ನಮಗೆ ಕಾಣುವವರೆಲ್ಲ ವಿಶ್ವಪ್ರಭಾವಳಿಯ ಚಕ್ರವರ್ತಿಗಳು ಎನ್ನುವುದಕ್ಕಿಂತ ಹೆಚ್ಚು, ಪ್ರಾಂತೀಯ ಜಗತ್ತಿನಲ್ಲಿ ವಾಸ್ತವವಾಗಿಯೂ ಇರುವ ರಾಜ್ಯಗಳ ಪಾಳೆಯಗಾರರು. ಅದಕ್ಕಾಗಿಯೇ ವಿಶ್ವಾತ್ಮಕ ಅಭಿವ್ಯಕ್ತಿಯ ಸಾಧ್ಯತೆಗಳಿರುವ ಸಂಸ್ಕೃತಕ್ಕೆ ಬದಲು ಇಲ್ಲಿ ನಿಜವಾಗಿಯೂ ಅಸ್ತಿತ್ವದಲ್ಲಿರುವ ಪ್ರಾಂತೀಯ ರಾಜಕೀಯ ಆವರಣವೊಂದನ್ನು ಬಿಂಬಿಸುವ ದೇಶಭಾಷೆಗಳು ಪ್ರಾಬಲ್ಯಕ್ಕೆ ಬಂದದ್ದು. ಆದ್ದರಿಂದಲೇ, ಸಾಹಿತ್ಯ ನಿರ್ಮಿತಿಗಾಗಿ ಇದೇ ಭಾಷೆಯನ್ನು ಆಯ್ದುಕೊಂಡದ್ದು ಆಯಾ ಸ್ಥಳೀಯ ಸಂಸ್ಕೃತಿಗಳನ್ನು ಅಧಿಕೃತಗೊಳಿಸಲಿಕ್ಕಾಗಿ ಮತ್ತು ಅದನ್ನು ವಿಸ್ತರಿಸಲು ಮತ್ತು ಸತತವಾಗಿ ಮುಂದುವರೆಸಲು ಅನುಕೂಲವಾಗುವಂತೆ. ಅಂದರೆ, ಈಗ ಸಾಂಸ್ಕೃತಿಕ ಸಂವಹನೆಯ ಸ್ತರದಲ್ಲಿ, ಸಾಮುದಾಯಿಕ ಸ್ವಪ್ರಜ್ಞೆ ಮತ್ತು ಒಗ್ಗಟ್ಟುಗಳು ಇರುವಂತಹ ರಾಜ್ಯವ್ಯವಸ್ಥೆಯ ಹೊಸ ಅರಿವೊಂದು ಲಭ್ಯವಾಯಿತು – ಎನ್ನಬಹುದು. ಮತ್ತು ಈ ಹೊಸ ದೇಶಭಾಷಾ ಸಾಹಿತ್ಯದ ನಿರ್ದಿಷ್ಟ ಲಕ್ಷಣವೆಂದರೆ, ಅದು, ವಿಶ್ವಾತ್ಮಕ ಸ್ವರೂಪದ ದೇಶಭಾಷೆಯಾಗಿ ಕಾಣಿಸಿಕೊಂಡು, ಆ ಮೂಲಕ ಪ್ರಾಂತ್ಯದ ಮಟ್ಟದಲ್ಲೇ ಸಾಮ್ರಾಜ್ಯಸಂಸ್ಕೃತಿಗೆ ಅಗತ್ಯವಾಗುವ ಲಕ್ಷಣಗಳನ್ನು ಪುನರ್ ಸೃಷ್ಟಿಸುವ ಮತ್ತು ತನ್ನ ಸಾಹಿತ್ಯಕ್ಕೆ ವಿಶ್ವಾತ್ಮಕ ಸ್ವರೂಪವನ್ನು ಸಾಧಿಸಿಕೊಡುವ ಗುರಿಗಳನ್ನು ತೋರ್ಪಡಿಸಿತು.



ಈ ಮಾರ್ಗವನ್ನು ಅನುಸರಿಸುವ ಸಿದ್ಧಾಂತದ ಸಮಸ್ಯೆ, ನಾನು ಮೊದಲೇ ಸೂಚಿಸಿದಂತೆ, ಇದು – ಈ ಪ್ರಕ್ರಿಯೆಯನ್ನು ಅರ್ಥೈಸುವ ವಿಧಾನವು ಸಂಸ್ಕೃತಿ ಮತ್ತು ಅಧಿಕಾರಗಳ (ಅಂದರೆ ಯಾಂತ್ರಿಕ ತರ್ಕ, ವಿಧ್ಯುಕ್ತೀಕರಣ ಯಾ ಸೈದ್ಧಾಂತಿಕ ಆದರ್ಶಗಳನ್ನು ಒಳಗೊಂಡ) ಪರಸ್ಪರ ಸಂಬಂಧವನ್ನು ಕುರಿತ ನಂಬಿಕೆಗಳ ಒಂದು ಸಮುಚ್ಚಯದ ಮೇಲೆ ಆಧರಿಸಿನಿಂತಿದೆ ಮತ್ತು ಈ ನಂಬಿಕೆಗಳು ರೂಪುಗೊಂಡಿರುವುದು ಬಂಡವಾಳಯುಗದ ಸಂದರ್ಭದಲ್ಲಿ(ನೋಡಿ – ಲೆಫೋರ್ಟ್ ೧೯೮೬, ೧೮೧-೨೩೬; ಸ್ಕಾಟ್ ೧೯೯೦, ೭೦-೧೦೭). ಈ ಸಿದ್ಧಾಂತವು ಉದ್ಯುಕ್ತಗೊಳಿಸುವ ತಾತ್ವಿಕ ವಿಧಾನದಲ್ಲಿ, ಭಾಷೆಯೇ ಅಧಿಕಾರವೆಂಬ ಸೀಮಿತಗೊಳಿಸಿದ ಸಮೀಕರಣವೊಂದಿದೆ. ಆದ್ದರಿಂದ ಭಾಷೆ ಮತ್ತು ಅಧಿಕಾರಗಳ ಸಂಬಂಧವು ಗತಕಾಲದಲ್ಲಿ ಬೇರೆ ರೀತಿಯಲ್ಲೇನಾದರೂ ಇತ್ತೇ ಎಂದು ಪ್ರಶ್ನಿಸಲು ಸಾಧ್ಯವಾಗದಂಥ ಸ್ಥಿತಿ ಇಲ್ಲಿ ನಿರ್ಮಾಣವಾಗುತ್ತದೆ. ಈ ಸಮಸ್ಯೆಯನ್ನು ಒಗ್ಗೂಡಿಸಿ ಸಾರ್ವತ್ರಿಕಗೊಳಿಸುವುದು ಸುಲಭದ ಮಾತಲ್ಲ. ಯಾಕೆಂದರೆ, ಆಧುನಿಕತೆಯಿಂದ ನಮಗೆ ಲಭ್ಯವಾಗಿರುವ ತಾತ್ವಿಕ ಪ್ರಮೇಯಗಳನ್ನು – ನಮ್ಮ ಬಳಿ ಈಗ ಇರುವುದು ಇವು ಮಾತ್ರವೇ ಸರಿ – ಇವನ್ನು ಬಳಸದೆಯೇ ಆಧುನಿಕಪೂರ್ವವನ್ನು ಸಿದ್ಧಾಂತೀಕರಿಸುವುದು; ಅಥವಾ ನವ್ಯೋತ್ತರ ಬಿಂದುವಿನಲ್ಲಿ ನಿಂತು ಆಧುನಿಕಪೂರ್ವವನ್ನು ಓದುವುದು; ರಾಷ್ಟ್ರವೆಂಬ ಆಧುನಿಕ ಪರಿಕಲ್ಪನೆಯನ್ನು ಹೊಸ ಪರಿಕಲ್ಪನೆಯಿಂದ ಪಲ್ಲಟಗೊಳಿಸುವುದು ಸಾಧ್ಯವಿಲ್ಲದಿದ್ದರೂ ಕಡೆಯಪಕ್ಷ ಅದರಿಂದ ಬಿಡಿಸಿಕೊಂಡು ಈ ಸಾಂಸ್ಕೃತಿಕ ಸಿದ್ಧಾಂತವನ್ನು ಕಟ್ಟುವುದು – ಇವೆಲ್ಲವೂ ಈ ಸಮಸ್ಯೆಯ ಅಂಗಗಳು. ಆದ್ದರಿಂದ ಇಂಥ ಪ್ರಸ್ಥಾನಗಳನ್ನು ಬಳಸಿಕೊಳ್ಳುತ್ತಲೇ ಅದಕ್ಕೆ ಅನ್ಯವಾಗಿರುವ ಆಧುನಿಕೇತರ-ಪಶ್ಚಿಮೇತರ ಪ್ರಕ್ರಿಯೆಯನ್ನು ಅರಿಯುವುದು ಹೇಗೆ – ಎನ್ನುವುದು ನನಗಿನ್ನೂ ಸ್ಪಷ್ಟವಾಗಿಲ್ಲ. ಸದ್ಯಕ್ಕೆ, ಅದರ ಬದಲು, ಈ ಮುಂಚಿನ ಸಂಸ್ಕೃತ ಮಹಾವಿಶ್ವವನ್ನು ಕುರಿತ ಚರ್ಚೆಯಲ್ಲಿ ನಾನು ಮಾಡಿದ ಹಾಗೆಯೇ, ಈ ಸಾಂಸ್ಕೃತಿಕ ತರ್ಕದ ಭಿನ್ನತೆಯನ್ನು ಸೈದ್ಧಾಂತಿಕವಾಗಿ ಗುರುತಿಸುವುದಷ್ಟೇ ನಾವೀಗ ಮಾಡಬಹುದಾದ ಕೆಲಸ. ಈ ಸಾಂಸ್ಕೃತಿಕ ತರ್ಕದ ಕೇಂದ್ರದಲ್ಲಿ ಸೌಂದರ್ಯಾತ್ಮಕ ಸಂಗತಿಗಳಿವೆ; ದೇಶಭಾಷಾ ಆವರಣದ ವ್ಯಕ್ತಿ-ಸ್ಥಳಗಳನ್ನು ಅನ್ವಯಿಸುವ ಮೂಲಕವೇ ಇದು ವಿಚಿತ್ರವಾದೊಂದು ಹೊಸ ಆತ್ಮಪ್ರಜ್ಞೆಯನ್ನು ಪ್ರಸ್ತುತಪಡಿಸುತ್ತದೆ. ಆದರೆ, ಅಂತಿಮವಾಗಿ ಈ ಯಾವುದೇ ಊಹಾಸಿದ್ಧಾಂತವೇ ಆಗಲಿ, ಪರೀಕ್ಷೆಗೆ ಒಳಪಡಬೇಕಾದದ್ದು ಇನ್ನೂ ಹೆಚ್ಚು ಪ್ರಾಥಮಿಕ ಆಕರಗಳ ಸಂಶೋಧನೆಯ ಮೂಲಕ ಮಾತ್ರವೇ ಸರಿ.[೨೮]

ಹೀಗೆ, ಪಶ್ಚಿಮದ ಆಧುನಿಕತೆಯ ಎದುರಿಗೆ, ದೇಶಭಾಷಾ ರಾಜ್ಯಗಳನ್ನೂ

ಕಾವ್ಯಗಳನ್ನೂ ಅರ್ಥೈಸಲು ಸಮರ್ಥವಾಗಬಲ್ಲ ಮತ್ತು ಐತಿಹಾಸಿಕವಾಗಿ-ಸಾಂಸ್ಕೃತಿಕವಾಗಿ ಸೂಕ್ಷ್ಮ ಸಂವೇದನೆಯನ್ನೂ ಪಡೆದ ಹೊಸ ವಿಧಾನಗಳನ್ನು ಅಭಿವೃದ್ಧಿಪಡಿಸುವುದು – ಇದು ಈ ಇಡೀ ಸಮಸ್ಯೆಯ ಹಲವು ಪ್ರಶ್ನೆಗಳನ್ನೊಳಗೊಂಡ ಸಂಕೀರ್ಣ ಸಮುಚ್ಚಯದಲ್ಲಿ ಒಂದು ಭಾಗ ಮಾತ್ರ. ಆ ವಿಶಾಲ ಪ್ರಶ್ನಾಸಮೂಹವು ನಾನು ಇದುವರೆಗೆ ವಿಶ್ವಾತ್ಮಕ ದೇಶಭಾಷೆಯೆಂದು ಕರೆದ ಇಡೀ ಪ್ರಕ್ರಿಯೆಗೆ ಸಂಬಂಧಿಸಿದ್ದು; ಐತಿಹಾಸಿಕ ಸಂದರ್ಭಗಳಲ್ಲಿ ಅಂಥ ಪ್ರಶ್ನೆಗಳನ್ನು ಅರ್ಥೈಸಬೇಕಾದ ಶಾಸ್ತ್ರೀಯ ಸವಾಲುಗಳನ್ನು ಒಳಗೊಂಡಿರುವಂಥದು.

ಈ ಸಮಸ್ಯೆಯ ವಿಶಾಲಮುಖವೇ – ಆಧುನಿಕಪೂರ್ವ ಜಾಗತೀಕರಣ. ಹಿಂದೊಮ್ಮೆ ''ಭಾರತೀಕರಣ''ವೆಂದು ಕರೆಯಲಾಗುತ್ತಿದ್ದ ಪ್ರಕ್ರಿಯೆಯಲ್ಲಿ, ಮೂಲತಃ, ಗತಕಾಲಗಳು ಪ್ರಾಂತ್ಯತೀತತೆಯನ್ನು ಸಾಧಿಸಿಕೊಂಡ, ಅಂದರೆ ತಮ್ಮ ಸಮೀಪವಲಯವನ್ನು ಮೀರಿ ಸಾಮಾಜಿಕ-ಸಾಂಸ್ಕೃತಿಕ ಮತ್ತು ಭೌತಿಕ ಸಂಬಂಧಗಳನ್ನು ಹರಡಿಕೊಂಡ ಐತಿಹಾಸಿಕ ಕ್ರಮಗಳು ಒಳಗೊಳ್ಳುತ್ತಿದ್ದವು (ಹೆಲೆನೈಸೇಷನ್, ರೋಮನೈಸೇಷನ್, ಸಿನಿಸೈಜೇಷನ್ – ಇವೆಲ್ಲವೂ ಇಂಥದೇ ಪ್ರಕ್ರಿಯೆಗೆ ಕೊಟ್ಟ ಒರಟು ಆದರೆ ಉಪಯುಕ್ತ ನಾಮಕರಣಗಳು). ಇಂಥ ಪ್ರಕ್ರಿಯೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ದೇಶಭಾಷೆಗಳು ತಮ್ಮನ್ನು ತಾವು ನಿರ್ವಚಿಸಿಕೊಳ್ಳುತ್ತಿದ್ದವು. ಈಗಲಾದರೋ, ನಮ್ಮ ಬೌದ್ಧಿಕವಲಯವು ಸಕಾರಣವಾಗಿಯೇ ಜಾಗತೀಕರಣವೆಂಬ ಹೊಸ ಪ್ರಕ್ರಿಯೆಯ ಆಕರ್ಷಣೆಗೆ ಒಳಗಾಗಿದೆ. ಆದರೆ ಜಗತ್ತಿನ ವಿವಿಧ ಭಾಗಗಳ ಆಧುನಿಕಪೂರ್ವ ಜಾಗತೀಕರಣಗಳ ಸಾಮಾಜಿಕ-ಸಾಂಸ್ಕೃತಿಕ ಮುಖಗಳನ್ನು ಕುರಿತು ಎಲ್ಲೂ ಅಭ್ಯಾಸವೇ ಆರಂಭವಾಗಿಲ್ಲ. ಹಳೆಯ ಪ್ರಕ್ರಿಯೆಗಳನ್ನು ಅಭ್ಯಾಸಮಾಡದೆ ಹೊಸತರ ಹೊಸತನವನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಹೊರತು ಅರಿಯಲು ಸಾಧ್ಯವಿಲ್ಲ. ಒಮ್ಮೆ, ರೋಮನ್ ಸಾಮ್ರಾಜ್ಯಕ್ಕೆ ಸಂಬಂಧಿಸಿದ ರೋಮನೀಕರಣವೆಂಬ ಪ್ರಕ್ರಿಯೆಯನ್ನು ಕುರಿತ ವಿದ್ವತ್ ವಿಮರ್ಶೆಗಳ ಕಡೆಗೆ ನೋಡಿ. ಅದೇನೂ ಸಣ್ಣಪುಟ್ಟ ವಿದ್ಯಮಾನವಲ್ಲ. ನನ್ನ ಪ್ರಕಾರ, ಅದು ''ಪಶ್ಚಿಮದ ನಾಗರಿಕತೆ''ಯ ಉಗಮ ಮತ್ತು ನಿರ್ಮಾಣಗಳನ್ನು ಒಳಗೊಂಡ ಸಂಗತಿ. ಹಾಗಿದ್ದರೂ, ರೋಮನ್ ಸಾಮ್ರಾಜ್ಯದ ಇತಿಹಾಸಕಾರರೊಬ್ಬರು ೧೯೯೦ರಲ್ಲಿ ಹೇಳುತ್ತಾರೆ – ರೋಮನೀಕರಣದ ಈ ಪ್ರಕ್ರಿಯೆಯ ''ಕೆಲವು ವ್ಯಕ್ತಲಕ್ಷಣಗಳನ್ನು ಬಿಟ್ಟು ಬೇರಾವುದರ ಬಗ್ಗೆಯೂ ಪಂಡಿತರ ಗಮನ ಹರಿದಿಲ್ಲ'', ಮತ್ತು, ''...ನಂತಹ ಪಂಡಿತಕೃತಿಯಲ್ಲಿಯೂ ಕೂಡಾ ಇಂಥ ಸಾಂಸ್ಕೃತಿಕ ಪಲ್ಲಟಕ್ಕೆ ಪ್ರೇರಣೆ ಏನೆಂಬುದರ ಬಗ್ಗೆ ಕೆಲವೇ ಸಾಲುಗಳ ಉಲ್ಲೇಖ ಇದೆ; ನನ್ನ ಇದುವರೆಗಿನ ಓದಿನಲ್ಲಿ ಈ ಬಗ್ಗೆ



ಇದಕ್ಕಿಂತ ಹೆಚ್ಚು ನನಗೆ ದೊರೆತಿಲ್ಲ'' (ಮ್ಯಾಕ್‌ಮುಲೆನ್ ೧೯೯೦, ೬೦).

ಅಪರೂಪಕ್ಕೆ ಒಮ್ಮೊಮ್ಮೆ ಈ ಜಾಗತಿಕ ಮತ್ತು ಸ್ಥಳೀಯದ ಮುಖಾಮುಖಿಯ ವಿಶ್ಲೇಷಣೆ ನಡೆದಿದೆ, ಆದರೆ, ಅಲ್ಲೆಲ್ಲ ಇವೆರಡನ್ನೂ ಪೂರ್ವನಿಶ್ಚಿತ ಸ್ವರೂಪವುಳ್ಳವೆಂದೂ ಸ್ಪಷ್ಟ ಸಾಂಸ್ಕೃತಿಕ ವೈದೃಶ್ಯಗಳಿರುವ ಸಮೂಹಗಳೆಂದೂ ಗ್ರಹಿಸಲಾಗಿದೆ. ಆ ಪ್ರಕಾರ, ಜಾಗತಿಕವು ಹೊರಗಿನಿಂದ ಹುಟ್ಟಿಬರುವಂಥದು, ಪ್ರಧಾನ ಪರಂಪರೆಯಾಗಿ ಕಾಣಿಸುವಂಥದು; ಸ್ಥಳೀಯವು ಅಲ್ಲೇ ಉದ್ಭವಿಸಿದ್ದು, ಕಿರುಪರಂಪರೆಯಾಗಿ ಇರುವಂಥದು – ಇದು ಏರಿಯಾ ಸ್ಟಡೀಸ್ (ಸ್ಥಳಘಟಕ ಅಧ್ಯಯನ) ತರಗತಿಗಳ ಪ್ರಾಥಮಿಕ ಪಾಠದ ಸವಕಲು ರೂಪ. ಇಂಥ ಅಭ್ಯಾಸಗಳ ದೃಷ್ಟಿಯಲ್ಲಿ ಜಾಗತಿಕ ಮತ್ತು ಸ್ಥಳೀಯಗಳೆರಡೂ ಎದುರುಬದುರಾಗಿ ಪ್ರತಿಕ್ರಿಯಿಸುವ ಸಿದ್ಧವಸ್ತುರೂಪಗಳೆಂಬಂತೆ ಚಿತ್ರಿತವಾಗಿವೆ (ನಾಗರೀಕತೆಯ ಕೆಲವು ವ್ಯಂಗ್ಯಚಿತ್ರರೂಪಿ ವಿವರಣೆಗಳಲ್ಲಿ ಇವು ಪರಸ್ಪರ ''ಬಡಿದಾಡುವ'' ಘಟಕಗಳಾಗಿಯೂ ತೋರಿಸಲ್ಪಟ್ಟಿವೆ); ಸತತವಾಗಿ ಬದಲಾಗು ತ್ತಿರುವ ಸಾಮುದಾಯಿಕ ರೂಢಿಯ ಗುಂಪುಗಳಾಗಿ ಇವನ್ನು ಇಲ್ಲಿ ನೋಡಿಲ್ಲ. ಮತ್ತು ಇವು ಬದಲಾದರೆ ಅದಕ್ಕೆ ಕಾರಣ ಮನುಷ್ಯ ಆಯ್ಕೆಯೆಂದು ಈ ಅಭ್ಯಾಸಗಳು ತಿಳಿಯುವುದಿಲ್ಲ; ಬದಲು, ಇದು ಪ್ರಕೃತಿ ಸಹಜ ಬದಲಾವಣೆಯೆಂಬಂತೆ ಇಲ್ಲಿ ನೋಡಲಾಗಿದೆ.

ತಮ್ಮ ಈಚಿನ ಒಂದು ಲೇಖನದಲ್ಲಿ ಮಾರ್ಷಲ್ ಸಾಹ್ಲಿನ್ಸ್ ಅವರು ೧೯ನೆಯ ಶತಮಾನದ ಆದಿಯಲ್ಲಿ, ಪೆಸಿಫಿಕ್ ವಲಯದಲ್ಲಿ (ಪೂರ್ವ ಏಶಿಯಾ, ಪಾಲಿನೇಶಿಯಾ, ವಾಯವ್ಯ ಪೆಸಿಫಿಕ್‌ಗಳಲ್ಲಿ) ಸಂಭವಿಸಿದ ಇಂಥ ಜಾಗತೀಕರಣ ಮತ್ತು ಸ್ಥಳೀಯತೆಯ ಪ್ರಕ್ರಿಯೆಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಅವರ ವಾದದ ಪ್ರಕಾರ, ಪ್ರಪಂಚದ ವ್ಯವಸ್ಥೆಗಳು ''ಆರ್ಥಿಕ 'ಪರಿಣಾಮ' ಮತ್ತು ಅದಕ್ಕೆ ವ್ಯಕ್ತವಾಗುವ 'ಪ್ರತಿಕ್ರಿಯೆ'ಗಳ ನಡುವಿನ ಸಮಾನುಪಾತದ ಸಂಬಂಧಗಳನ್ನೊಳಗೊಂಡ ಭೌತಶಾಸ್ತ್ರೀಯ ರೂಪದ್ದಲ್ಲ; ಬದಲು, ಜಾಗತಿಕ ಲೌಕಿಕ ಶಕ್ತಿಗಳ ನಿರ್ದಿಷ್ಟ ಪರಿಣಾಮಗಳು ಅವು ಸ್ಥಳೀಯ ಸಾಂಸ್ಕೃತಿಕ ವಿನ್ಯಾಸಗಳಲ್ಲಿ ಪ್ರತಿಫಲಿತವಾಗುವ ರೀತಿಯನ್ನು ಅವಲಂಬಿಸಿರುತ್ತವೆ.'' ಅಂದರೆ, ''ಸ್ಥಳೀಯ ಜನವರ್ಗವು ಪ್ರಪಂಚಪದ್ಧತಿಯ ಅನುಭವಗಳನ್ನು ಬೇರೆಬೇರೆ ರೀತಿಗಳಲ್ಲಿ ತಮ್ಮದೇ ಲೋಕಪದ್ಧತಿಯೊಳಕ್ಕೆ ಒಳಗೊಳ್ಳಿಸಿಕೊಳ್ಳುತ್ತದೆ'' (೧೯೮೮, ೪-೫). ಸ್ಥಳೀಯ ಸಂಸ್ಕೃತಿಯೆಂದರೆ ಅದೊಂದು ಜಡ ಮೇಣದ ಮುದ್ದೆ, ಜಾಗತಿಕದ ಮುದ್ರೆ ಬಿದ್ದು ಅದು ರೂಪಾಂತರಕ್ಕೆ ಒಳಗಾಗುತ್ತದೆ – ಎಂಬ ಪ್ರಚಲಿತ ಪ್ರತಿಮೆಗೆ ಇದೊಂದು ಅತ್ಯಗತ್ಯವಾಗಿದ್ದ ಸ್ವಾಗತಾರ್ಹ ತಿದ್ದುಪಡಿ. ''ಭಾರತೀಯಕರಣ''ವೆಂಬ

ಆಧುನಿಕಪೂರ್ವ ಜಾಗತೀಕರಣದ ಪ್ರಕ್ರಿಯೆಯಲ್ಲಿ ಇಂಥ ಸ್ಥಳೀಯ ಪ್ರತಿಸ್ಪಂದನೆಗಳೇ ಹಲವು ದಶಕಗಳ ಕಾಲ ದಕ್ಷಿಣ ಏಶಿಯಾದ ಆರಂಭದ ವಿದ್ಯಾರ್ಥಿಗಳಿಗೆ ಆಸಕ್ತಿ ಹುಟ್ಟಿಸಿದ ಸಂಗತಿಗಳಾಗಿದ್ದವು ಎನ್ನುವುದು ಇಲ್ಲಿ ಗಮನಾರ್ಹ (ವೋಲ್ಟರ್ಸ್ ೧೯೮೨ – ಇದಕ್ಕೆ ಒಂದು ಒಳ್ಳೆಯ ಉದಾಹರಣೆ).

ಆದರೆ, ಸಾಹ್ಲಿನ್ಸ್‌ನ ವಿವರಣೆಯಲ್ಲಿ ಅಂತರ್ಗತವಾಗಿರುವ ಒಂದು ನಂಬಿಕೆಯೆಂದರೆ – ಸ್ಥಳೀಯ ಸಾಂಸ್ಕೃತಿಕ ರೂಢಿಗಳು ಮತ್ತು ಪ್ರಾದೇಶಿಕ ಜನವರ್ಗಗಳ ಪ್ರಪಂಚ ಪದ್ಧತಿಯು ಖಾಯಮ್ಮಾಗಿ ಸಿದ್ಧವಾಗಿರುವ ಒಂದು ಅಸ್ತಿತ್ವ – ಎನ್ನುವಂಥದು. ಆದ್ದರಿಂದಲೇ ಅವರ ಬರಹದಲ್ಲಿ ೧೮ನೆಯ ಶತಮಾನದ ಚೀನಾದ ಮಂಚು ಚಕ್ರವರ್ತಿಗಳು ಕ್ರಿ.ಶ. ೩ನೆಯ ಶತಮಾನದ ಛಿನ್ ಶಿಹ್ ಹ್ಯುವಾಂಗ್-ಟಿಯ ಪದ್ಧತಿಯನ್ನೇ ಮುಂದುವರಿಸಿಕೊಂಡಿದ್ದಾರೆಂಬ ಹೇಳಿಕೆ ಬರುತ್ತದೆ (ಸಾಹ್ಲಿನ್ಸ್ ೧೯೮೮, ೨೨). ಆದರೆ ನಮಗೆ ತಿಳಿದಿರುವಂತೆ ಅಂಥ ಸ್ಥಳೀಯ ಪದ್ಧತಿಗಳೂ ಸತತವಾಗಿ ಬದಲಾಗುತ್ತ ಹೋಗಿವೆ, ಕೆಲವೊಮ್ಮೆ ಮೂಲಭೂತ ಮಾರ್ಪಾಟುಗಳನ್ನೂ ಮಾಡಿಕೊಂಡಿವೆ. ಸಾಹಿತ್ಯ ಸಂಸ್ಕೃತಿಯ ಕೆಲವು ಅಂಶಗಳು ಚೀನೀ ಪದ್ಧತಿಯಲ್ಲಿ ಬಹುಕಾಲ ಕೇಂದ್ರದಲ್ಲಿದ್ದುದು ನಿಜ – 'ಹೊಸ ಶೈಲಿಯ ಕಾವ್ಯ'ವನ್ನು ಬರೆಯುವ ಸಾಮರ್ಥ್ಯವು ಅಲ್ಲಿ ಸುಂಗ್ ರಾಜವಂಶದ ಕಾಲದಿಂದಲೂ ಸಿವಿಲ್ ಸರ್ವಿಸ್ ಪರೀಕ್ಷೆಗಳಲ್ಲಿ ಉತ್ತೀರ್ಣಗೊಳ್ಳಲು ಅಗತ್ಯವಾದ ಸಂಗತಿಯಾಗಿತ್ತು. ಆದರೆ ಈಗ ನಮಗೆ ತಿಳಿದುಬಂದಿರುವಂತೆ, ಈ ಕಾವ್ಯದ ಆತ್ಯಂತಿಕ ಲಕ್ಷಣಗಳನ್ನು ಅನ್ವೇಷಿಸಲಾಗಿದ್ದು ಟಾಂಗ್ ಕಾಲದಲ್ಲಿ; ಆಗ, ಏಶಿಯಾದ ಆಧುನಿಕಪೂರ್ವ ಜಾಗತೀಕರಣದ ಅಂಗವಾಗಿ ಚಲಾವಣೆಯಲ್ಲಿದ್ದ ದಂಡಿಯ 'ಕಾವ್ಯಾದರ್ಶ'ದಂಥ ಕೃತಿಗಳ ಮೂಲಕ ಸಂಸ್ಕೃತ ಸಾಹಿತ್ಯಮೀಮಾಂಸೆಯನ್ನು ಅಲ್ಲಿಗೆ ಆಮದು ಮಾಡಿಕೊಳ್ಳಲಾಯಿತು (ಮೈರ್ ಮತ್ತು ಮೆಯಿ ೧೯೯೧).

ಅ-ಇತಿಹಾಸಕರಣ ಮತ್ತು ಅದನ್ನಾಧರಿಸಿದ ಸ್ಥಳಕೇಂದ್ರಿತ ಸಿದ್ಧಾಂತಗಳು (ಅಂದರೆ, ಸ್ಥಳೀಯ ಜನಾಂಗಗಳು ಇತಿಹಾಸೀಕರಣದ ಕೊರತೆಯ ತಾತ್ವಿಕ ಕಾರಣದಿಂದ ಅಂಥ ರೂಪದಲ್ಲೇ ಉಳಿದುಕೊಂಡಿವೆಯೆಂಬ ಸಿದ್ಧಾಂತಗಳು) ಇದುವರೆಗೂ ಇಂಥ ಸ್ಥಳೀಯ ಪ್ರಕ್ರಿಯೆಗಳನ್ನು ವಿಶ್ಲೇಷಿಸುವಲ್ಲಿ ಮತ್ತು ಅಲ್ಲಿಯ ನಿರ್ದಿಷ್ಟ ಪ್ರಕಾರಗಳನ್ನು ಅಭ್ಯಾಸ ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದವು. ಉದಾಹರಣೆಗೆ, ಆಗ್ನೇಯ ಏಶಿಯಾಕ್ಕೆ ದಕ್ಷಿಣ ಏಶಿಯಾದಿಂದ ಆದ ಸಾಂಸ್ಕೃತಿಕ ಪ್ರವಾಹದಿಂದ ಸಂಭವಿಸಿದ ಪರಿಣಾಮವನ್ನು ಚರ್ಚಿಸುವ ಬಹುತೇಕ ಬರಹಗಳು – ಅಂಥ ಭಾರತೀಯಕರಣಕ್ಕೆ ಮುಂಚೆ ಏಕೀಕೃತರೂಪದ ಒಂದು ಭಾರತೀಯ ಸಂಸ್ಕೃತಿ



ಆಗಲೇ ರೂಪಿತವಾಗಿಬಿಟ್ಟಿತ್ತು ಎಂಬಂತೆ ಭಾವಿಸುತ್ತವೆ. ಆದರೆ, ಹಾಗಿರಲಿಲ್ಲ; ಆಗ ಇದ್ದದ್ದು ಆಗಷ್ಟೇ ಇನ್ನೂ ರೂಪುಗೊಂಡಿದ್ದ ಕೆಲವು ಸಾಂಸ್ಕೃತಿಕ ಸಂಜ್ಞೆಗಳು ಮತ್ತು ಕ್ರಿಯೆಗಳು ಮಾತ್ರ; ಅವೂ ಕೂಡಾ, ಕೆಲವು, ರೂಪು ಪಡೆದಿದ್ದು ಭಾರತ ಉಪಖಂಡದ ಹೊರಗೆ, ಇನ್ನೊಂದು ಸಂಸ್ಕೃತಿಯ ಸಹಸ್ಪಂದನದ ಜತೆಜತೆಗೇ (ಪ್ರಾಯಶಃ, ಅದಕ್ಕೆ ''ಸಂವಾದಿ''ಯಾಗಿಯೇ; ನೋಡಿ – ಕುಲ್ಕೆ ೧೯೯೦). ಕ್ರಮೇಣ ಇವೆಲ್ಲ ಒಗ್ಗೂಡಲು ಆರಂಭಿಸಿ ವಿಶ್ವಾತ್ಮಕ ಏಕೀಕರಣವೆನ್ನಬಹುದಾದ ರೂಪ ಸಿದ್ಧವಾಯಿತು. ನಿಜವಾಗಿ, ಭಾರತದ ಬಹುಭಾಗವು ಭಾರತೀಯಕರಣಗೊಳ್ಳುತ್ತಿದ್ದುದು ಜಾವಾ ಮತ್ತು ಖ್ಮೇರ್ ದೇಶಗಳು ಆ ಪ್ರಕ್ರಿಯೆಯನ್ನು ಎದುರಿಸುತ್ತಿದ್ದ ಸಮಯದಲ್ಲೇ ಮತ್ತು ಈ ಪ್ರಕ್ರಿಯೆಗೂ ಆ ಪ್ರಕ್ರಿಯೆಗೂ ದೊಡ್ಡ ವ್ಯತ್ಯಾಸಗಳೇನೂ ಇಲ್ಲ. ಮುಂದೆ, ಭಾರತದ ದೇಶಭಾಷಾ ಧೀಮಂತರು, ಸ್ವತಃ ಭಾರತೀಯಕರಣಗೊಂಡು, ಈ ಪ್ರಕ್ರಿಯೆಯನ್ನು ಇನ್ನಷ್ಟು ಮುಂದುವರೆಸಿದರು.

ಅಲ್ಲದೆ, ಸ್ಥಳೀಯ ದೃಷ್ಟಿಕೋನದಿಂದ ನಾವು ಈ ಪ್ರಕ್ರಿಯೆಯನ್ನು ಹೀಗೆ ನೋಡಬೇಕು – ಉದಾಹರಣೆಗೆ, ಸಂಸ್ಕೃತವು ಜಾವಾಕ್ಕೆ ಬಂದ ಸಂಗತಿಯನ್ನೇ ತೆಗೆದುಕೊಳ್ಳಿ, ಅದು ಹಾಗೆ ಬಂದಿದ್ದು ''ಅಷ್ಟರಲ್ಲಾಗಲೇ ರೂಢಿಯಲ್ಲಿದ್ದ ಜಾವಾದ'' ವಾಸ್ತವಗಳನ್ನು ಅಭಿವ್ಯಕ್ತಿಸುವುದಕ್ಕಾಗಿ ಅಲ್ಲ (ಲೊಂಬಾರ್ಡ್ ೧೯೯೦, ೧೩-೧೪). ಅರ್ಥಾತ್, ವಾಸ್ತವವೆನ್ನುವುದು ಭಾಷೆಗಿಂತಲೂ ಮೊದಲೇ ಸಿದ್ಧವಾಗಿ ಇರುವಂಥದಲ್ಲ; ಬಹುತೇಕ ಅದು ಭಾಷೆಯಿಂದಲೇ ರೂಪು ಪಡೆಯುವಂಥದು. ಅಂದರೆ, ಮೊದಲಿಗೇ ಜಾವಾದ ಸ್ವರೂಪ ಎನ್ನುವುದೊಂದು ಇದ್ದು ಅದರ ಮೇಲೆ ಸಂಸ್ಕೃತವು ಬಂದು ಕೂತ ಪ್ರಕ್ರಿಯೆ ಇದಲ್ಲ; ಬದಲು, ಈ ಇಡೀ ಪ್ರಕ್ರಿಯೆಯೇ ಆಯಾ ಸಂದರ್ಭದಲ್ಲೇ ವ್ಯುತ್ಪತ್ತಿಗೊಳ್ಳುತ್ತಿರುವಂಥದು, ಸಂಸ್ಕೃತವೂ ಅಂಥ ವ್ಯುತ್ಪತ್ತಿಯ ಒಂದು ಅಂಶವೇ ಸರಿ. ಆಗ್ನೇಯ ಮತ್ತು ದಕ್ಷಿಣ ಏಶಿಯಾಗಳಲ್ಲಿ ಸಂಸ್ಕೃತ ವಿಶ್ವಾತ್ಮಕತೆಯು ''ಪುರಾತನವಾಗಿದ್ದ ಮತ್ತು ಗಟ್ಟಿಯಾಗಿದ್ದ ಸ್ಥಳೀಯ ರೂಢಿಗಳನ್ನು ಮರಳಿ ಒಗ್ಗೂಡಿಸಿದಂಥ'' (ವೋಲ್ಟರ್ಸ್ ೧೯೮೨, ೯) ಪಾತ್ರಕ್ಕೆ ತೊಡಗಲಿಲ್ಲ. ಅಥವಾ ''ತನ್ನ ಇಡಿಯಲ್ಲಿ ಮತ್ತು ಭಾಗಗಳಲ್ಲಿ ವಿಶಿಷ್ಟತೆಯೊಂದನ್ನು'' ಉಳಿಸಿಕೊಂಡಿರುವಂಥ ಯಾವುದೋ ಒಂದು ''ಸ್ಥಳಜನ್ಯ'' ಸಂಸ್ಕೃತಿಯ ಮೇಲೆ (ರೀಡ್ ೧೯೯೦, ೧) ಪರಿಣಾಮ ಬೀರಲೂ ಇಲ್ಲ. ಅದು ಈ ಸಂಸ್ಕೃತಿಗಳ ಉಗಮದ ಪ್ರಕ್ರಿಯೆಯಲ್ಲಿಯೇ ಭಾಗವಹಿಸಿತು ಮತ್ತು ಅದೇ ಸಂದರ್ಭದಲ್ಲಿ ತಾನೂ ಬದಲಾವಣೆಹೊಂದಿತು.

ಆದ್ದರಿಂದ, ಈ ಮೊದಲು ಹೇಳಿದ ಸಾಹ್ಲಿನ್ಸ್‌ನ ಮುಖ್ಯ ಟೀಕೆಗೆ, ಮತ್ತು ಪ್ರಸ್ತುತ ವಿಶ್ವಾತ್ಮಕ ದೇಶಭಾಷೆಯ ಪ್ರಸ್ತಾಪವೂ ಒಳಗೊಂಡಂತೆ ಭವಿಷ್ಯದಲ್ಲಿ ನಡೆಯಬೇಕಾದ

ಆಧುನಿಕಪೂರ್ವ ಜಾಗತೀಕರಣದ ಸಂಶೋಧನೆಗೆ, ಸೇರಿಸಬೇಕಾಗಿರುವ ಸಂಗತಿ ಇದು – ''ಸ್ಥಳೀಯ'' ಸಂಸ್ಕೃತಿಗಳು ಉತ್ಪಾದನೆಗೊಳ್ಳುವುದು ದೀರ್ಘಕಾಲೀನ ಪ್ರಾಂತ್ಯಾಂತರವ್ಯಾಪ್ತಿಯ ಕ್ರಿಯೆ-ಪ್ರತಿಕ್ರಿಯೆಗಳಿಂದ ಮತ್ತು ಅದೇ ಪ್ರಕ್ರಿಯೆಯೇ ಜಾಗತಿಕವೆಂಬುದನ್ನೂ ಉತ್ಪಾದಿಸಲು ಕಾರಣವಾಗುತ್ತದೆ – ಎನ್ನುವ ಅರಿವನ್ನು. ಆದ್ದರಿಂದ, ಜಾಗತಿಕ/ಸ್ಥಳೀಯ ಎಂಬ ದ್ವಂದ್ವದ ಎರಡೂ ಮುಖಗಳನ್ನು ಸಂಪೂರ್ಣ ಇತಿಹಾಸೀಕರಣಗೊಳಿಸಿ ನೋಡುವುದು ಅಗತ್ಯ; ಯಾಕೆಂದರೆ, ಜಾಗತಿಕ ಎನ್ನುವ ಸ್ವ-ನಿಶ್ಚಿತವಾದ ಒಂದು ಅಸ್ತಿತ್ವವೂ ಇಲ್ಲ, ಮತ್ತು ಸ್ಥಳೀಯವು ಕೂಡಾ ಯಾವತ್ಕಾಲವೂ ''ಹೊಸದಾಗಿ ಭಿನ್ನವಾಗುತ್ತಿರುವ ಭಿನ್ನತೆಗಳ'' ಸಮೂಹವಾಗಿದ್ದು ಅದು ಸತತವಾಗಿ ತನ್ನ ಅನ್ಯವೂ ಆಗಿ ಮಾರ್ಪಡುತ್ತಿರುವಂಥದು (ಪ್ರೆಡ್ ೧೯೯೫). ಇದಿಷ್ಟೇ ಕಾರಣಗಳಲ್ಲದೆ ಇನ್ನೊಂದು ಕಾರಣವನ್ನೂ ಇದಕ್ಕೆ ಕೊಡಬಹುದು – ಜಾಗತಿಕ/ಸ್ಥಳೀಯ ಎನ್ನುವ ದ್ವಂದ್ವವು ಜನವರ್ಗದ ಬದುಕಿನಲ್ಲಿ ಕೈಯಾಡಿಸುತ್ತಿರುವ ವಿಶಾಲಶಕ್ತಿಗಳ ಭ್ರಾಮಕ ಅರಿವೊಂದನ್ನು ಸೃಷ್ಟಿಸಿ ಆಮೂಲಕ ಅವರನ್ನು ''ರಾಜಕೀಯವಾಗಿ ನಿಶ್ಶಸ್ತ್ರೀಕರಣ''ಗೊಳಿಸುತ್ತದೆ ಎನ್ನುವುದು ನಿಜವಾದರೆ, ಇನ್ನೊಂದು ದಿಕ್ಕಿನಿಂದ ಅದು, ಅವರೇ ತಮ್ಮನ್ನು ತಾವು ಸನ್ನದ್ಧರನ್ನಾಗಿಸಿಕೊಳ್ಳಲೂ ಸಹಾಯಕವಾಗಬಹುದು – ಅಸ್ತಿತ್ವದಲ್ಲೇ ಇರದಿದ್ದಂಥ ಒಂದು ''ಸ್ಥಳೀಯತೆ''ಯನ್ನು ಅವರು ಪುನರ್‌ಸೃಷ್ಟಿಸಿಕೊಳ್ಳುವ ಮೂಲಕ.

ಇವರೆಲ್ಲರಿಗೆ ನಾನು ಕೃತಜ್ಞನಾಗಿದ್ದೇನೆ – ಹಳಗನ್ನಡದಲ್ಲಿ ನನಗೆ ಮಾರ್ಗದರ್ಶಕರಾದ ಟಿ.ವಿ. ವೆಂಕಟಾಚಲ ಶಾಸ್ತ್ರಿ (ಮೈಸೂರು) ಅವರಿಗೆ; ಬೆನೆಡಿಕ್ಟ್ ಆ್ಯಂಡರ್‌ಸನ್ (ಇಥಾಕಾ) ಅವರಿಗೆ, ೧೯೯೫ರಲ್ಲಿ ಅಸೋಸಿಯೇಷನ್ ಫಾರ್ ಏಶಿಯನ್ ಸ್ಟಡೀಸ್‌ನ ಗೋಷ್ಠಿಯಲ್ಲಿ ಈ ಬರಹದ ಮೊದಲ ಕರಡನ್ನು ಮಂಡಿಸಿದಾಗ ಅವರು ಸಹಾಯಕವಾಗುವ ವಿಮರ್ಶೆಮಾಡಿದ್ದಾರೆ; ನನ್ನ ಷಿಕಾಗೊದ ಸಹೋದ್ಯೋಗಿಗಳಾದ ಅರ್ಜುನ್ ಅಪ್ಪಾದುರೈ, ಕೆರೊಲ್ ಬ್ರೆಕೆನ್‌ರಿಜ್, ದೀಪೇಶ್ ಚಕ್ರಬರ್ತಿ ಮತ್ತು ಸ್ಟೀವನ್ ಕಾಲಿನ್ಸ್ ಅವರಿಗೆ, ಅವರ ಸೂಚನೆಗಳಿಗಾಗಿ; ಹೋಮಿ ಭಾಭಾ ಅವರಿಗೆ, ಈಗಾಗಲೇ ನಡೆಯುತ್ತಿರುವ ನವ್ಯೋತ್ತರ ಮಾರ್ಗದ 'ವೆರ್‌ನಾಕುಲರ್ ಕಾಸ್ಮೊಪಾಲಿಟನ್'ಗೆ ಸಂಬಂಧಿಸಿದ ಅವರ ಕೆಲಸಗಳಿಗೆ ಈ ಲೇಖನವನ್ನು ಒಂದು ವಸಾಹತುಪೂರ್ವ ಅನುಬಂಧವೆಂದು ಸೇರಿಸಿಕೊಳ್ಳಬಹುದು.

### ಅಡಿಟಿಪ್ಪಣಿಗಳು

೧. ಇಂಥ ಪ್ರಕ್ರಿಯೆಗಳನ್ನು ಇದುವರೆಗೆ ಗಮನಿಸಿದವರು ಭಾಷಾಶಾಸ್ತ್ರಜ್ಞರು ಮಾತ್ರ. ಇಂಥ ಸಂಗತಿಯನ್ನು ಅವರು ಸಾಧಾರಣ ರೂಢಿಯ ಉಪಭಾಷೆಗಳನ್ನು ಕುರಿತು ಮಾತ್ರವೇ ಗಮನಿಸುತ್ತಾರೆ, ಸಾಂಸ್ಕೃತಿಕ ಸಿದ್ಧಾಂತಕ್ಕೆ ಕುತೂಹಲಕಾರಿಯಾಗುವ ವಿಚಾರಗಳನ್ನು ಅವರು ಗಮನಿಸುವುದಿಲ್ಲ. ಉದಾಹರಣೆಗೆ ನೋಡಿ – ಸೆಗಲ್ ೧೯೯೩. ಬ್ರಜ ಭಾಷೆಗೆ ಸಂಬಂಧಿಸಿದಂತೆ ನೋಡಿ – ಸ್ನೆಲ್ ೧೯೯೧, ೩೦-೩೨, ಮತ್ತು ಸ್ಥೂಲವಿವರಗಳಿಗೆ – ಮಸಿಕಾ ೧೯೯೧, ೫೪.



೨. ಪ್ರಚಲಿತ ಐತಿಹ್ಯಗಳ ಪ್ರಕಾರ, ಸಿಟ್ಟಿಗೆದ್ದ ಬ್ರಾಹ್ಮಣರು ತುಕಾರಾಮನನ್ನು, ಅವನಿಗಿಂತ ಮೊದಲು ಏಕನಾಥನಿಗೆ ಮಾಡಿದಂತೆಯೇ,ಒತ್ತಾಯಿಸಿ ಅವನ ಪದ್ಯಗಳನ್ನು ಬಾವಿಗೆ ಎಸೆಯುವಂತೆ ಮಾಡಿದರು. ಆದ್ದರಿಂದ ಆತ ಮರಾಠಿಭಾಷೆ ಬಳಸುವ ತನ್ನ ಹಕ್ಕನ್ನು ಸಮರ್ಥಿಸಿಕೊಳ್ಳುವಾಗ ಆತ ಕೇವಲ ಪದ್ಯರಚನೆಯ ಹಕ್ಕನ್ನು ಮಾತ್ರವಲ್ಲ ಬರೆಯುವ ಹಕ್ಕನ್ನೇ ಸಮರ್ಥಿಸಿ ಕೊಳ್ಳುತ್ತಾನೆಂಬುದು ಸ್ಪಷ್ಟ (ನೋಡಿ – ಪೊಲಾಕ್ ೧೯೯೫, ೧೨೧-೨೨).

೩. ನೋಡಿ – ಝುಮ್‌ಥೋರ್ ೧೯೮೭. ಇಲ್ಲಿ ಸಂಸ್ಕೃತ ಮತ್ತು ಆರಂಭದ ಕನ್ನಡದ ಪಠ್ಯಗಳಿಗೆ ಸಂಬಂಧಿಸಿದಂತೆ ಉಪಯುಕ್ತವಾಗುವ ಪರಿಕಲ್ಪನೆಗಳು – ಭಾಷಾ-ಸಾಹಿತ್ಯವಿಧಾನಗಳು (ಗುಣ), ಅಥವಾ ಉಚ್ಚಾರದ ಮಾದರಿಗಳು (ಪಾಠ ಯಾ ಪಠಿತಿ). ಇದನ್ನು ೧೦ನೆಯ ಶತಮಾನದ ರಾಜಶೇಖರ (ಕಾವ್ಯಮೀಮಾಂಸೆ ೭), ೧೧ನೆಯ ಶತಮಾನದ ಭೋಜ (ಶೃಂಗಾರಪ್ರಕಾಶ ೭, ೩೭೯ಎಫ್‌ಎಫ್) ಮೊದಲಾದ ಸಾಹಿತ್ಯ ಸಿದ್ಧಾಂತಕಾರರು ವಿವರಿಸಿದ್ದಾರೆ.

೪. ಇದು ಮತ್ತು ಈ ಮುಂದಿನ ಭಾಗವು – ಪೊಲಾಕ್ ೧೯೯೬ರಲ್ಲಿ ವಿವರವಾಗಿ ಬಂದ ಚರ್ಚೆಗಳ ಮೇಲೆ ಆಧರಿಸಲ್ಪಟ್ಟಿದೆ.

೫. ಸಾಹಿತ್ಯ ಭಾಷೆಗಳ ಮೇಲಿನ ನಿಯಂತ್ರಣವು ಆರಂಭವಾಗುವುದು ಭಾಮಹನ 'ಕಾವ್ಯಾಲಂಕಾರ' (೧.೧೬, ೩೪-೩೬)ದಿಂದ. ಸಂಸ್ಕೃತದ ವಿಶ್ವಾತ್ಮಕತೆಯ ಯುಗದ ಕಡೆಯ ಹೊತ್ತಿಗೆ ಮಾತ್ರವೇ ಲೇಖಕರು 'ಗ್ರಾಮ್ಯ ಮಹಾಕಾವ್ಯ'ಗಳ ಸಾಧ್ಯತೆಯನ್ನು ಒಪ್ಪಲಾರಂಭಿಸುತ್ತಾರೆ (ನೋಡಿ – ೧೨ನೆಯ ಶತಮಾನದ 'ಕಾವ್ಯಾನುಶಾಸನ' ೮.೬, ೪೪೯). ಭಾಷಾಶಾಸ್ತ್ರೀಯ ದೃಷ್ಟಿಯಿಂದ ಅಪಭ್ರಂಶದ 'ಅ-ಸ್ಥಳೀಯ' ಲಕ್ಷಣವನ್ನು ಗುರುತಿಸಿದ್ದು – ಶ್ಯಾಕಲ್ ೧೯೯೩, ೨೬೬; ಮತ್ತು ಹಾರ್ಡಿ ೧೯೯೪, ೫.

೬. ಆದರೆ ಇಂಥ ಚಿಂತನಕ್ರಮವು ದಕ್ಷಿಣ ಮತ್ತು ಆಗ್ನೇಯ ಏಶಿಯಾದಲ್ಲಿ ರಾಷ್ಟ್ರನಿರ್ಮಾಣ ಕುರಿತ ಜಿಜ್ಞಾಸೆಯಲ್ಲಿ ಪ್ರಧಾನವಾಗಿ ಮುಂದುವರೆದಿದೆ. ಉದಾ – ಕುಲ್ಕೆ ೧೯೯೩, ಮತ್ತು ಅದಕ್ಕಿಂತ ಭಿನ್ನವಾಗಿ – ಪೊಲಾಕ್ ೧೯೯೬, ೨೩೬ ಎಫ್‌ಎಫ್.

೭. ವಿವರಗಳಿಗೆ ನೋಡಿ – ಪೊಲಾಕ್ ೧೯೯೬, ೨೪೦. ರಾಜಪೋಷಣೆಯ ಉದಾಹರಣೆಗಳಲ್ಲಿರುವ ಕ್ರಮವನ್ನು ಮೊದಲು ಗುರುತಿಸಿದವರು – ಹಾರ್ಟ್‌ಮಟ್ ಷಾರ್ಫ್ (೧೯೭೭, ೧೮೭), ಆದರೆ ಅವರ ವಿವರಣೆಗಿಂತ ಅದು ಹೆಚ್ಚು ಗಹನ, ಅವರು ಕೊಡುವ ಉದಾಹರಣೆಗಳಿಗೆ ಇನ್ನೂ ಹಲವಷ್ಟನ್ನು ಸೇರಿಸಬಹುದು.

೮. ಇದು ಸಾಹಿತ್ಯಕ ರೂಢಿಗಳಿಗೆ ಸಂಬಂಧಿಸಿದ್ದೆಂಬುದನ್ನು ನಾನು ಒತ್ತಿಹೇಳುತ್ತೇನೆ. ಕಾವ್ಯದ ಪರಿಧಿಯ ಆಚೆಗೆ ಹಲವು ಮಾದರಿಯ ಸಂಸ್ಕೃತಗಳು ರೂಢಿಯಲ್ಲಿದ್ದವು. ಆದರೆ, ಸಾಂಪ್ರದಾಯಿಕ ಪಂಡಿತರು ಭಾಷಾಶಾಸ್ತ್ರ, ಕೋಶ ಮೊದಲಾದವಲ್ಲಿ ಹುಡುಕಿ ಹೇಳಿರುವ ಹಲವು ರೀತಿಯ ಪ್ರಾಕೃತಗಳ ಅಸ್ತಿತ್ವಕ್ಕಿಂತ ಭಿನ್ನವಾಗಿ, ಪಾಣಿನಿಯ ಬಳಿಕದ ಸಂಸ್ಕೃತದಲ್ಲಿ ('ಆರ್ಷ'ವೆಂಬ ವೈದಿಕ ಮಾದರಿಯನ್ನು ಬಿಟ್ಟರೆ) ಅಂಥ ವೈವಿಧ್ಯಗಳಿಲ್ಲ (ಉದಾಹರಣೆಗೆ ನೋಡಿ – 'ಸರಸ್ವತೀಕಂಠಾಭರಣಾಲಂಕಾರ' ೨.೫ ಎಫ್‌ಎಫ್). ಇದಕ್ಕೆ ಹೋಲಿಸಬಹುದಾದ ಆರಂಭದ ಲ್ಯಾಟಿನ್ ಜಗತ್ತಿನ ಕುರಿತು ನೋಡಿ – ಎ.ಎಚ್.ಎಂ. ಜೋನ್ಸ್ ೧೯೬೪, ೧೦೦೮.

೯. ಮೊದಲನೆಯ ಅರ್ಥಕ್ಕೆ ಸಂಬಂಧಿಸಿ ನೋಡಿ – ಮನು ೪.೧೭೮, ಎರಡನೆಯ ಅರ್ಥಕ್ಕೆ – ಎಸ್.ಆರ್.ಕೆ. ೧೭೨೯, ೧೭೩೩; ವಾಕ್ಪತಿರಾಜ (ಕ್ರಿ.ಶ. ೭೩೦), 'ಗೌಡವಾಹೋ' ೮೪-೮೫.

೧೦. ಇಂಥ ಮೌಲ್ಯತೀರ್ಮಾನವನ್ನೂ ಈ ವ್ಯತ್ಯಾಸವನ್ನೂ ಭಾಮಹ (ಕಾವ್ಯಾಲಂಕಾರ ೧.೩೧ ಎಫ್‌ಎಫ್) ನಷ್ಟು ಮೊದಲೇ ವಿರೋಧಿಸಲಾಗಿತ್ತೆಂದು ಕಾಣುತ್ತದೆ. ಆದರೂ ೧೧ನೆಯ ಶತಮಾನದ ಕನ್ನಡ ಲೇಖಕ ನಾಗವರ್ಮ ಭಾಮಹನ ಈ ಮಾತನ್ನು ದಕ್ಷಿಣ-ಉತ್ತರಗಳ ವ್ಯತ್ಯಾಸದ ಕುರಿತು ಹೇಳಿದ್ದಲ್ಲವೆಂದೂ ಅದರಲ್ಲಿ ಒಂದು ಇನ್ನೊಂದಕ್ಕಿಂತ ದೊಡ್ಡದಲ್ಲವೆಂಬುದು ಅದರ ಅರ್ಥವೆಂದೂ ಹೇಳುತ್ತಾನೆ (ಕಾವ್ಯಾವಲೋಕನಮ್ ಸೂತ್ರ ೫೨೨), ಅದು ಅಪಾರ್ಥ.

೧೧. ಈತ ತನ್ನನ್ನು ಮೊದಲಿನ ಮಾದರಿಯೊಂದಕ್ಕೆ (ಶರ್ವವರ್ಮನ 'ಕಾತಂತ್ರ') ಹೋಲಿಸಿಕೊಂಡು ತಾನು ಅಭಿನವಶರ್ವವರ್ಮನೆಂದು ಕರೆದುಕೊಳ್ಳುತ್ತಾನೆ ಮತ್ತು ತನ್ನ ವ್ಯಾಕರಣಕ್ಕೆ ವ್ಯಾಖ್ಯಾನವಾದ 'ಅಮೋಘವೃತ್ತಿ'ಯನ್ನು ಬರೆದವ ತನ್ನ ಒಡೆಯನೆಂದು ಹೇಳಿಕೊಳ್ಳುತ್ತಾನೆ (೪.೩.೨೦೮). ಸಂಸ್ಕೃತ ಕಾವ್ಯಕ್ಕೆ ಜೈನರು ಕೊಟ್ಟ ತಿರುವನ್ನು – ಎರಡನೆಯ ಜಿನಸೇನ ತನ್ನ 'ಆದಿಪುರಾಣ'ವು ಅಂಥದೆಂದು ಸ್ಪಷ್ಟವಾಗಿ ಹೇಳುತ್ತಾನೆ – ಅಭ್ಯಸಿಸುವ ಅಗತ್ಯವಿದೆ, ಅದರಲ್ಲೂ ಮುಖ್ಯವಾಗಿ, ರವಿಸೇನ (೬೭೮) ಮತ್ತು ಒಂದನೆಯ ಜಿನಸೇನ (೭೮೩)ರ ಕುರಿತು. ಸ್ಥೂಲಚರ್ಚೆಗೆ ನೋಡಿ – ಡಂಡಸ್ ೧೯೯೬.

೧೨. ಪ್ರಾಕೃತದಲ್ಲಿ ಸಾಹಿತ್ಯಸೃಷ್ಟಿ ಇಲ್ಲದಿರುವುದು ವಿಚಿತ್ರವೆಂದು ತಿಳಿಯಲಾಗಿದೆ (ನೋಡಿ – ಅಲ್ಟೇಕರ್ ೧೯೬೦ಎ, ೪೧೨), ಆದರೆ ಮೇಲೆ ಗುರುತಿಸಿದಂತೆ, ಅದೊಂದು ಪಳೆಯುಳಿಕೆಯಂಥ ಸಾಂಸ್ಕೃತಿಕ ರೂಢಿಯಾಗಿಬಿಟ್ಟಿತ್ತು. ೧೪ನೆಯ ಶತಮಾನದ ನಡುವಿನ ಬಳಿಕ ಬಂದ ಶಾಸನಗಳು ಇದನ್ನು ದೃಢೀಕರಿಸುತ್ತವೆ.

೧೩. ಕವಿರಾಜಮಾರ್ಗ ೧.೩೭; ಪಂಪನ ವಿಕ್ರಮಾರ್ಜುನವಿಜಯ ೧೪.೪೫; ನೋಡಿ -- ಚಿದಾನಂದಮೂರ್ತಿ ೧೯೭೮, ೨೫೬.

೧೪. ತಮಿಳಿನ 'ತೊಳ್ಕಾಪ್ಪಿಯಮ್' ಇದಕ್ಕಿಂತ ಹಳೆಯದೆಂಬುದರಲ್ಲಿ ಅನುಮಾನವಿಲ್ಲ (ಇದರ ಕಾಲನಿರ್ಣಯ ತುಂಬ ವಿವಾದಾತ್ಮಕ. ಒಂದು ಸ್ತಿಮಿತದ ತೀರ್ಮಾನಕ್ಕೆ ನೋಡಿ – ಸ್ವಾಮಿ ೧೯೭೫). ಆದರೆ ಅಲ್ಲಿ ಉದ್ಯುಕ್ತವಾಗಿರುವ ದ್ವಂದ್ವ ವಿಶ್ವಾತ್ಮಕ/ಸ್ಥಳೀಯ ಅಲ್ಲ, ಅದು ಪ್ರಮಾಣಿತ/ಅಪ್ರಮಾಣಿತ (ಜ್ವೆಲೆಬಿಲ್ ೧೯೯೨, ೧೩೪-೩೬).

೧೫. ಕವಿರಾಜಮಾರ್ಗ ೧.೪೪, ೧.೪೭, ಇತ್ಯಾದಿ. ಈ ಕೃತಿಯನ್ನು ನಿಜವಾಗಿ ಲಿಖಿತಗೊಳಿಸಿದವನು ಶ್ರೀವಿಜಯನೆಂಬ ಕವಿ.

೧೬. ಈ ಭಿನ್ನತೆಯು ಹಳಗನ್ನಡದ ಉತ್ತರ ಮತ್ತು ದಕ್ಷಿಣ ಉಪಭಾಷೆಗಳ ನಡುವಿನ ವ್ಯತ್ಯಾಸವನ್ನು ಬಿಂಬಿಸುವಂಥದಲ್ಲ ಎನ್ನುವುದನ್ನಿಲ್ಲಿ ಗಮನಿಸಬೇಕು. ದಕ್ಷಿಣದ ಗಂಗ ಕವಿಗಳು ಮತ್ತು ಉತ್ತರದ ಚಾಲುಕ್ಯ ಕವಿಗಳಿಬ್ಬರೂ ಈ ಕೆಳಗೆ ಚರ್ಚಿಸಲಾದ ಭಾಷಾಶಾಸ್ತ್ರೀಯ ಕೃತಿಗಳ ಮೂಲಕ ಏಕರೂಪಕ್ಕೆ ತರಲ್ಪಟ್ಟ ಸಾಹಿತ್ಯದ ನುಡಿಗಟ್ಟೊಂದನ್ನು ಬಳಸಿದರು.

೧೭. ದಂಡಿಯ ೧೦ನೆಯ ಶತಮಾನದ ವ್ಯಾಖ್ಯಾನಕಾರ ರತ್ನಶ್ರೀಜ್ಞಾನ (ಮತ್ತು ಕೆಲವೊಮ್ಮೆ ಸ್ವತಃ ದಂಡಿಯೂ, ಕಾವ್ಯಾದರ್ಶ ೧.೬೦, ೮೦, ೮೩) ''ಉತ್ತರ'' ಮತ್ತು ''ದಕ್ಷಿಣ''ಗಳೆಂಬ ಶಬ್ದಗಳನ್ನು ಆಯ್ದುಬಳಸಿದ್ದಾರೆ. ರತ್ನನು ತನ್ನ ವ್ಯಾಖ್ಯಾನವನ್ನು ಬರೆದದ್ದು ರಾಷ್ಟ್ರಕೂಟ ಜಗತ್ತಿನ ಒಂದು ಕಡೆ, ಆತನ ಪೋಷಕನಾಗಿದ್ದವ ಸರ್ವಾಭ್ಯುನ್ನತರಾಷ್ಟ್ರಕೂಟತಿಲಕ ನೆಂಬ ಬಿರುದಿನ ಶ್ರೀಮತ್ತುಂಗನರಾಧಿಪ. ದಂಡಿಯ ಇನ್ನೆರಡು ವ್ಯಾಖ್ಯಾನಗಳೂ ಕರ್ನಾಟಕದಲ್ಲೇ ರಚಿತವಾದಂತೆ ಕಾಣುತ್ತದೆ – ಮೊದಲನೆಯದರ ಕರ್ತೃ ವಾದಿಜಂಘಾಲನೆಂಬಾತ ೧೦ನೆಯ ಶತಮಾನದ ಒಂದು ಗಂಗಪ್ರಶಸ್ತಿಯಲ್ಲಿ (ಆ್ಯನುಯಲ್ ರಿಪೋರ್ಟ್ ಆಫ್ ದಿ ಮೈಸೂರ್ ಆರ್ಖಿಯಲಾಜಿಕಲ್



ಡಿಪಾರ್ಟ್‌ಮೆಂಟ್, ೧೯೨೧) ಉಲ್ಲೇಖಿಸಿದ ನಿರವದ್ಯಸಾಹಿತ್ಯ ವಿದ್ಯಾವ್ಯಾಖ್ಯಾನನಿಪುಣ (೧.೧೬೮); ಮತ್ತು ಎರಡನೆಯದರ ಕರ್ತೃ ಹೊಯ್ಸಳ ಆಸ್ಥಾನದಲ್ಲಿದ್ದ ತರುಣವಾಚಸ್ಪತಿ – ಎಂಬುದನ್ನು ಆಧರಿಸಿ. ದಂಡಿಯ ಈ ಕೃತಿಯು ದಕ್ಷಿಣದ ಧೀಮಂತರಿಗೆ ವಿಶೇಷವಾಗಿ ಉದ್ದೇಶಿಸಲ್ಪಟ್ಟದ್ದು.

೧೮. ಭಾಮಹನ ಪ್ರಕಾರ ಗೌಡವು 'ಅಲಂಕಾರವದ್' ಮತ್ತು ವೈದರ್ಭವು 'ಅವಕ್ರೋಕ್ತಿ' ಹಾಗೂ 'ಪ್ರಸನ್ನ' , 'ಕೋಮಲ' – ಇತ್ಯಾದಿ ಗುಣಗಳನ್ನೊಳಗೊಂಡದ್ದು. ಆದರೆ ಇದನ್ನು ಆತನೂ ವಿವರಿಸುವುದಿಲ್ಲ (ಕಾವ್ಯಾಲಂಕಾರ ೧.೩೪-೩೫); ಇವೆರಡನ್ನು ಸ್ಪಷ್ಟ ದ್ವಂದ್ವಗಳೆಂಬಂತೆ ಕಾಣಿಸುವ ದಂಡಿಯೂ ಕೂಡಾ (ಕಾವ್ಯಾದರ್ಶ ೨.೩೬೦) ವಿವರಿಸುವುದಿಲ್ಲ. ವಾಮನನು ವೈದರ್ಭಕ್ಕೆ 'ಶಾಕುಂತಲ'ದ ೨.೬ನ್ನು ಶುದ್ಧ ಸ್ವಭಾವೋಕ್ತಿಯ ಉದಾಹರಣೆಯೆಂದೂ ಗೌಡಕ್ಕೆ 'ಮಹಾವೀರಚರಿತ'ದ ೧.೫೪ನ್ನು ಶುದ್ಧ ವಕ್ರೋಕ್ತಿಯ ಉದಾಹರಣೆಯೆಂದೂ ಕೊಡುತ್ತಾನೆ. ಆದರೆ ಆಯಾ ಪರಿಭಾಷೆಗಳಿಗೆ ಹೆಚ್ಚಿನ ವಿವರ ಕೊಡುವುದಿಲ್ಲ.

೧೯. ಕವಿರಾಜಮಾರ್ಗದ ೨.೬೦ರಿಂದ ೬೨ವರೆಗಿನ ಪದ್ಯಗಳು ಸ್ವಭಾವೋಕ್ತಿ (ದಾಕ್ಷಿಣಾತ್ಯ) ಮತ್ತು ವಕ್ರೋಕ್ತಿಗೆ (ಔತ್ತರೇಯ, ಶ್ಲೇಷಕು-ವಲಯಮ್ ಮೊದಲಾದವು) ಉದಾಹರಣೆಗಳು. ೨.೧೧೦ರ ಎರಡು ಅರ್ಧಗಳೂ ಹಾಗೆಯೇ (ಮೊದಲನೆಯದರಲ್ಲಿ ರೂಪಕಾರ್ಥವಿಲ್ಲ, ಎರಡನೆಯದು ಸಂಯುಕ್ತ ಪ್ರತಿಮೆ). ಇದಕ್ಕೆ ವಿರುದ್ಧವಾಗಿ ೨.೧೯ರಲ್ಲಿ ಇರುವ ವ್ಯತ್ಯಾಸಗಳೆಂದರೆ ಮೊದಲರ್ಧದಲ್ಲಿ ಭಾಷಾಗುಣಗಳ ಪ್ರಯೋಗವಿದ್ದು ದಕ್ಷಿಣ ಮಾರ್ಗವನ್ನು ಸೂಚಿಸುತ್ತದೆ, ದ್ವಿತೀಯಾರ್ಧದಲ್ಲಿ ಅದಕ್ಕೆ ಬೇರೆಯಾದ ಉತ್ತರಮಾರ್ಗವನ್ನು ಕಾಣಿಸುತ್ತದೆ.

೨೦. ದಂಡಿಯಲ್ಲಾಗಲೇ 'ಓಜಸ್' ಗುಣದ ಪಾತ್ರವು ಏನೆಂಬುದರ ಬಗ್ಗೆ ಅಸ್ಪಷ್ಟತೆಯಿದೆ. ಇದನ್ನು ಆತ ವೈದರ್ಭ ಶೈಲಿಯ ಗುಣವೆಂದು ಹೆಸರಿಸಿ ಅದು ಉತ್ತರದ ಕಾವ್ಯದ ಒಂದು ವಿಚಿತ್ರ ರೂಢಿಯೆಂದೂ (೧.೮೦) ಅದನ್ನು ಕೆಲವೊಮ್ಮೆ ('ಅನುಕೂಲ') ಮಾತ್ರ ದಕ್ಷಿಣದವರು ಬಳಸುತ್ತಾರೆಂದೂ ಹೇಳುತ್ತಾನೆ (೮೩). ಭೋಜನಾದರೋ ವೈದರ್ಭವನ್ನು ''ಸಂಪೂರ್ಣ ಸಂಧಿರಹಿತ''ವೆಂದೂ ಗೌಡವನ್ನು ''ಗರಿಷ್ಠಪ್ರಮಾಣದಲ್ಲಿ ಸಂಧಿಯುಕ್ತ''ವೆಂದೂ ಹೇಳುತ್ತಾನೆ (ಶೃಂಗಾರಪ್ರಕಾಶ ೫೮೦).

೨೧. ರತ್ನನ ಪ್ರಕಾರ ದಕ್ಷಿಣದ ಕವಿಗಳಿಗೆ ಸ್ವಭಾವೋಕ್ತಿಯು ಒಂದು ''ಸಹಜ ಅಭಿವ್ಯಕ್ತಿ'': ''ಶಬ್ದಗಳಿಗೆ ಸಂಬಂಧಿಸಿದ ಸೌಂದರ್ಯ, ಅಂದರೆ ಗುಣಗಳು ಪ್ರಧಾನವಾಗಿರುವ ವೈದರ್ಭ ಮಾರ್ಗವು ದಕ್ಷಿಣದ ಕವಿಗಳಿಗೆ ಸಹಜ ('ದಾಕ್ಷಿಣಾತ್ಯಾನಾಂ ಸ್ವಾಭಾವಿಕಃ'), ಅದೇ ಪೂರ್ವದ ಕಾವ್ಯದಲ್ಲಿ ಅಲಂಕಾರ ಉತ್ಪ್ರೇಕ್ಷೆಗಳು ಕಾಣಿಸಿಕೊಳ್ಳುತ್ತವೆ'' (೧.೫೦). ಆದ್ದರಿಂದ ಆತ ವಿಭಿನ್ನ ಮಾರ್ಗಗಳು ಆಯಾ ಪ್ರಾಂತ್ಯದ ಲೇಖಕರಿಗೆ ತಮ್ಮ ಪ್ರಾಂತೀಯ ಭಾಷೆಯಂತೆಯೇ 'ತಜ್ಜ', 'ಸಹಜ', 'ನಿಜ', ಅಂದರೆ ಹುಟ್ಟು, ಸ್ಥಳೀಯ, ನಿರ್ದಿಷ್ಟವೆಂದು, ಅಭಿಪ್ರಾಯಪಡುತ್ತಾನೆ.

೨೨. ಹದಿನೈದನೆಯ ಶತಮಾನದ ತೆಲುಗು ಕವಿ ಪೋತನನು ೧೦ನೆಯ ಶತಮಾನದ ಸಂಸ್ಕೃತದ ಆಸ್ಥಾನ ಪುರಾಣವಾದ 'ಚಂಪೂಭಾಗವತ'ವನ್ನು ಸ್ಥಳೀಯಗೊಳಿಸಿ ಅಳವಡಿಸಿದಾಗ ಉಂಟಾದ ಅಂತರ್ ಪಠ್ಯೀಯ ಪ್ರಕ್ರಿಯೆಗಳನ್ನು ಹೋಲಿಸಿ ನೋಡಿ. ಆ ಸಂಸ್ಕೃತ ಭಾಗವತವೂ ಮತ್ತೆ (ಪೋತನನಿಗೆ ಪ್ರಾಯಶಃ ಇದು ತಿಳಿದಿರಲಿಲ್ಲ) ತಮಿಳು ಆಳ್ವಾರರ (೭-೯ನೆಯ ಶತಮಾನಗಳು) ಹಾಡುಗಳಿಂದ ರೂಪಾಂತರಗೊಂಡದ್ದು. ನೋಡಿ – ಷುಲ್ಮನ್ ೧೯೯೩.

೨೩. ಇದರ ಕಡೆಯ ಪದ್ಯವು ಸಂಸ್ಕೃತಕ್ಕೆ ಪ್ರತಿಯಾಗಿ ಕನ್ನಡ ಭಾಷೆಯ ಒಂಬತ್ತು ವೈಶಿಷ್ಟ್ಯಗಳನ್ನು

ಪಟ್ಟಿಮಾಡುತ್ತದೆ; ಇದರಲ್ಲಿ ಭಾಷಾಶಾಸ್ತ್ರ, ಸಂಧಿ, ಸಮಾಸ, ಛಂದಸ್ಸು ಇತ್ಯಾದಿಗಳ ವ್ಯತ್ಯಾಸಗಳಿವೆ (ಶಬ್ದಮಣಿದರ್ಪಣ ೩೪೨).

೨೪. ವಿಕ್ರಮಾರ್ಜುನವಿಜಯ ೧.೧೧; ೧೪.೫೧. ನಿಜವಾಗಿ, ಪೆರುಂತೆವನಾರ್‌ನ (ಭಾಗಶಃ?) ತಮಿಳು ಅಳವಡಿಕೆ 'ಪಾರತ್ವೆನ್ಪ'ವು ಸುಮಾರು ಒಂದು ಶತಮಾನದಷ್ಟು ಹಿಂದಿನದು (ಪಲ್ಲವ ಮೂರನೆಯ ನಂದಿವರ್ಮನ ಆಸ್ಥಾನ, ಕ್ರಿ.ಶ. ೮೩೦-೫೨).

೨೫. ಇಲ್ಲಿ ಸೂಚಿತವಾಗಿರುವುದು ದೇಶಭಾಷಾ ಸಾಹಿತ್ಯಗಳ 'ಹುಟ್ಟು', ದೇಶಭಾಷೆಯದಲ್ಲ. ಸಾಧಾರಣವಾಗಿ ಕಾಣುವ ಇಂಥ ಕಿರುದೋಷವೇ ಮುಂದಿನ ನನ್ನ ಬರವಣಿಗೆ ಮತ್ತು ಸಾಹಿತ್ಯದ ಆರಂಭವನ್ನು ಕುರಿತ ಮಾತುಗಳಿಗೆ ಕಾರಣವಾಗಿವೆ.

೨೬. ಇದು ಎಷ್ಟು ವ್ಯಾಪಕವಾಗಿದೆಯೆಂದರೆ, ಈ ವಿಷಯವನ್ನು ಅಭ್ಯಸಿಸುವ ಅತ್ಯಂತ ಸೂಕ್ಷ್ಮಜ್ಞ ವಿದ್ಯಾರ್ಥಿಗಳೂ ಕೂಡಾ ''ಸಂಸ್ಕೃತೀಕರಣ''ವೆಂಬ ಪ್ರಕ್ರಿಯೆಯನ್ನು ''ಧಾರ್ಮಿಕ ಸಂಸ್ಕೃತಿಗೆ'' ಸಂಬಂಧಿಸಿದ ವಿಷಯವೆಂದೂ ಆದ್ದರಿಂದ ಇದು ಲೌಕಿಕ ಸ್ವರೂಪದ್ದೆಂದು ಭಾವಿಸಲಾಗುವ ''ಇಸ್ಲಾಮೀಕರಣ''ವೆಂಬ ಪ್ರಕ್ರಿಯೆಗಿಂತ ಭಿನ್ನವೆಂದೂ ಭಾವಿಸುವಂತಾಗಿದೆ (ವ್ಯಾಗೊನೆರ್ ೧೯೯೬, ೮೭೨).

೨೭. ಆಮೇಲಿನ ಈ ರಾಜ್ಯಗಳು ''ಸಾಮ್ರಾಜ್ಯರೂಪಿ ಸಂಸ್ಥಾನಗಳು'' ಎಂದು ಕುಲ್ಕೆ ತಿಳಿಯುತ್ತಾರಾದರೂ ಇದಕ್ಕೂ ಮತ್ತು ಮೊದಲಿನ ಸಾಮ್ರಾಜ್ಯಗಳಿಗೂ ಇರುವ ವ್ಯತ್ಯಾಸಗಳೇನೆಂಬುದನ್ನು ಅವರು ಸ್ಪಷ್ಟಪಡಿಸುವುದಿಲ್ಲ (೧೯೯೫, ೨೪೨-೬೨).

೨೮. ದಕ್ಷಿಣ ಏಶಿಯಾ ಮತ್ತು ಯುರೋಪಿನ ತುಲನೆಯಲ್ಲಿ ದೇಶಭಾಷಾ ರಾಜ್ಯಗಳನ್ನು ಕುರಿತು ಹಾಗೂ ಯುರೋಪಿನ ರಾಷ್ಟ್ರೀಯತೆ ಮತ್ತು ದೇಶಭಾಷಾನಿರ್ಮಿತಿಗಳ ಕುರಿತು ಈಚೆಗೆ ಪ್ರಭಾವಶಾಲಿಯಾಗಿರುವ ವಿಷಯಗಳ ಚರ್ಚೆಗೆ ನೋಡಿ – ಪೊಲಾಕ್ ೧೯೯೮.

## ಉಲ್ಲೇಖಗಳು

**ಕನ್ನಡ ಪಠ್ಯಗಳು:**

*ಕರ್ನಾಟಕ ಕವಿರಾಜಮಾರ್ಗಮ್.* ೧೯೭೩. ಸಂಪಾದಕರು: ಎ. ವೆಂಕಟರಾವ್ ಮತ್ತು ಎಚ್. ಶೇಷ ಅಯ್ಯಂಗಾರ್. ೨ನೆಯ ಆವೃತ್ತಿ. ಕನ್ನಡ ಸೀರಿಸ್. ಮದ್ರಾಸ್: ಮದ್ರಾಸ್ ವಿಶ್ವವಿದ್ಯಾಲಯ.

*ಕವಿರಾಜಮಾರ್ಗಮ್.* ೧೯೮೩. ಸಂ: ಕೆ. ಕೃಷ್ಣಮೂರ್ತಿ. ಬೆಂಗಳೂರು: ಐಬಿಎಚ್. ಸಂ: ಎಂ.ವಿ. ಸೀತಾರಾಮಯ್ಯ. ಬೆಂಗಳೂರು: ಕರ್ನಾಟಕ ಸಂಘ, ೧೯೬೮, ಪುನರ್ಮುದ್ರಣ ೧೯೯೪; ಸಂ: ಎಂ.ವಿ. ಸೀತಾರಾಮಯ್ಯ. ಮೈಸೂರು: ಡಿ.ವಿ.ಕೆ. ಮೂರ್ತಿ, ೧೯೭೫, ಪರಿಷ್ಕೃತ ಆವೃತ್ತಿ.

*ಕಾವ್ಯಾವಲೋಕನಮ್.* ೧೯೬೭. ಸಂ: ಆರ್. ನರಸಿಂಹಾಚಾರ್. ೩ನೆಯ ಆವೃತ್ತಿ. ಮೈಸೂರು: ಮೈಸೂರು ವಿಶ್ವವಿದ್ಯಾಲಯ.

*ಪಂಪ ಭಾರತಮ್ ಎಂಬ ವಿಕ್ರಮಾರ್ಜುನವಿಜಯಮ್.* (೧೯೨೬) ೧೯೯೦. ಸಂ: ವೆಂಕಟನಾರಣಪ್ಪ. ಮೈಸೂರು: ಮೈಸೂರು ವಿಶ್ವವಿದ್ಯಾಲಯ. ಪುನರ್ಮುದ್ರಣ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

*ಕೇಶಿರಾಜನ ಶಬ್ದಮಣಿದರ್ಪಣ.* ೧೯೯೪. ಸಂ: ಟಿ.ವಿ. ವೆಂಕಟಾಚಲಶಾಸ್ತ್ರಿ. ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.



**ಸಂಸ್ಕೃತ ಪಠ್ಯಗಳು:**

*ಆದಿಪುರಾಣ*, ಜಿನಸೇನ, ೧೯೯೩. ಸಂ: ಪನ್ನಾಲಾಲ್ ಜೈನ್. ೪ನೆಯ ಆವೃತ್ತಿ. ನ್ಯೂಡೆಲ್ಲಿ: ಭಾರತೀಯ ಜ್ಞಾನಪೀಠ.

*ಎಪಿಗ್ರಾಫಿಯಾ ಇಂಡಿಕಾ*

*ಗೌಡವಹೋ*, ವಾಕ್ಪತಿರಾಜ, ಸಂ: ಎನ್.ಜಿ. ಸೂರು. ಅಹ್ಮದಾಬಾದ್: ಪ್ರಾಕೃತ ಟೆಕ್ಸ್ಟ್ ಸೊಸೈಟಿ.

*ಕಾವ್ಯಾಲಂಕಾರ*, ಭಾಮಹ. ೧೯೮೧. ಸಂ: ಬತುಕ್‌ನಾಥ್ ಶರ್ಮ ಮತ್ತು ಬಲದೇವ ಉಪಾಧ್ಯಾಯ. ೨ನೆಯ ಆವೃತ್ತಿ. ವಾರಣಾಸಿ: ಚೌಕಾಂಬಾ ಸಂಸ್ಕೃತ ಸಂಸ್ಥಾನ.

*ಕಾವ್ಯಲಕ್ಷಣಮ್ (ಕಾವ್ಯಾದರ್ಶ)*, ೧೯೫೭. ಸಂ: ಅನಂತಲಾಲ್ ಥಾಕುರ್ ಮತ್ತು ಉಪೇಂದ್ರ ಝಾ. ದರ್ಭಾಂಗ: ಮಿಥಿಲಾ ಇನ್‌ಸ್ಟಿಟ್ಯೂಟ್.

*ಕಾವ್ಯಾಲಂಕಾರ*, ರುದ್ರಟ. ೧೯೨೮. ಸಂ: ಪಂ. ದುರ್ಗಾಪ್ರಸಾದ್ ಮತ್ತು ವಾಸುದೇವ ಲಕ್ಷ್ಮಣ ಶಾಸ್ತ್ರಿ ಪಂಶಿಕಾರ್. ಬಾಂಬೆ: ನಿರ್ಣಯಸಾಗರ ಪ್ರೆಸ್.

*ಕಾವ್ಯಾಲಂಕಾರಸೂತ್ರ* ಮತ್ತು ವೃತ್ತಿ, ವಾಮನ. ೧೯೦೮. ಸಂ: ರತ್ನ ಗೋಪಾಲ ಭಟ್ಟ. ಬೆನಾರಸ್: ವಿದ್ಯಾವಿಲಾಸಪ್ರೆಸ್.

*ಕಾವ್ಯಮೀಮಾಂಸಾ*, ರಾಜಶೇಖರ. ೧೯೩೪. ಸಂ: ಸಿ.ಡಿ. ದಲಾಲ್ ಮತ್ತಿತರರು. ೩ನೆಯ ಆವೃತ್ತಿ. ಬರೋಡಾ: ಓರಿಯೆಂಟಲ್ ಇನ್‌ಸ್ಟಿಟ್ಯೂಟ್.

*ಕಾವ್ಯಾನುಶಾಸನಮ್*, ಹೇಮಚಂದ್ರ. ೧೯೬೪. ಸಂ: ರಸಿಕ್‌ಲಾಲ್ ಸಿ. ಪರೀಖ್ ಮತ್ತು ವಿ.ಎಂ. ಕುಲಕರ್ಣಿ. ೨ನೆಯ ಆವೃತ್ತಿ. ಬಾಂಬೆ: ಶ್ರೀಮಹಾವೀರ ಜೈನ ವಿದ್ಯಾಲಯ.

*ಶಕಟಾಯನವ್ಯಾಕರಣಮ್ ಸ್ವೋಪಜ್ಞಾಮೋಘವೃತ್ತಿಸಮಾಲಂಕೃತಮ್*, ೧೯೭೧. ಸಂ: ಶಂಭುನಾಥ ತ್ರಿಪಾಠಿ. ಡೆಲ್ಲಿ: ಜ್ಞಾನಪೀಠ ಪ್ರಕಾಶನ.

*ಸರಸ್ವತೀಕಂಠಾಭರಣಾಲಂಕಾರ*, ೧೯೭೯. ಸಂ: ಬಿಶ್ವನಾಥ ಭಟ್ಟಾಚಾರ್ಯ. ವಾರಣಾಸಿ: ವಾರಣಾಸಿ ಹಿಂದು ಯುನಿವರ್ಸಿಟಿ.

*ಶೃಂಗಾರಪ್ರಕಾಶ*, ಪ್ರಕಟವಾಗಲಿದೆ. ಸಂ: ವಿ. ರಾಘವನ್. ಹಾರ್ವರ್ಡ್ ಓರಿಯೆಂಟಲ್ ಸೀರೀಸ್. ಕೇಂಬ್ರಿಜ್: ಹಾರ್ವರ್ಡ್ ಯುನಿವರ್ಸಿಟಿ ಪ್ರೆಸ್.

*ಸುಭಾಷಿತರತ್ನಕೋಶ*, ವಿದ್ಯಾಕರ. ೧೯೫೭. ಸಂ: ಡಿ.ಡಿ. ಕೊಶಾಂಬಿ ಮತ್ತು ವಿ.ವಿ. ಗೋಖಲೆ. ಹಾರ್ವರ್ಡ್ ಓರಿಯೆಂಟಲ್ ಸೀರೀಸ್ ೪೨. ಕೇಂಬ್ರಿಜ್: ಹಾರ್ವರ್ಡ್ ಯುನಿವರ್ಸಿಟಿ ಪ್ರೆಸ್.

*ವಕ್ರೋಕ್ತಿಜೀವಿತಂ*, ಕುಂತಕ. ಸಂ: ಕೆ. ಕೃಷ್ಣಮೂರ್ತಿ. ಧಾರವಾಡ: ಕರ್ನಾಟಕ ಯುನಿವರ್ಸಿಟಿ ಪ್ರೆಸ್.

*ವಿಕ್ರಮಾಂಕದೇವಚರಿತ*, ಬಿಲ್ಹಣ. ೧೯೬೪. ಸಂ: ವಿಶ್ವನಾಥಶಾಸ್ತ್ರಿ ಭರದ್ವಾಜ್. ವಾರಣಾಸಿ: ಸಂಸ್ಕೃತ ಸಾಹಿತ್ಯ ರಿಸರ್ಚ್ ಕಮಿಟಿ, ಬನಾರಸ್ ಹಿಂದು ಯುನಿವರ್ಸಿಟಿ.

**ಆನುಷಂಗಿಕ ಮೂಲಗಳು:**

ALTEKAR, ANANT SADASHIV, 1960a. *Rastrakutas and Their Times.* Poona: Oriental Book Agency.

---------------. 1960b. "The Rastrakutas". In *The Early History of the Deccan,* edited by G. Yazdani. London: Oxford University Press.

BAKHTIN, M.M. 1981. *The Dialogic Imagination: Four Essays.* Austin: University of Texas Press.

BALIBAR, ETIENNE, and IMMANUEL WALLERSTEIN. 1991. *Classes, Nations, States.* London: Verso.

BOURDIEU, PIERRE. 1991. *Language and Symbolic Power.* Cambridge: Harward University Press.

CHIDANANDA MURTI, M. 1978. "Kannada Language and Literature during the Chalukyas of Badami (c. 540-750 A.D.)." In *The Chalukyas of Badami,* edited by M.S. Nagaraja Rao. Bangalore: Mythic Society.

DUNDAS, PAUL. 1996. "Jain Attitudes towards the Sanskrit Language." In *The Ideology and Status of Sanskrit,* edited by Jan E.M. Houben. Leiden: Brill.

DUVERGER, MAURICE. 1980. *Le Concept d'Empire,* Paris: PUF.

FABIAN, JOHANNES. 1986. *Language and Colonial Power.* Cambridge: Cambridge University Press.

GOPAL, B.R., ed. 1994. *The Rastrakutas of Malkhed.* Bangalore: Mythic Society.

HARDY, FRIEDHELM. 1994. "Creative Corruption: Some Comments on Apabhramsha Literature, Particularly Yogindu." In *Studies in South Asian Devotional Literature: Research Papers, 1988-91,* edited by Alan W. Entwistle and Francoise Mallison. New Delhi: Manohar; Paris: Ecole Francoise d'Extreme-Orient.

HEIDEGGER, MARTIN. 1960. *Der Ursprung des Kunstwerkes.* Stuttgart: Reclam.

INDEN, RONALD. 1990. *Imagining India.* Oxford: Blackwell.

JONES A.H.M. 1964. *The Later Roman Empire.* Oxford: Clarendon Press.

KAVIRAJ, SUDIPTA. 1992a. "Writing, Speaking, Being: Language and the Historical Formation of Identities in India." In *Nationalstaat und sprachkonflikt in Sud-und Sudostasien,* edited by Dagmar Hellmann-Rajanayagam and Dietmar Rothermund. Stuttgart: Steiner.

---------------. 1992b. "The Imaginary Institution of India." In *Subaltern Studies VII: Writings on South Asian History and Society,* edited by Partha Chatterjee and Gyanendra Pandey. Delhi: Oxford University Press.

KULKE, HERMAN. 1990. "Indian Colonies, Indianization or Cultural Convergence: Reflections on the Changing Image of India's Role in South-East Asia." *Semaian* 3: 8-32.

---------------. 1993. *Kings and Cults: State Formation and Legitimation in India and Southeast Asia.* New Delhi: Manohar.

---------------. ed. 1995. *The State in India: 1000-1700.* Delhi: Oxford University Press.

LACAPRA, DOMINICK, 1983. *Rethinking Intellectual History: Texts, Contexts, Language.* Ithaca, N.Y.: Cornell University Press.





LEFORT, CLAUDE. 1986. *The Political Forms of Modern Society.* Edited by John B. Thompson. Cambridge: MIT Press.

LOMBARD, DENYS. 1990. *Le Carrefour javanais, essai d'histoire globale. III: L'heritage des royaumes concentriques*. Paris: Editions de l'Ecole des hautes etudes en sciences sociales.

MAIR, VICTOR H., AND TSU-LIN MEI. 1991. "The Sanskrit Origins of Recent Style Prosody." *Harvard Journal of Asiatic Studies* 51(2): 375-470.

MASICA, COLLIN. 1991. *The Indo-Aryan Languages,* Cambridge: Cambridge University Press.

MACMULLEN, RAMSAY. 1990. *Changes in the Roman Empire: Essays in the Ordinary.* Princeton, NJ: Princeton University Press.

MCGREGOR, R.S. 1984. *Hindi Literature from its Beginnings to the Ninteenth Century.* Vol.8, fasc 6. *A History of Indian Literature.* Weisbaden: Harrassovitz.

---------------. n.d. "Vishnudas (AD 15c) and his Ramayana-katha."

NAGARAJ, D.R. 1996. *Sahitya Kathana.* (In Kannada.) Heggodu: Akshara Prakashana.

NARASIHMACHARYA, R. 1934. *History of Kannada Language.* Mysore: University of Mysore.

---------------. 1971. *Pampabharatadipike.* (In Kannada.) Mysore: University of Mysore Press.

POLLOCK, SHELDON. 1995. "Literary History, Indian History, World History." *Social Scientist* 23 (10-12): 112-42.

---------------. 1996. "The Sanskrit Cosmopolis, 300-1300: Transculturation, Vernacularization, and the Question of Ideology." In *The Ideology and Status of Sanskrit,* edited by Jan E.M. Huben, Leiden: Brill.

---------------. forthcoming. "India in the Vernacular Millenium: Literary Culture and Polity 1000-1500." In *Collective Identities and Political Order,* edited by Shumel Eisenstadt et al. Special Issue of *Daedalus.*

PRED, ALLAN. 1995. "Out of Bounds and Undisciplined: Social Inquiry and the Current Moment of Danger." *Social research,* 62(4): 1065-91.

RAGHAVAN, V. 1963. *Bhoja's Sringaraprakasha,* 2nd ed. Madras: Punarvasu.

REID, ANTHONY. 1990. "An 'Age of Commerce' in Southeast Asian History." *Modern Asian Studies* 24(1): 1-30.

SAHLINS, MARSHALL. 1988. "Cosmologies of Capitalism: The trans-Pacific Sector of the World System." *Proceedings of the British Acad-*

*emy* 74:1-51.
SCAHARFE, HARTMUT. 1977. *Grammatical Literature.* Vol. 5, fasc. 2. *A History of Indian Literature.* Weisbaden: Harrassovitz.
SCOTT, JAMES. 1990. *Domination and the Arts of Resistance: Hidden Transcripts.* New Haven, Conn.: Yale University Press.
SEGAL, JEFFREY, ed. 1993. *International Journal of the Sociology of Language.* Vol. 99. Special number on koines.
SHACKLE, CHRISTOPHER. 1993. "Early Vernacular Poetry in the Indus Valley: Its Contexts and its Character." In *Islam and Indian Regions,* edited by Anna Libera Dallappicola and Stephaine Zingel-Ave Lallemant. Vol. 1. Stuttgart: Franz Steiner Verlag.
SHULMAN, DAVID. 1993. "Remaking a Purana: The Rescue of Gajendra in Potana's Telugu *Mahabhagavatamu.*" In *Purana Pernnis: Reciprocity and Transformation in Hindu and Jain Texts,* edited by Wendy Doniger. Albany: State University of New York Press.
SNELL, RUPERT. 1991. *The Hindi Classical Tradition: A Braj Bhasha Reader.* London: University of London School of Oriental and African Studies.
SWAMY, B.GL. 1975. "The Date of the Tolgappiyam: A Retrospect." *Annals of Oriental Research* (Madras), Silver Jubilee Volume: 292-317.
TARLING, NICHOLAS, ED. 1992. *The Cambridge History of Southeast Asia. Vol 1: From Early times to c. 1800.* Cambridge: Cambridge University Press.
TERWEIL, B.J. 1996. "The Introduction of Indian Prosody among the Thais." In *The Ideology and Status of Sanskrit,* edited by Jan E.M. Huben, Leiden: Brill.
WAGONER, PHILIP. 1996. "Sultan among Hindu Kings: Dress, Titles, and the Islamicization of Hindu Culture at Vijayanagara." *Journal of Asian Studies* 55(4): 851-80.
WALLERSTEIN, IMMANUEL. 1991. *Geoplitics and Geoculture: Essays on the Changing World System.* Cambridge: Cambridge University Press.
WOLTERS, O.W. 1982. *History, Culture, and Region in Southeast Asian Perspectives.* Singapore: Institute of Southeast Asian Studies.
ZUMTHOR, PAUL. 1987. *La lettre et la voix: de la "litterature" medievale.* Paris: Seuile.
ZVELBIL, KAMIL. 1992. *Companion Studies to the History of Tamil Literature.* Leiden: Brill.

# ನೀನಾಸಮ್ ವರದಿಗಳು

### ನೀನಾಸಮ್ ಪ್ರತಿಷ್ಠಾನದ ಕಾರ್ಯಕ್ರಮಗಳು

ನೀನಾಸಮ್ ಪ್ರತಿಷ್ಠಾನವು ಶಾಲೆ-ಕಾಲೇಜುಗಳಲ್ಲಿ ಆಧುನಿಕ ಕನ್ನಡ ನಾಟಕಗಳ ಕುರಿತು ಎರಡು-ಮೂರು ದಿನಗಳ ಕಿರು ಅವಧಿಯ ಶಿಬಿರಗಳನ್ನು ನಡೆಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಈ ಕಮ್ಮಟಗಳಲ್ಲಿ ಅಧ್ಯಯನ-ಉಪನ್ಯಾಸ-ಚರ್ಚೆಗಳಿಗೆ ಪೂರಕವಾಗಿ ಆಯ್ದ ನಾಟಕಗಳ ವಿಡಿಯೋ ಮಾಲಿಕೆಗಳನ್ನು ಬಳಸಲಾಗುತ್ತದೆ. ಇತ್ತೀಚೆಗೆ ೧೯೯೯ನೇ ಡಿಸೆಂಬರ್ ೧೮ ಮತ್ತು ೧೯ ರಂದು ಉಜಿರೆಯ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಕನ್ನಡ ಸಂಘದ ಆಶ್ರಯದಲ್ಲಿ ಉಜಿರೆಯಲ್ಲಿ, ಡಿಸೆಂಬರ್ ೨೫ ಮತ್ತು ೨೬ ರಂದು ಶಿರಸಿಯ ಕಾಲೇಜಿನ ಆಶ್ರಯದಲ್ಲಿ ಶಿರಸಿಯಲ್ಲಿ, ೨೦೦೦ನೇ ಜನವರಿ ೨೨ ಮತ್ತು ೨೩ರಂದು ಸಾಗರದ ಲಾಲ್ ಬಹಾದ್ದೂರ್ ಕಾಲೇಜಿನಲ್ಲಿ ಇಂತಹ 'ಆಧುನಿಕ ಕನ್ನಡ ನಾಟಕ ಅಧ್ಯಯನ' ಶಿಬಿರಗಳು ನಡೆದವು. ೨೦೦೦ನೇ ಜನವರಿ ೧೬ ಮತ್ತು ೧೭ರಂದು ಬ್ರಹ್ಮಾವರ ಎಸ್.ಎಂ.ಎಸ್. ಕಾಲೇಜಿನ ಆಶ್ರಯದಲ್ಲಿ ೨೦ನೇ ಶತಮಾನ ಕನ್ನಡ ಸಾಹಿತ್ಯದ ಕುರಿತು ಅಧ್ಯಯನ ಶಿಬಿರವೊಂದನ್ನು ನಡೆಸಲಾಯಿತು. ಶ್ರೀ ಟಿ.ಪಿ. ಅಶೋಕ ಅವರು ಈ ಎಲ್ಲ ಶಿಬಿರಗಳ ನಿರ್ದೇಶಕರಾಗಿ ಕಮ್ಮಟ ನಡೆಸಿಕೊಟ್ಟರು. ಶ್ರೀಯುತರಾದ ಕಿ.ರಂ. ನಾಗರಾಜ, ಸಿ.ಆರ್. ಜಂಬೆ, ಅಕ್ಷರ ಕೆ.ವಿ. ಸಿ.ವಿ. ಪ್ರಭುಸ್ವಾಮಿಮಠ, ಗುರುರಾವ್ ಬಾಪಟ್, ವೆಂಕಟರಮಣ ಐತಾಳ ಮೊದಲಾದವರು ಸಂಪನ್ಮೂಲ ವ್ಯಕ್ತಿಗಳಾಗಿ ಸಹಕರಿಸಿದ್ದರು.

### ಗಿಡಮೂಲಿಕಾ ವೈದ್ಯಕೀಯ ತರಬೇತಿ ಶಿಬಿರ - ೫

ನೀನಾಸಮ್ ಪ್ರತಿಷ್ಠಾನ ಹಾಗೂ ಗ್ರಾಮಾಂತರ ಸಮುದಾಯ ವಿಜ್ಞಾನಕೇಂದ್ರ ಜಂಟಿಯಾಗಿ ನಡೆಸುತ್ತ ಬಂದಿರುವ ಗಿಡಮೂಲಿಕಾ ವೈದ್ಯಕೀಯ ತರಬೇತಿಯ ಐದನೆಯ ಶಿಬಿರವನ್ನು ೧೯೯೯ನೇ ಡಿಸೆಂಬರ್ ೨೧ ರಿಂದ ೨೪ರ ವರೆಗೆ ನಡೆಸಲಾಯಿತು. ಶ್ರೀಯುತ ವೆಂಕಟರಾಮ ದೈದೋಟ ಹಾಗೂ ಡಾ| ಪತಂಜಲಿ ಕೆ.ವಿ. ಇವರು ಶಿಬಿರವನ್ನು ನಡೆಸಿಕೊಟ್ಟರು. ೬೫ ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕೆಲವು ಔಷಧಗಳನ್ನು ತಯಾರಿಸುವ ಪ್ರಾಯೋಗಿಕ ವಿಧಾನಗಳ ತರಬೇತಿಯನ್ನೂ ಹಾಗೂ ಕಾಡು-ಗುಡ್ಡಗಳಲ್ಲಿ ಸುತ್ತಾಡಿ ನಮ್ಮ ಸುತ್ತಮುತ್ತಲೂ ಇರುವ, ಆದರೂ ಪರಿಚಯ ಹಾಗೂ ಅವುಗಳ ಉಪಯೋಗ ತಿಳಿಯದ, ಅಮೂಲ್ಯ ಗಿಡಮೂಲಿಕೆಗಳನ್ನು ಗುರುತಿಸುವ ಬಗೆಯನ್ನೂ ಈ ಶಿಬಿರದಲ್ಲಿ ಮುಖ್ಯ ವಿಷಯವಾಗಿ ಇಟ್ಟುಕೊಳ್ಳಲಾಗಿತ್ತು.

**ಮಾತುಕತೆ ೫೩**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೬೫೬೪೬

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಶವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಇಪ್ಪತ್ತೈದು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು

ಮುದ್ರಣ: ಅಶ್ವಿನಿ ಗ್ರಾಫಿಕ್ಸ್, ಅರಳೇಪೇಟೆ, ಬೆಂಗಳೂರು

---

**ಫೆಬ್ರವರಿ ೨೦೦೦ ವರ್ಷ ಹದಿನಾಲ್ಕು ಸಂಚಿಕೆ ಒಂದು**

---

೧. ನೀನಾಸಮ್ ವರದಿಗಳು

ನೀನಾಸಮ್ ರಂಗಶಿಕ್ಷಣ ಕೇಂದ್ರ ಪುಟ ೨

೨.ವಿಶ್ವಾತ್ಮಕ ದೇಶಭಾಷೆ

ಷೆಲ್ಡನ್ ಪೊಲಾಕ್ / ಕನ್ನಡಕ್ಕೆ: ಅಕ್ಷರ ಕೆ.ವಿ. ಪುಟ ೩

೩. ನೀನಾಸಮ್ ವರದಿಗಳು

ನೀನಾಸಮ್ ಪ್ರತಿಷ್ಠಾನದ ಕಾರ್ಯಕ್ರಮಗಳು

ಗಿಡಮೂಲಿಕಾ ವೈದ್ಯಕೀಯ ತರಬೇತಿ ಶಿಬಿರ - ೫ ಪುಟ ೭೨

---

**MAATHUKATHE** FEF. 2000 (YEAR 14 ISSUE 1)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.25(TWENTY FIVE ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

## ಅಕ್ಷರ ಪ್ರಕಾಶನ

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

### ಈಚಿನ ಪ್ರಕಟಣೆಗಳು

೧. **ಮಾವಿನಮರದಲ್ಲಿ ಬಾಳೆಯ ಹಣ್ಣು**
(ನಾಟಕ-ರಂಗಭೂಮಿ ಕುರಿತ ಬರಹಗಳು - ಅಕ್ಷರ ಕೆ.ವಿ.) ರೂ.೭೫

೨. **ಅಮೃತ ಮತ್ತು ಗರುಡ**
(ಡಾ. ಡಿ.ಆರ್. ನಾಗರಾಜ್ ಬರಹಗಳ ಮರುಮುದ್ರಣ) ರೂ. ೬೫

೩. **ಪ್ರತಿಭೆಯ ಒಂದು ಪ್ರವಾಹ**
(ಅಕ್ಷರ ಚಿಂತನ ಮಾಲೆ- ಶಿವ ವಿಶ್ವನಾಥನ್ ಬರಹಗಳು-ಅನು:ಅಕ್ಷರ ಕೆ.ವಿ) ರೂ. ೫೦

೪. **ಐತಿಹ್ಯಮಾಲೆಯ ಕಥೆಗಳು**
(ಅಕ್ಷರಚಿಂತನಮಾಲೆ-ಕೊಟ್ಟಾರತ್ತಿಲ್ ಶಂಕುಣ್ಣಿ-ಅನು:ಬಿ.ಆರ್.ವಿ.ಐತಾಳ) ರೂ.೫೦

೫. **ಶತಮಾನದ ಕುಸುಮ**
(ಡಾ. ಕುಸುಮಾ ಸೊರಬ ಕುರಿತ ಬರಹಗಳು-ಸಂ: ನಾಗೇಶ ಹೆಗಡೆ) ರೂ. ೭೫

೬. **ಹಸಿರು ಹಾದಿ**
(ಯಲ್ಲಪ್ಪ ರೆಡ್ಡಿ ಆತ್ಮಕಥನ-ನಿರೂಪಣೆ: ಸತೀಶ್ ಚಪ್ಪರಿಕೆ) ರೂ. ೮೦

೭. **ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ** (ಡಾ.ಡಿ.ಆರ್. ನಾಗರಾಜ್) ರೂ. ೧೨೦

೮. **ಹೋಲೆ... ಹೋಲೆ... ಬೆಳ್ಳಕ್ಕಿಮಾಲೆ** (ಕವನಗಳು-ಶಾ.ಬಾಲುರಾವ್) ರೂ. ೫೦

೯. **ಸಂಗೀತ ಸಂವಾದ** (ಭಾಸ್ಕರ್ ಚಂದಾವರ್ಕರ್-ಅನು: ವೈದೇಹಿ) ರೂ. ೧೦೦

೧೦. **ಮಹಾತ್ಮ** (ನಾಟಕ / ಮುಕುಂದರಾವ್ - ಅನು: ಕೆ.ವಿ. ಸುಬ್ಬಣ್ಣ) ರೂ. ೫೦

೧೧. **ಒಂಟಿ ಧ್ವನಿ** (ಬರಹಗಳು - ಡಾ. ನಿ. ಮುರಾರಿ ಬಲ್ಲಾಳ) ರೂ. ೧೨೦

೧೨. **ಮೌನದ ಮಣಿ** (ಕವನಗಳು - ಎಸ್. ಮಂಜುನಾಥ್) ರೂ. ೪೦

### ಹೊಸ ಪ್ರಕಟಣೆಗಳು

೧೩. **ವೈದ್ಯ ವೈವಿಧ್ಯ** (ವೈದ್ಯಕೀಯ ಬರಹಗಳು-ಡಾ. ಎಚ್.ಎಸ್. ಮೋಹನ್) ರೂ. ೮೦

೧೪. **ಮಹಾಮಾಯಿ** (ನಾಟಕ - ಚಂದ್ರಶೇಖರ ಕಂಬಾರ) ರೂ. ೬೦

೧೫. **ಸಕ್ಕರೆ ಗೊಂಬೆ** (ನಾಟಕ - ವಿವೇಕ ಶಾನಭಾಗ) ರೂ. ೫೫

೧೬. **ಎರಡು ರಷ್ಯನ್ ನೀಳ್ಗತೆಗಳು**
(ಟಾಲ್‌ಸ್ಟಾಯ್ ಮತ್ತು ಗೊಗೋಲ್ ಅನುವಾದ - ಟಿ.ಪಿ. ಅಶೋಕ) ರೂ. ೫೫

೧೭. **ರಂಗಪ್ರಯೋಗ**
(ಅಭಿನಯ, ರಂಗತಂತ್ರಗಳು ಮತ್ತು ರಂಗಸಿದ್ಧತೆಯ ಪರಿಚಯ - ಅಕ್ಷರ ಕೆ.ವಿ.) ರೂ. ೨೦೦

೧೮. **ಬಹುಮುಖ** (ಅಕ್ಷರ ಚಿಂತನ ಮಾಲೆ -
ಮನು ಚಕ್ರವರ್ತಿ, ಅನು: ಎಲ್. ಜಿ. ಮೀರಾ) ರೂ. ೫೫

೧೯. **ಜಾಗತಿಕ ಪರಿಸರ ಚರಿತ್ರೆ** (ಅಕ್ಷರ ಚಿಂತನ ಮಾಲೆ -
ರಾಮಚಂದ್ರ ಗುಹಾ, ಅನು: ಮಾಧವ ಐತಾಳ) ರೂ. ೭೫